To be Continued
in
NEXT ROLL.

END

ನೋಟೀಸು.

ಧಾರವಾಡ ಟ್ರೇನಿಂಗ ಕಾಲೇಜದ ಗಾಯನ ಶಿಕ್ಷಕರು ಸದ್ಯಕ್ಕೆ ಒಂದು ವರ್ಷದ ರಜೆಯನ್ನು ತಕ್ಕೊಂಡಿರುವದರಿಂದ ಅವರ ಸ್ಥಳಕ್ಕೆ ಯೋಗ್ಯ ಶಿಕ್ಷಕರನ್ನು ನೇಮಿಸತಕ್ಕದ್ದಿರುತ್ತದೆ. ಆದಕಾರಣ ಗಾಯನದಲ್ಲಿ ಕೆಳಗೆ ಬರೆದ ಯೋಗ್ಯತೆಯುವರಿದ್ದು, ಸದರೀ ಸ್ಥಳವನ್ನು ಅಪೇಕ್ಷಿಸುವ ಉಮೇದವಾರರು ತಮ್ಮ ಅರ್ಜಿಗಳನ್ನು ೧೯೦೮ ನೇ ಇಸವಿಯ ಡಿಶಂಬರ ಅಖೈರಿನೊಳಗಾಗಿ ನಮ್ಮ ಕಡೆಗೆ ಮುಟ್ಟುವಂತೆ ಕಳಿಸಬೇಕು:—

೧. ಕರ್ನಾಟಕ ಅಥವಾ ಹಿಂದುಸ್ತಾನಿ ಗಾಯನಶಾಸ್ತ್ರದ ಸಂಪೂರ್ಣ ಜ್ಞಾನ, ಮೃದಂಗ, ಮತ್ತು ಫಿಡಲ್ ಹಾಗೂ ವೀಣಾ ಇವುಗಳನ್ನು ಬಾರಿಸುವದು ಸಹಿತ, ಕರ್ನಾಟಕ ಗಾಯನ ಬಲ್ಲವರ ಅವಶ್ಯಕತೆ ಹೆಚ್ಚು ಇರುವುದು.

೨. ಕನ್ನಡ ಕ್ರಮಿಕ ಪುಸ್ತಕಗಳೊಳಗಿನ ಯಾವತ್ತೂ ಪದ್ಯಗಳನ್ನು ಸರಿಯಾದ ರಾಗಗಳಿಂದ ಅನ್ನೋಣ.

೩. ತಕ್ಕಮಟ್ಟಿಗೆ ಈ ದೇಶದ ಮತ್ತು ಯುರೋಪದ ಗಾಯನಶಾಸ್ತ್ರಗಳ ತಾರತಮ್ಯಜ್ಞಾನ. ಈ ಜ್ಞಾನವು ಇದ್ದರೆ ಒಳ್ಳೇದು; ಇಲ್ಲದಿದ್ದರೂ ಪ್ರತಿಬಂಧಕವಿಲ್ಲ.

ಅವಶ್ಯಕಂಡರೆ, ಉಮೇದವಾರರ ಪರೀಕ್ಷೆಯನ್ನು ಕವಿಯಾಟೆಯ ಮುಖಾಂತರ ತಕ್ಕೊಂಡು ಯೋಗ್ಯರೆಂದು ಕಂಡು ಬಂದವರನ್ನು ನೇಮಿಸಲಾಗುವುದು.

ಪರೀಕ್ಷೆಯ ತಾರೀಖು ಹಿಂದಿನಿಂದ ತಿಳಿಸಲ್ಪಡುವುದು. ಸದರೀ ಸ್ಥಳದ ಈಗಿನ ಸಂಬಳವು ತಿಂಗಳಿಗೆ ೩೫ ರೂ. ಇರುತ್ತದೆ. ಮುಂದೆ ೫೦ ರೂ. ಆಗುವ ಸಂಭವವಿರುತ್ತದೆ.

ಧಾರವಾಡ ಟ್ರೇನಿಂಗಕಾಲೇಜ
ತಾ॥ ೨೨—೯—೧೯೦೮

V. B. JOSHI,
ಪ್ರಿನ್ಸಿಪಾಲ

ವಿದ್ಯಾದಾಯಿನಿ.

(A MONTHLY JOURNAL)

ಭಾಗ ೧೬.] ನವಂಬರ್—ಡಿಸೆಂಬರ್. [ಸಂಚಿಕೆ ೧೧.

ಪ್ರೊಬೆಲ್ಲನ ಕ್ರಮಕ್ಕನುಸಾರವಾಗಿ ಮಕ್ಕಳ ವಿದ್ಯಾಭ್ಯಾಸ.

ಈ ವರ್ಷ ದಸರಾ ಮಹೋತ್ಸವದಲ್ಲಿ ನಡೆದ ವಿದ್ಯಾಭ್ಯಾಸ ವಿಷಯಕವಾದ ವಸ್ತುಪ್ರದರ್ಶನದ ಸಂಬಂಧದಲ್ಲಿ ಅನೇಕ ಉಪನ್ಯಾಸಗಳು ನಡೆದುವು. ಪ್ರೊಬೆಲ್ಲನ ಕ್ರಮಕ್ಕನುಸಾರವಾಗಿ ಸಣ್ಣಮಕ್ಕಳ ವಿದ್ಯಾಭ್ಯಾಸವನ್ನು ನಡೆಸುವ ವಿಷಯದಲ್ಲಿ ನಾರ್ಮಲ್ ಸ್ಕೂಲ್ ಅಸಿಸೆಂಟ್ ಮಾಸ್ಟರ್ ಮಿ॥ ರಾ॥ ವೆಂಕಟಸುಬ್ಬಯ್ಯನವರು ಒಂದು ಉಪನ್ಯಾಸವನ್ನು ಮಾಡಿದರು. ಈ ಉಪನ್ಯಾಸದಿಂದ ದಸರಾ ಮಹೋತ್ಸವದಲ್ಲಿ ಮೈಸೂರಿಗೆ ಬಂದಿದ್ದ ಉಪಾಧ್ಯಾಯರಿಗಲ್ಲದೆ ಸಣ್ಣಮಕ್ಕಳ ಶಿಕ್ಷಣದಲ್ಲಿ ನಿರತರಾದ ಇತರ ಉಪಾಧ್ಯಾಯರಿಗೂ ಮಕ್ಕಳ/ಮಾತಾಪಿತೃಗಳಿಗೂ ಪ್ರಯೋಜನವಾಗಬಹುದೆಂದು ತೋರುವುದರಿಂದ ಅದನ್ನು ಇಲ್ಲಿ ಪ್ರಕಟಿಸುವೆವು. ಈ ಉಪನ್ಯಾಸವು ಇಂಗ್ಲೀಷಿನಲ್ಲಿ ನಡೆಯಿತು. ನಾವು ಇಲ್ಲಿ ಇದರ ಕನ್ನಡದ ಪರಿವರ್ತನೆಯನ್ನು ಪ್ರಕಟಿಸುವೆವು. ಈ ಉಪನ್ಯಾಸವು ನಡೆಯುವಕಾಲದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಾದ ಇನ್‌ಸ್ಪೆಕ್ಟರ್ ಜನರಲ್ ಮೆ॥ ಥಾಥಾಸಾಹೇಬರು ಅಗ್ರಾಸನವನ್ನು ವಹಿಸಿದ್ದರು.

ಅಧ್ಯಕ್ಷರೇ, ಮಹನೀಯರೇ,

ನಾನು ಈ ವಿದ್ಯಾಭ್ಯಾಸ ವಿಷಯಕವಾದ ವಸ್ತುಪ್ರದರ್ಶನದ ಸಂಬಂಧದಲ್ಲಿ ಭಾಷಣನಾಡಬೇಕೆಂದು ಹೇಳಿದುದನ್ನು ಒಹಳ ದೊಡ್ಡಮರ್ಯಾದೆಯೆಂದು ಭಾವಿಸುವೆನು. ಈ ಸಭೆಯಲ್ಲಿ ನಾನು ಭಾಷಣನಾಡುವ ವಿಷಯದಲ್ಲಿ ನನ್ನಷ್ಟು ಅಥವ ನನ

ಗಿಂತಲೂ ಅತಿಶಯವಾದ ತಿಳಿವಳಿಕೆಯುಳ್ಳ ಅನೇಕರಿರುವರು, ಆದರೆ ಕಿಂಡರ್‌ಗಾರ್ಟ್ನ್ ಕ್ರಮಕ್ಕನುಸಾರವಾಗಿ ಮಕ್ಕಳ ವಿದ್ಯಾಭ್ಯಾಸವನ್ನು ನಡೆಸುವುದು ಪ್ರಕೃತದಲ್ಲಿ ನನ್ನ ಮುಖ್ಯಕರ್ತವ್ಯವಾಗಿರುವುದರಿಂದ ನನ್ನ ಅನುಭವವನ್ನೂ, ಮತ್ತು ನನ್ನ ದೃಷ್ಟಿಗೆ ಬಿದ್ದಿರುವ ಫಲಗಳನ್ನೂ ತಿಳಿಸುವುದರಿಂದ ಇದೇವಿಧವಾದ ಕೆಲಸದಲ್ಲಿ ನಿರತರಾಗಿರುವವರಿಗೆ ಪ್ರಯೋಜನವಾಗಬಹುದೆಂಬ ಕೋರಿಕೆಯೇ ನನ್ನ ಈ ಪ್ರಯತ್ನಕ್ಕೆ ಕಾರಣವಾಗಿರುವುದು.

ಈಗ ಸುಮಾರು ಹನ್ನೆರಡು ವರ್ಷಗಳ ಕೆಳಗೆ ಮದರಾಸಿನಲ್ಲಿ ಟೀಚರ್ಸ್ ಕಾಲೇಜಿನಲ್ಲಿದ್ದಾಗ ನನಗೆ ಕಿಂಡರ್ ಗಾರ್ಟ್ನ್ ಕ್ರಮದಲ್ಲಿ ಸ್ವಲ್ಪ ಪರಿಚಯವುಂಟಾಯಿತು. ಆದರೆ ಆ ಕಾಲದಲ್ಲಿ ಅಲ್ಲಿ ಓದುತಿದ್ದ ಉಪಾಧ್ಯಾಯರಿಗೆ ಈ ಕ್ರಮದ ವಿಷಯದಲ್ಲಿ ಉಂಟಾಗುತಿದ್ದ ಜ್ಞಾನವು ಅತ್ಯಲ್ಪವಾಗಿತ್ತು. ಅಲ್ಲಿ ನನಗೆ ಉಂಟಾದ ಇಷ್ಟು ಅಲ್ಪವಾದ ತಿಳಿವಳಿಕೆಯೇ ಈ ಕ್ರಮದ ವಿಷಯದಲ್ಲಿ ಉತ್ಸಾಹವನ್ನು ಹುಟ್ಟಿಸಿತು. ಅಂದು ಮೊದಲ್ಗೊಂಡು ಸಣ್ಣಮಕ್ಕಳ ಶಿಕ್ಷಣಕ್ಕೆ ಕಿಂಡರ್‌ಗಾರ್ಟ್ನ್ ಕ್ರಮವೇ ಉತ್ತಮವಾದ ಮಾರ್ಗವೆಂದು ನಾನು ತಿಳಿದೆನು. ನನ್ನ ಮಕ್ಕಳ ಶೈಶವಾವಸ್ಥೆಯಲ್ಲಿ ಅವರ ವಿದ್ಯಾಭ್ಯಾಸವನ್ನು ಈ ಕ್ರಮಕ್ಕನುಸಾರವಾಗಿ ನಡೆಸಿದುದೇ ನನ್ನ ಹೇಳಿಕೆಗೆ ಮುಖ್ಯಪ್ರಮಾಣವಾಗಿರುವುದು. ಅವರನ್ನು ನಾನು ಯಾವ ಎಲಿಮೆಂಟರಿ ಪಾಠಶಾಲೆಗೂ ಕಳುಹಿಸಲಿಲ್ಲ. ಆದರೆ ಅವರ ಶೈಶವಾವಸ್ಥೆಯು ಮುಗಿಯುವ ವರೆಗೂ ಅವರ ವಿದ್ಯಾಭ್ಯಾಸವನ್ನು ಕಿಂಡರ್‌ಗಾರ್ಟ್ನ್ ಕ್ರಮಕ್ಕನುಸಾರವಾಗಿ ನಾನೇ ನಡೆಸುತಿದ್ದೆನು. ನನ್ನ ಈ ಪ್ರಯತ್ನದಿಂದುಂಟಾದ ತೃಪ್ತಿಕರವಾದ ಫಲವು ಈ ಕ್ರಮದಲ್ಲಿ ನನ್ನ ನಂಬಿಕೆಯನ್ನು ಸ್ಥಿರಪಡಿಸಿತು. ಈಗ ಮೂರು ವರ್ಷಗಳ ಕೆಳಗೆ ಕಿಂಡರ್‌ಗಾರ್ಟ್ನ್ ವಿಷಯದಲ್ಲಿ ಒಂದು ಸಣ್ಣಪುಸ್ತಕವನ್ನು ಬರೆದೆನು. ಆ ಪುಸ್ತಕವು ಅಚ್ಚಾಗುತಿದ್ದಾಗ ನನ್ನ ಸ್ನೇಹಿತರಲ್ಲೊಬ್ಬರು ದಯವಿಟ್ಟು ನನಗೋಸ್ಕರವಾಗಿ ಪ್ರೂಫುಗಳನ್ನು ನೋಡಿದರು. ಆ ಪುಸ್ತಕದಲ್ಲಿ ಪ್ರಕೃತಿವಿಮರ್ಶೆಗೂ ಪಾಠಶಾಲೆಯ ತೋಟಕ್ಕೂ ಸಂಬಂಧಪಟ್ಟ ಕೆಲವು ವಾಕ್ಯಗಳಿದ್ದುವು. ನನ್ನ ಸ್ನೇಹಿತರು ತಮಗೆ ಆ ವಿಷಯದಲ್ಲಿ ವಿಶೇಷ ನಂಬಿಕೆಯಿಲ್ಲದುದರಿಂದ ಆ ಅಂಶವನ್ನು ಪುಸ್ತಕದಿಂದ ತೆಗೆಯಬೇಕೆಂದು ಹೇಳಿದರು. ಆದರೆ ನನ್ನ ಬಾಲ್ಯದ ಮೊದಲನೆಯ ಹನ್ನೆರಡು ವರ್ಷಗಳು ನಮ್ಮ ಗ್ರಾಮದಲ್ಲಿ ವಿಶೇಷವಾಗಿ ತೋಟದ ಕೆಲಸದಲ್ಲಿಯೇ ಕಳೆದುವು. ಈಚೆಗೆ ಪ್ರತಿದಿನವೂ ನನಗೆ ಇರುವ ಅ

ಕಾಶದಲ್ಲಿ ಸ್ವಲ್ಪವನ್ನು ತೋಟದ ಕೆಲಸಕ್ಕಾಗಿಯೇ ಉಪಯೋಗಿಸುತಿರುವೆನು. ನನ್ನ ಸಣ್ಣತೋಟದಲ್ಲಿ ಗಿಡಗಳು ಸೊಂಪಾಗಿ ಬೆಳೆಯುವುದನ್ನು ನೋಡುವುದರಿಂದ ಉಂಟಾದ ಸಂತೋಷವು ಈ ವಾಕ್ಯಗಳನ್ನು ತೆಗೆಯಲು ನನ್ನ ಮನಸ್ಸನ್ನು ತಡೆಯಿತು. ಆದುದರಿಂದ ನನ್ನ ಪುಸ್ತಕದಲ್ಲಿ ಆ ವಾಕ್ಯಗಳನ್ನು ಹಾಗೆಯೇ ಬಿಟ್ಟಿನು. ಈಚೆಗೆ ಈ ವಿಷಯದಲ್ಲಿ ಉಂಟಾದ ವಿಶೇಷವಾದ ಅನುಭವವು ನಾನು ಆ ವಾಕ್ಯಗಳನ್ನು ನನ್ನ ಪುಸಕದಲ್ಲಿ ಇಟ್ಟುದು ಸರಿಯೆಂದು ತೋರ್ಪಡಿಸಿರುವುದು. ಮತ್ತು ನನ್ನ ಸ್ನೇಹಿತರಿಗೂ ಈ ವಿಷಯದಲ್ಲಿ ಈಗ ಇದೇ ವಿಧವಾದ ಅಭಿಪ್ರಾಯವು ಇರುವುದೆಂದು ನಾನು ಊಹಿಸುವೆನು. ಕಳೆದ ವರ್ಷ ಮದ್ರಾಸಿನಲ್ಲಿ ನಡೆದ ವಿದ್ಯಾಭ್ಯಾಸ ವಿಷಯಕವಾದ ಪ್ರದರ್ಶನವು ಪಾಶ್ಚಾತ್ಯರಾಜ್ಯಗಳಲ್ಲಿ ಸಣ್ಣಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಈಚೆಗೆ ಎಷ್ಟರಮಟ್ಟಿನ ಅಭಿವೃದ್ಧಿಯುಂಟಾಗಿರುವುದೆಂಬುದರ ವಿಷಯದಲ್ಲಿ ನನಗೆ ವಿಶೇಷವಾದ ತಿಳಿವಳಿಕೆಯನ್ನುಂಟುಮಾಡಿತು. ಆಮೇಲೆ ಕಳೆದ ವರ್ಷ ಇಲ್ಲಿ ನಡೆದ ಪ್ರದರ್ಶನದಿಂದ ಈ ತಿಳಿವಳಿಕೆಯು ಇನ್ನೂ ಹೆಚ್ಚಿತು. ಆದರೆ ಎಷ್ಟು ಪ್ರದರ್ಶನಗಳನ್ನು ನೋಡಿದರೂ ಸಣ್ಣಮಕ್ಕಳ ವಿದ್ಯಾಭ್ಯಾಸ ವಿಷಯದಲ್ಲಿ ವಿಶೇಷ ಅನುಭವವುಳ್ಳ ಉಪಾಧ್ಯಾಯರು ಕೊಡುವ ಉಪನ್ಯಾಸಗಳನ್ನು ಕೇಳುವುದರಿಂದ ಉಂಟಾಗುವ ಜ್ಞಾನವು ಬರಲಾರದು. ಇದರ ಜತೆಗೆ ಇವರು ಸಣ್ಣಮಕ್ಕಳ ವಿದ್ಯಾಭ್ಯಾಸವನ್ನು ನಡೆಸುವ ಮಾರ್ಗವನ್ನೂ ನೋಡುವ ಅವಕಾಶವು ದೊರೆತರೆ ನಮ್ಮ ಜ್ಞಾನವು ಇನ್ನೂ ಬೆಳೆಯುಳ್ಳದಾಗುವುದಲ್ಲವೆ? ನಮ್ಮ ದೇಶದ ಉಪಾಧ್ಯಾಯರಿಗೆ ಇಂತಹ ಅವಕಾಶವನ್ನು ಕಲ್ಪಿಸಿಕೊಡುವುದಕ್ಕಾಗಿಯೇ ನಮ್ಮ ಇನ್‌ಸ್ಪೆಕ್ಟರ್‌ಜನರಲ್ ಸಾಹೇಬರವರು ಇಂಗ್ಲೆಂಡಿನಲ್ಲಿ ಸಣ್ಣಮಕ್ಕಳ ವಿದ್ಯಾಭ್ಯಾಸದಲ್ಲಿ ವಿಶೇಷ ಹೆಸರನ್ನು ಪಡೆದಿದ್ದ ಮಿಸ್ ಲ್ಯಾಟರನ್ನು ಇಲ್ಲಿಗೆ ಕರೆಸಿದರು. ಆದರೆ ದೇವರು ಅವರ ಉದ್ದೇಶವನ್ನು ಪೂರ್ಣವಾಗಿ ನೆರವೇರಿಸಲಿಲ್ಲ. ಮಿಸ್ ಲ್ಯಾಟರವರು ತಮ್ಮ ಕೆಲಸವನ್ನು ಪೂರೈಸುವದಕ್ಕೆ ಮೊದಲೇ ಸ್ವರ್ಗಸ್ಥರಾದುದು ನಮ್ಮ ದೇಶದ ಉಪಾಧ್ಯಾಯರ ದುರ್ದೆಶೆಯೆಂದೇ ಹೇಳಬೇಕಾಗಿರುವುದು. ಇವರು ಕಳೆದ ವರ್ಷ ಇದೇ ಮಂದಿರದಲ್ಲಿ ತಮ್ಮ ಕರ್ತವ್ಯದ ವಿಷಯದಲ್ಲಿ ಹೇಳಿದ ಶ್ಲಾಘನೀಯವಾದ ಉಪನ್ಯಾಸವು ಇಲ್ಲಿ ಈ ದಿವಸ ನೆರೆದಿರುವ ಅನೇಕರ ಮನಸ್ಸಿನಲ್ಲಿ ಇನ್ನೂ ಹೊಸದಾಗಿಯೇ ಇರುವುದೆಂದು ನಾನು ಭಾವಿಸುವೆನು. ಇವರು ಬೆಂಗಳೂರಿನಲ್ಲಿ ಉಪನ್ಯಾಸಗಳನ್ನು ಕೊಡುವಾಗಲೂ, ಮತ್ತು ಇವರ ಕ್ರಮಕ್ಕನುಸಾರವಾಗಿ

ಗೌರ್ನಮೆಂಟ್ ಗರ್ಲ್ಸ್ ಸ್ಕೂಲನ್ನು ನಡೆಸುವಾಗಲೂ ಇವರ ಸಹಾಯಕ್ಕಾಗಿ ಸರ್ಕಾರದವರು ನನ್ನನ್ನು ಕಳುಹಿಸಿದ್ದು ನನ್ನ ಅದೃಷ್ಟವೆಂದೇ ಭಾವಿಸುವೆನು. ಇವರ ಜತೆಯಲ್ಲಿ ನಾನು ಕೆಲಸಮಾಡಿದ ಎರಡು ತಿಂಗಳಲ್ಲಿ ನನಗೆ ವಿಶೇಷವಾದ ಪ್ರಯೋಜನಗಳುಂಟಾಗಿರುವುದರಿಂದ ಈ ಕಾಲವನ್ನು ನನ್ನ ಜೀವಮಾನದಲ್ಲಿ ಒಹಳ ಮುಖ್ಯವಾದ ಭಾಗವೆಂದು ಎಣಿಸುವೆನು. ಅವರ ಜತೆಯಲ್ಲಿ ಕೆಲಸಮಾಡಿದ ಕಾಲವು ಎರಡುತಿಂಗಳಿಗೆ ಬದಲಾಗಿ ಎರಡು ವರ್ಷವಾಗಿರಬಾರದಿತ್ತೇ ಎಂದು ಕೋರುವೆನು. ಅವರು ಬೆಂಗಳೂರಿನಲ್ಲಿ ನಡೆಸಿದ ಕೆಲಸದ ವಿಷಯವನ್ನು ಕುರಿತು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟನ್ನು ಕಳುಹಿಸಿದಾಗ ಮಿಸ್ ಲ್ಯಾಟರವರು ಬೆಂಗಳೂರಲ್ಲಿ ನಡೆಸಿದ ಕೆಲಸದ ಸ್ವರೂಪವನ್ನೂ, ಅದರಿಂದ ತಿಳಿಯಒಹುದಾದ ಮುಖ್ಯವಾದ ಫಲಗಳನ್ನೂ ವರ್ಣಿಸಲು ಪ್ರಯತ್ನಪಟ್ಟನು. ಬೆಂಗಳೂರನ್ನು ಬಿಟ್ಟಾರಭ್ಯ ಇಲ್ಲಿನ ನಾರ್ಮಲ್ ಸ್ಕೂಲಿಗೆ ಸಂಬಂಧಪಟ್ಟ ಪ್ರಾಕ್ಟೀಸಿಂಗ್ ಸ್ಕೂಲಿನ ಸಣ್ಣಮಕ್ಕಳ ವಿದ್ಯಾಭ್ಯಾಸವನ್ನು ಮಿಸ್ ಲ್ಯಾಟರವರ ಉದ್ದೇಶಕ್ಕನುಸಾರವಾಗಿ ನಡೆಸುವುದೇ ನನ್ನ ಮುಖ್ಯಕರ್ತವ್ಯವಾಗಿರುವುದು. ಈ ಕೆಲಸದಿಂದ ನನಗೆ ಕಾಣುವ ಫಲಗಳನ್ನು ತಿಳಿಸುವುದಕ್ಕೆ ಮೊದಲು ತಮ್ಮ ಆಪ್ತಣೆಯಿಂದ ಪ್ರಪಂಚಕ್ಕೆ ಉಪಕಾರಮಾಡಿದವರಲ್ಲಿ ಮುಖ್ಯನಾದ ಒಬ್ಬನಿಂದ ಸ್ಥಾಪಿತವಾದ ಮಕ್ಕಳ ಶಿಕ್ಷಣಕ್ರಮವನ್ನು ಸ್ವಲ್ಪಮಟ್ಟಿಗೆ ವಿವರಿಸುವೆನು. ಫ್ರೆಡರಿಕ್ ಫ್ರೋಬೆಲ್ ಎಂಬುವನೇ ಈ ಕ್ರಮವನ್ನು ಸ್ಥಾಪಿಸಿ ಪ್ರಪಂಚಕ್ಕೆ ದೊಡ್ಡ ಉಪಕಾರವನ್ನು ಮಾಡಿದವನು. ಇವನ ಕ್ರಮವು ಮಕ್ಕಳ ವಿದ್ಯಾಭ್ಯಾಸಕ್ಕೆ ಹೇಗೆ ತಕ್ಕುದು ಎಂಬುದನ್ನು ತಿಳಿಯುವುದಕ್ಕೆ ಮೊದಲು ಮಕ್ಕಳ ಸ್ವಭಾವವೇನು? ಅವರ ವಿದ್ಯಾಭ್ಯಾಸದ ಉದ್ದೇಶವೇನು? ಈ ಯಂಶಗಳನ್ನು ತಿಳಿವುದು ಆವಶ್ಯಕವು. ಈ ತಿಳಿವಳಿಕೆಯಿಂದ ಫ್ರೋಬೆಲ್ಲನ ಕ್ರಮದಲ್ಲಿ ಇರುವ ಗುಣಗಳನ್ನರಿಯುವುದೂ, ಮತ್ತು ನಮ್ಮ ಉದ್ದೇಶವನ್ನು ನೆರವೇರಿಸಲು ಮಕ್ಕಳ ಶಿಕ್ಷಣವನ್ನು ಯಾವರೀತಿಯಲ್ಲಿ ನಡೆಸಬೇಕೆಂಬುದನ್ನು ಗೊತ್ತುಮಾಡುವುದೂ ಸುಲಭವಾಗುವುದು.

ಈಗ ಸ್ವಲ್ಪಕಾಲದವರೆಗೂ ಎಲ್ಲದೇಶಗಳಲ್ಲೂ ಜನರು ಸಣ್ಣಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಗಮನ ಕೊಡುತಿರಲಿಲ್ಲ. ಮಕ್ಕಳಿಗೆ ಭಾಷೆಯ ಪಾಠವನ್ನು ಓದುವ ವಯಸ್ಸು ಬಂದಾಗ ಅವರ ವಿದ್ಯಾಭ್ಯಾಸಕ್ಕೆ ಗಮನಕೊಡುತಿದ್ದರೇ ಹೊರತು ಅಲ್ಲಿಯವರೆಗೆ ಅವರ ಕಾಲವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಲು ಪ್ರಯ

ಷ್ಟಪಡುತಿರಲಿಲ್ಲ. ಸಣ್ಣಮಕ್ಕಳು ಈ ಕಾಲದಲ್ಲಿ ಮುಂಬೆ ಭಾಷೆಯಪಾಠಕ್ಕೆ ಬೇಕಾದ ಕೆಲವು ಶಬ್ದಾರ್ಥಗಳನ್ನೂ ರೂಪಗಳನ್ನೂ ಕಲಿತರೆ ಸಾಕೆಂದು ಉಪಾಧ್ಯಾಯರು ಊಹಿಸಿ ಇವುಗಳನ್ನು ಕಲಿಸಲು ದಂಡವನ್ನು ಧಾರಾಳವಾಗಿ ಉಪಯೋಗಿಸುತಿದ್ದರು. ಪುಸ್ತಕವೆಂಬ ಪ್ರಪಂಚದಲ್ಲಿ ಮಗ್ನರಾಗಿ ಪ್ರಕೃತಿಯೆಂಬ ಪ್ರಪಂಚವನ್ನೇ ಮರೆತಿದ್ದರು. ಆದುದರಿಂದ ಇವರಿಗೆ ಸಣ್ಣಮಕ್ಕಳಲ್ಲಿ ವಿಶೇಷ ಅನುತಾಪವು ಇಲ್ಲದಿದ್ದುದು ಮತ್ತು ಅವುಗೆ ಬೋಧಿಸುವ ಕ್ರಮವು ತಿಳಿಯದಿದ್ದುದೂ ಆಶ್ಚರ್ಯಕರವಲ್ಲ. ಶಿಕ್ಷಕರು ಕ್ರಮಕ್ರಮವಾಗಿ ಇಂತಹ ಅಭಿಸಾಯಗಳನ್ನು ಬಿಡುತಬಂದರು. ಇವರು ಮಕ್ಕಳ ಸ್ವಭಾವವನ್ನು ತಿಳಿದು ಆ ಸ್ವಭಾವಕ್ಕನುಗುಣವಾಗಿ ಪಾಠಕ್ರಮವನ್ನು ಗೊತ್ತುಮಾಡಲು ಪ್ರಯತ್ನಪಡುತ ಬಂದರು. ಹೀಗೆ ಪ್ರಯತ್ನಪಟ್ಟವರಲ್ಲಿ ಕೊಮೆನಿಯಸ್, ರೂಸೊ, ಪೆಸ್ಟಲಾಟ್ಸಿ, ಫ್ರೊಬೆಲ್ ಮೊದಲಾದ ವಿದ್ವಾಂಸರೇ ಅಗ್ರೇಸರರೆಂದು ಹೇಳಬಹುದು. ಈ ವಿದ್ವಾಂಸರು ಬಾಲ್ಯದ ಪ್ರತಿಯೊಂದು ಅವಸ್ಥೆಗೂ ತಕ್ಕ ವಿಲಕ್ಷಣಗಳಿರುವುದೆಂತಲೂ, ಕ್ರಮವಾಗಿ ಶಿಕ್ಷಿಸಲ್ಪಟ್ಟ ಮಗುವೇ ಚೆನ್ನಾಗಿ ಬೆಳೆಸಿದ ಮೊಗ್ಗು ಒಳ್ಳೆಯ ಹೂವಾಗುವಂತೆ ಉತ್ತಮನಾದ ಮನುಷ್ಯನಾಗುವನೆಂತಲೂ ಸ್ಥಿರಪಡಿಸಿರುವರು.

ಈ ವಿದ್ವಾಂಸರು ಮಕ್ಕಳ ಶಿಕ್ಷಣದ ವಿಷಯದಲ್ಲಿ ಗೊತ್ತುಮಾಡಿರುವ ಅಂಶಗಳನ್ನು ತಿಳಿಯುವುದಕ್ಕೆ ಮೊದಲು ಶೈಶವದ ಲಕ್ಷಣಗಳೇನು? ಇವು ಹೇಗೆ ವಿಕಾಸವಾಗುತ ಬರುವುವು ಎಂಬುದನ್ನು ತಿಳಿಯುವುದು ಅವಶ್ಯಕವಲ್ಲವೆ? ಮಗುವಿಗೆ ಪ್ರಪಂಚದ ಜ್ಞಾನವುಂಟಾಗಲು ಇಂದ್ರಿಯಗಳೇ ಆಧಾರವು. ಯಾವ ಇಂದ್ರಿಯದಲ್ಲಿ ಕೊರತೆಯಿದ್ದರೂ ಮೊಗುವಿನ ಜ್ಞಾನದಲ್ಲೂ ಕೊರತೆಯುಂಟಾಗುವುದು. ಇಂದ್ರಿಯಗಳು ಮೊದಲು ವಿಶೇಷ ಪಟುವಾಗಿರುವುದಿಲ್ಲ, ಬರಬರುತ ಪಾಟವವು ಹೆಚ್ಚುವುದು. ಇಂದ್ರಿಯಗಳಿಂದ ತಿಳಿದ ಅಂಶಗಳೇ ಮುಂದಿನ ಜ್ಞಾನಕ್ಕೆಲ್ಲಾ ಆಧಾರವಾಗುವುದರಿಂದ ಇಂತಹ ಅಂಶಗಳು ತಪ್ಪಿಲ್ಲದಂತೆ ತಿಳಿಯುವುದು ಅವಶ್ಯಕವು. ಮೇಲಾಗಿ ಬಾಲ್ಯದಲ್ಲಿ ತಿಳಿದ ಅಂಶಗಳು ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವುದರಿಂದ ಇಂತಹ ಅಂಶಗಳು ಚೆನ್ನಾಗಿಯೂ, ತಪ್ಪಿಲ್ಲದಂತೆಯೂ ತಿಳಿಯುವುದು ಬಹು ಮುಖ್ಯವು. ಮಕ್ಕಳಿಗೆ ಪುಸ್ತಕಾಭ್ಯಾಸದಿಂದ ಇಂದ್ರಿಯಗಳ ಈ ವಿಧವಾದ ಪಾಟವವು ಹೆಚ್ಚಲಾರದು. ಅವರಿಗೆ ಪ್ರಕೃತಿಸಂಸರ್ಗವನ್ನು ಮಾಡಿಸುವುದರಿಂದ ಈ ಪಾಟವವು ಹೆಚ್ಚಲು ಅವಕಾಶವು ದೊರಕುವುದು. ವಿಶೇಷತಃ ಸಜೀವವಾದ

ಪ್ರಕೃತಿಸಂಸರ್ಗದಿಂದ ಮಕ್ಕಳಿಗೆ ಉತ್ಸಾಹವು ಹೆಚ್ಚಿ ಈ ವಿಷಯವಾದ ಪಾಠವಕ್ಕೆ ಬಹಳ ಸಹಾಯವಾಗುವುದು.

ಆದರೆ ಮಕ್ಕಳ ಇಂದ್ರಿಯಪಾಠನಕ್ಕೆ ಮಾತ್ರ ಗಮನಕೊಟ್ಟ ಉಪಾಧ್ಯಾಯನು ತನ್ನ ಕೆಲಸವನ್ನು ಪೂರ್ಣವಾಗಿ ನೆರವೇರಿಸಿದಂತೆ ಭಾವಿಸಲಾಗುವುದಿಲ್ಲ, ಮಗುವು ಪ್ರಪಂಚದಲ್ಲಿ ಜನಿಸುವಾಗ ಪ್ರಾಪಂಚಿಕವಾದ ಜ್ಞಾನವನ್ನು ಉಂಟುಮಾಡುವ ಕೆಲವು ಇಂದ್ರಿಯಗಳಿಂದ ಮಾತ್ರವೇ ಅಲ್ಲ ಈ ಜ್ಞಾನಗಳನ್ನು ಕ್ರಮಪಡಿಸುವ ಮನಸ್ಸಿನೊಡನೆಯೂ ಜನಿಸುವುದು. ಇಂದ್ರಿಯಗಳಿಂದ ಬಂದ ಜ್ಞಾನಾಂಶಗಳ ವಿಷಯದಲ್ಲಿ ಬುದ್ಧಿಯು ಪ್ರವರ್ತಿಸಿ ಅವುಗಳಲ್ಲಿ ಕ್ರಮವನ್ನುಂಟುಮಾಡಬೇಕು. ಆದರೆ ಬಾಲ್ಯದಿಂದಲೂ ಬುದ್ಧಿಗೆ ಈ ವಿಧವಾದ ಪ್ರವೃತ್ತಿಯನ್ನು ಕಲ್ಪಿಸಿದರೆ ಮಾತ್ರ ಅದು ಈ ಕೆಲಸವನ್ನು ತೃಪ್ತಿಕರವಾಗಿ ನಡೆಸುವುದು. ಬುದ್ಧಿಯು ಈ ಪ್ರವೃತ್ತಿಗೆ ಅವಕಾಶವಿರುವುದು ಪುಸ್ತಕಗಳಲ್ಲಲ್ಲ; ಪ್ರಕೃತಿಯಲ್ಲಿ. ಆದರೆ ಮಗುವಿನ ಬುದ್ಧಿಯು ಮನಸ್ಸಿನ ಮುಖ್ಯಭಾಗವಾದರೂ ಮನಸ್ಸಿನಲ್ಲಿರುವುದು ,ಬುದ್ಧಿಯೊಂದೇ ಅಲ್ಲ. ಕ್ರಮವಾಗಿ ಯೋಚಿಸಲ್ಪಟ್ಟ ಶಿಕ್ಷಣಕ್ರಮವು ಮಕ್ಕಳಲ್ಲಿ ಸಹಜವಾಗಿರುವ ರಸಗಳನ್ನು ಗಮನಿಸಬೇಕು. ಈ ರಸಗಳಲ್ಲಿ ಅನುತಾಪ, ಆಶ್ಚರ್ಯ, ಸೌಂದರ್ಯಾಭಿನಿವೇಶ ಮೊದಲಾದ ಕೆಲವನ್ನು ಎಚ್ಚರಿಕೆಯಿಂದ ವೃದ್ಧಿಗೊಳಿಸಬೇಕಾಗುವುದು. ಕೋಪ, ಭಯ, ಗರ್ವ, ಅಸೂಯೆ, ಮುಂತಾದ ಕೆಲವನ್ನು ಬಹಳಮಟ್ಟಿಗೆ ತಗ್ಗಿಸಬೇಕಾಗುವುದು. ಅಥವ ಪೂರ್ಣವಾಗಿ ಮುರಿಯಬೇಕಾಗುವುದು. ಈ ಕೆಲಸವನ್ನು ನೆರವೇರಿಸಲು ಬಾಲ್ಯದಲ್ಲಿಯೇ ಪ್ರಯತ್ನಪಡಬೇಕು. ಇಲ್ಲದಿದ್ದರೆ ಮಕ್ಕಳಲ್ಲಿ ಅನಪೇಕ್ಷಣೀಯವಾದ ಗುಣಗಳು ನೆಲೆಗೊಂಡು ಅವುಗಳನ್ನು ಬಿಡಿಸುವುದು ದುಸ್ಸಾಧ್ಯವಾಗುವುದು. ಮೇಲಾಗಿ ಮಕ್ಕಳಲ್ಲಿ ಕೆಲವು ಸುಶೀಲಗಳನ್ನು ನೆಲೆಗೊಳಿಸುವುದಲ್ಲದೆ ಅವರಿಗೆ ಧರ್ಮಾಧರ್ಮ ವಿವೇಚನಜ್ಞಾನವನ್ನು ಉಂಟುಮಾಡಬೇಕು. ಧರ್ಮ ಸಂದೇಹವುಂಟಾದಕಾಲದಲ್ಲಿ ಕರ್ತವ್ಯವನ್ನು ನಿರ್ಣಯಿಸುವ ಶಕ್ತಿಯನ್ನು ಮಕ್ಕಳಲ್ಲಿ ಉಂಟುಮಾಡಿಕೊಡಬೇಕು. ಮೇಲಾಗಿ ಬಾಲ್ಯದಲ್ಲಿಯೇ ಮಕ್ಕಳಿಗೆ ಮನುಷ್ಯರಲ್ಲಿ ಪರಸ್ಪರ ಇರಬೇಕಾದ ಸಂಬಂಧವನ್ನೂ ಮತ್ತು ಮನುಷ್ಯರಿಗೂ ದೇವರಿಗೂ ಇರಬೇಕಾದ ಸಂಬಂಧವನ್ನೂ ತಿಳಿಸಬೇಕು. ಆದರೆ ಮಕ್ಕಳನ್ನು ಇಷ್ಟುಕಾಲದಲ್ಲಿ ಇಷ್ಟು ಅಂಶಗಳನ್ನು ಬಾಯಿಪಾಠಮಾಡುವ ಯಂತ್ರಗಳಂತೆ ಭಾವಿಸುವ ಉಪಾಧ್ಯಾಯನು ಅವರನ್ನು ಈ ಮಾರ್ಗದಲ್ಲಿ ನಡೆಸಲು

ಅರ್ಹನಾಗಲಾರನು. ಇವನಿಗೆ ಮಕ್ಕಳಲ್ಲಿ ಅನುತಾಪವಿರಬೇಕು. ತಾನು ದೊಡ್ಡವನೆಂದು ದೂರದಲ್ಲಿ ನಿಲ್ಲಕೂಡದು. ಅವರ ಸಮಕ್ಕೆಳಿದು ಅವರ ಮನಸ್ಸಿನಲ್ಲಿ ನಡೆವ ಕಾರ್ಯಗಳನ್ನು ತಿಳಿಯಬೇಕು. ಮಕ್ಕಳ ಶಿಕ್ಷಣದ ಈ ಭಾಗಕ್ಕೆ ಉಪಾಧ್ಯಾಯನ ಮೃದುವಾದ ಹೃದಯವು ಸಹಾಯವಾಗಿರಬೇಕೇ ಹೊರತು ಅವನ ಕೈಯಲ್ಲಿ ಹಿಡಿದ ಉಗ್ರವಾದ ದಂಡವು ಸಹಾಯವಾಗಿರಬಾರದು.

ಶಿಕ್ಷಕನ ಕೆಲಸವು ಇಲ್ಲಿಗೂ ಮುಗಿಯುಲಿಲ್ಲ. ಕಾರ್ಯಾಭಿನಿವೇಶವು ಮಗುವಿನ ಒಂದು ಮುಖ್ಯಲಕ್ಷಣವು. ಮಕ್ಕಳಲ್ಲಿರುವ ಈ ಕಾರ್ಯಾಪೇಕ್ಷೆಯನ್ನು ಸರಿಯಾದ ಮಾರ್ಗಕ್ಕೆ ತಿರುಗಿಸುವುದು ಶಿಕ್ಷಕನ ಕರ್ತವ್ಯವು. ಪ್ರೀತಿಪಾತ್ರವಾದ ವಸ್ತುವಿನ ವಿಷಯದಲ್ಲಿ ಕೆಲಸಮಾಡಲು ಮಕ್ಕಳು ಬಲು ಆಶೆಪಡುವರು. ಆದುದರಿಂದ ಶಿಕ್ಷಕನು ಪ್ರಕೃತಿಯ ವಸ್ತುಗಳ ವಿಷಯದಲ್ಲಿ ಮಕ್ಕಳಿಗೆ ಔತ್ಸುಕ್ಯವನ್ನು ಹುಟ್ಟಿಸಿದರೆ ಅವರು ಯಾವವಿಧವಾದ ಪ್ರೇರಣೆಯೂ ಇಲ್ಲದೆ ಆ ವಸ್ತುಗಳ ವಿಷಯದಲ್ಲಿ ಕೆಲಸಮಾಡತ್ತಿರುತ್ತಿರುವರು. ಮುಂದೆ ಈ ಕಾರ್ಯಾಭಿನಿವೇಶವನ್ನು ಮ್ಯಾನ್ಯುಲ್ ಟ್ರೈನಿಂಗ್ ಪಾಠಗಳಲ್ಲಿ ಉಪಯೋಗಿಸಿಕೊಳ್ಳಬಹುದು. ಈ ರೀತಿಯಲ್ಲಿ ಮಕ್ಕಳಲ್ಲಿ ಸಹಜವಾಗಿರುವ ಕಾರ್ಯಾಪೇಕ್ಷೆಯನ್ನು ಸರಿಯಾದ ಮಾರ್ಗಕ್ಕೆ ತಿರುಗಿಸಿದರೆ ಮುಂದೆ ಅವರಿಗೆ ವಿಶೇಷ ಪ್ರಯೋಜನವಾಗುವುದು. ಮತ್ತು ಅವರ ನಡತೆಯೂ ಕ್ರಮಪಡುವುದು. ಮಕ್ಕಳ ಕಾರ್ಯಾಭಿನಿವೇಶಕ್ಕೆ ಅವರ ದೇಹದಲ್ಲಿರುವ ಜ್ಞಾನಕರಗಳೂ ಕೇಂದ್ರಗಳೂ ಕಾರಣವಾಗಿರುವುವು. ಇವುಗಳ ಶಕ್ತಿಯನ್ನು ಬಾಲ್ಯದಲ್ಲೇ ವೃದ್ಧಿಗೊಳಿಸದಿದ್ದರೆ ಅವು ಆಮೇಲೆ ತಮ್ಮ ಕೆಲಸವನ್ನು ಕ್ರಮವಾಗಿ ನೆರವೇರಿಸಲಾರವು. ಹೀಗೆ ಶಿಕ್ಷಕನು ಮಗುವಿನಲ್ಲಿರುವ ಎಲ್ಲಾ ಅಂಶಗಳಿಗೂ ಗಮನಕೊಟ್ಟರೆ ತನ್ನ ಕೆಲಸವನ್ನು ಪೂರ್ಣವಾಗಿ ನೆರವೇರಿಸಿದಂತಾಗುವುದು. ಮಗುವಿನಲ್ಲಿರುವ ದೈಹಿಕ, ಮಾನಸಿಕ ಶಕ್ತಿಗಳನ್ನು ವೃದ್ಧಿಗೊಳಿಸಿ ಅವನ ನಡತೆಯನ್ನು ತಿದ್ದಿ; ಅವನಲ್ಲಿರುವ ಕಾರ್ಯಾಭಿನಿವೇಶಕ್ಕೆ ಸರಿಯಾದ ಉತ್ತೇಜನವನ್ನು ಕೊಡುವುದೇ ವಿದ್ಯಾಭ್ಯಾಸದ ಉದ್ದೇಶವು. ಈ ಉದ್ದೇಶವನ್ನು ನೆರವೇರಿಸುವುದರಲ್ಲಿ ಕಿಂಟರ್‌ಗಾರ್ಟ್ನ್ ಕ್ರಮವು ಎಷ್ಟರಮಟ್ಟಿಗೆ ಸಹಾಯವಾಡುವುದು ಎಂಬುದನ್ನು ನಾನು ನಿಮಗೆ ತಿಳಿಸಲು ಪ್ರಯತ್ನಪಡುವೆನು. ಆದರೆ ಇದಕ್ಕೆ ಮೊದಲು ಸಣ್ಣಮಕ್ಕಳ ಶಿಕ್ಷಣದ ವಿಷಯದಲ್ಲಿ ಫ್ರೊಬೆಲ್ಲನ ಹಿಂದಿನವರು ಮಾಡಿದ ಪ್ರಯತ್ನವೇನೆಂಬುದನ್ನು ತಿಳಿಯುವುದು ಆವಶ್ಯಕವು. ಫ್ರೊಬೆಲ್ಲನು ಇವರ ಪ್ರ

ಯತ್ನವನ್ನು ಮತ್ತೊಂದು ಸೋಪಾನ ಮುಂದಕ್ಕೆ ತೆಗೆದುಕೊಂಡುಹೋಗಿ ಸಣ್ಣ ಮಕ್ಕಳ ಶಿಕ್ಷಣವು ಯಾವರೀತಿಯಲ್ಲಿ ನಡೆಯಬೇಕೆಂಬುದನ್ನು ವಿಶದವಾಗಿ ತೋರ್ಪಡಿಸಿದನು.

ವಸ್ತು ಸಾಕ್ಷಾತ್ಕಾರದಿಂದ ಬಾಲಪಾಠವು ನಡೆಯಬೇಕೆಂದು ವಾದಿಸಿ ಈಗಿನ ವಿದ್ಯಾಭ್ಯಾಸಕ್ರಮಕ್ಕೆ ತಳಹದಿಯನ್ನು ಹಾಕಿದವನು ಕೊಮಿನಿಯಸ್ ಎಂಬ ವಿದ್ವಾಂಸನು. ಲ್ಯಾಟಿನ್ ಭಾಷೆಯನ್ನು ಕಲಿಸುವ ಪಾಠಶಾಲೆಯಲ್ಲಿ ಇವನು ಓದುತಿದ್ದಾಗ ಅನುಭವಿಸಿದ ತೊಂದರೆಯು ಎಲ್ಲರೂ ಸಂತೋಷದಿಂದ ವಿದ್ಯೆಕಲಿಯಲು ಕುತೂಹಲಪಡುವಂತೆ ಒಂದು ಸುಲಭಮಾರ್ಗವನ್ನು ಕಂಡುಹಿಡಿಯಬೇಕೆಂದು ಇವನನ್ನು ಪ್ರೇರಿಸಿತು. "ವಸ್ತುಗಳಿಲ್ಲದೆ ಶಬ್ದವನ್ನು ತಿಳಿಸಬೇಡಿರಿ, ವಸ್ತುಗಳು ದೊರೆಯದಿದ್ದರೆ ಅವುಗಳ ಪ್ರತಿಕೃತಿಗಳನ್ನಾದರೂ ಉಪಯೋಗಿಸಿರಿ, ಮಕ್ಕಳ ಮನಸ್ಸಿನ ಬೆಳವಣಿಗೆಯು ದೇಹವನ್ನು ಆಶ್ರಯಿಸಿರುವುದರಿಂದ ಮಕ್ಕಳ ದೇಹಾರೋಗ್ಯಕ್ಕೆ ಗಮನ ಕೊಡಿರಿ" ಈ ವಿಧವಾದ ಅಂಶಗಳನ್ನು ತನ್ನ ಜೀವವಿರುವವರೆಗೂ ಎಲ್ಲ ದೇಶಗಳಲ್ಲೂ ಹರಡಲು ಅವನು ಪ್ರಯತ್ನಪಟ್ಟನು. ರೂಸೊ ಎಂಬುವನು ಅವನಕಾಲದ ವಿದ್ಯಾಭ್ಯಾಸವೆಂಬ ಶಾಂತಸಾಗರದಲ್ಲಿ ಅದ್ಭುತವಾದ ಅಲೆಗಳನ್ನುಂಟುಮಾಡಿದನು. ಶಿಕ್ಷಕರ ದೃಷ್ಟಿಯನ್ನು ಪಾಠದಕಡೆಯಿಂದ ಪಾಠವನ್ನೋದುವ ಮಕ್ಕಳಕಡೆಗೆ ಎಳೆದವನೇ ಇವನು. "ಪಾಠಹೇಳುವುದಕ್ಕೆ ಮೊದಲು ನಿಮ್ಮ ಶಿಷ್ಯರ ಸ್ವಭಾವವನ್ನು ತಿಳಿಯಿರಿ. ಬಾಲಕರ ಮನಸ್ಸಿನಲ್ಲಿ ದೊಡ್ಡವರ ಅಭಿಪ್ರಾಯವನ್ನು ತುಂಬಬೇಡಿರಿ, ಅವರ ಶಕ್ತಿಗಳಿಗನುಸಾರವಾಗಿ ಅವರನ್ನು ಬೆಳಸಿರಿ" ಹೀಗೆ ಅವನು ಹೇಳುವನು. ಮಗುವು ಹುಟ್ಟಿದ ಮೊದಲ್ಗೊಂಡು ಹನ್ನೆರಡುವರ್ಷಗಳವರೆಗೆ ಶಿಕ್ಷಕನು ಯಾವ ಅಂಶವನ್ನೂ ಬೋಧಿಸಬಾರದೆಂತಲೂ, ಮಗುವಿನ ಸ್ವಭಾವಕ್ಕನುಸಾರವಾಗಿ ಅದು ವೃದ್ಧಿಹೊಂದಲು ಅವಕಾಶವನ್ನು ಕಲ್ಪಿಸಬೇಕೆಂತಲೂ, ಶಿಕ್ಷಕನು ಮಾರ್ಗದರ್ಶಿಯಾಗಿ ಮಾತ್ರ ಇರಬೇಕೆಂತಲೂ ಇವನು ಹೇಳುವನು. "ಮಗುವು ತನ್ನ ಸುತ್ತಲೂ ಇರುವ ವಸ್ತುಗಳಿಗೆ ಅಧೀನವಾಗಿರುವಂತೆ ತಿಳಿಯಬೇಕೇ ಹೊರತು ಜನರಿಗೆ ಅಧೀನವಾಗಿರುವಂತೆ ತಿಳಿಯಬಾರದು; ಅದರ ಶೈಶವದ ವಿದ್ಯಾಭ್ಯಾಸವು ವಿಶೇಷವಾಗಿ ದೈಹಿಕವಾದುದಾಗಿರಬೇಕು; ಮಗುವಿನ ಇಂದ್ರಿಯ ಪಾಟವಕ್ಕೆ ಗಮನಕೊಡಬೇಕು; ಶೈಶವದಲ್ಲಿ ಮಕ್ಕಳಿಗೆ ಅವರ ಕೈ, ಕಾಲು, ಕಣ್ಣುಗಳೇ ಉಪಾಧ್ಯಾಯರಾಗಿ ಇರಬೇಕು, ಬೋಧನಾರೂಪವಾದ ವಿದ್ಯಾಭ್ಯಾಸವು ಮಕ್ಕಳಿಗೆ ಹನ್ನೆರಡುವರ್ಷಗಳಾದ ತರುವಾಯ ಪ್ರಾರಂಭವಾಗಬೇಕು" ಹೀಗೆ ಅವನು ಹೇಳುವನು. ಈ ತತ್ವಗಳನ್ನು ಮೊದಲು ಆಚರಣೆಗೆ

ತಂದವನು ರೂಸೊ ಅಲ್ಲ, ಪೆಸ್ಟಲಾಟ್ಸಿ ಎಂಬ ದೊಡ್ಡ ವಿದ್ವಾಂಸನು. ಪ್ರಪಂಚಕ್ಕೆ ಉಪಕಾರವನ್ನು ಮಾಡುವುದೇ ಪೆಸ್ಟಲಾಟ್ಸಿಯ ಜೀವಮಾನದ ಮುಖ್ಯೋದ್ದೇಶವಾಗಿತ್ತು; ಈ ಕಾರ್ಯಕ್ಕೆ ವಿದ್ಯಾಭ್ಯಾಸವೇ ಮಾರ್ಗವೆಂದು ಅವನು ಯೋಚಿಸಿದನು. ಅತ್ಯಂತ ಬಡವರ ಕೆಲವು ಮಕ್ಕಳನ್ನು ತಮ್ಮ ಮನೆಯಲ್ಲಿ ಇಟ್ಟುಕೊಂಡು ಅವರನ್ನು ಪ್ರೀತಿಯಿಂದ ಪೋಷಿಸಿ ವ್ಯವಸಾಯವನ್ನೂ ನೇಯ್ಗೆಯನ್ನೂ ಕಲಿಸುತ ಈ ಕಸುಬುಗಳನ್ನು ಕಲಿಯುವಾಗಲೇ ಪಾಠಗಳನ್ನೂ ಕಲಿಸತೊಡಗಿದನು. ಕೆಲವೃತಿಂಗಳುಗಳಲ್ಲೇ ಈ ಮಕ್ಕಳ ಸ್ವಭಾವದಲ್ಲಿ ವಿಶೇಷ ವ್ಯತ್ಯಾಸಗಳು ಕಾಣುತ ಬಂದವು. ಇವರು ಆರೋಗದೃಢಕಾಯರಾದರು; ಇವರ ಮುಖದಲ್ಲಿ ಸಂತೋಷವೂ, ಸತ್ಯವೂ, ತಿಳುವಳಿಕೆಯೂ ಸ್ಫುರಿಸುತ್ತಿದ್ದವು. ಕೈಕೆಲಸಗಳಲ್ಲೂ ಇವಕ್ಕೆ ಸಂಬಂಧಪಟ್ಟ ಪಾಠಗಳಲ್ಲೂ ಇವರು ವಿಶೇಷ ಅಭಿವೃದ್ಧಿಯನ್ನು ತೋರ್ಪಡಿಸಿದರು. ಪೆಸ್ಟಲಾಟ್ಸಿಯು ಸ್ವಾರ್ಟ್ಸ್ ನಗರದಲ್ಲೂ ವರ್ಡ್ ನಗರದಲ್ಲೂ ಮಾಡಿದ ಕೆಲಸಗಳಿಂದ ವಿದ್ಯಾಭ್ಯಾಸದ ವಿಷಯದಲ್ಲಿ ವಿಶೇಷ ಬೆಲೆಯುಳ್ಳ ಫಲಗಳು ಕಂಡುಬಂದವು, ಈ ಫಲಗಳನ್ನು ಮಾರ್ಫ್ ಎಂಬ ವಿದ್ವಾಂಸನು ಈ ರೀತಿಯಲ್ಲಿ ಸಂಗ್ರಹಿಸಿರುವನು.

1. ಭಾಷೆಯನ್ನೂ ಗಣಿತವನ್ನೂ ವಸ್ತುಗಳ ಸಹಾಯದಿಂದ ಕಲಿಸಬೇಕು. ಮನುಷ್ಯನ ಜ್ಞಾನಕ್ಕೆಲ್ಲಾ ವಸ್ತುಗಳೇ ಆಧಾರವಾಗಿ ಇರಬೇಕು.

2. ಎಲ್ಲ ಉಪಾಧ್ಯಾಯರೂ ತಾಯಿತಂದೆಗಳೂ ಆಚರಣೆಗೆ ತರಲು ಅನುಕೂಲವಾಗುವಂತೆ ಪಾಠಕ್ರಮವು ಸುಲಭವಾಗಿ ಇರಬೇಕು.

3. ಪಾಠಶಾಲೆಯು ಆಶ್ವಿಕೆಗೆ ಕ್ರಮವಾದ ಸಂಸಾರದಲ್ಲಿ ಕಾಣುವ ಪ್ರೀತಿಯಂತಹ ಪ್ರೀತಿಯೇ ಆಧಾರವಾಗಿರಬೇಕು.

4. ಮಕ್ಕಳ ವಿದ್ಯಾಭ್ಯಾಸದಲ್ಲಿ ಚಿತ್ರವೂ, ಗಾನವೂ ಮುಖ್ಯವಾಗಿ ಇರಬೇಕು.

5. ಭೂಗೋಳಪಾಠವನ್ನು ಬಾಲಕರ ಸುತ್ತಲೂ ಇರುವ ಭೂಮಿಯ ಪರೀಕ್ಷೆಯಿಂದ ಪ್ರಾರಂಭಿಸಬೇಕು. ಇಂತಹ ಪರೀಕ್ಷೆಯ ಫಲವನ್ನು ಬಾಲಕರು ಮಣ್ಣಿನ ಆಕೃತಿಯಲ್ಲಿ ತೋರ್ಪಡಿಸಿದ ಮೇಲೆ ಅವರಿಗೆ ಆ ಭಾಗದ ನಕ್ಷೆಯನ್ನು ತೋರಿಸಬೇಕು.

6. ಕೈಕೆಲಸವು ಮಕ್ಕಳ ವಿದ್ಯಾಭ್ಯಾಸದ ಒಂದು ಮುಖ್ಯ ಭಾಗವಾಗಿರಬೇಕು.

ಮೇಲೆ ಸ್ವಲ್ಪಮಟ್ಟಿಗೆ ತಿಳಿಸಿರುವ ಅಂಶಗಳಿಂದ ಪೆಸ್ಟಲಾಟ್ಸಿಯು ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಎಷ್ಟು ಮುಖ್ಯವಾದ ಕೆಲಸಗಳನ್ನು ಮಾಡಿದನು ಎಂಬುದು ಗೊತ್ತಾಗುವುದು. ಕೊನೆಯಪರೆವಿಗೂ ಇವನಿಗೆ ಬಡವರಲ್ಲೂ ಅನಾಥರಲ್ಲೂ ಅಪರಿಮಿತವಾದ ಪ್ರೀತಿಯಿದ್ದಿತು. ಪ್ರಪಂಚದ ವಿದ್ಯಾಭ್ಯಾಸಕ್ಕೆ ಇವನಿಂದ ಆಗಿರುವಷ್ಟು ಉಪಕಾರವು ಮತ್ತಾರಿಂದಲೂ ಆಗಿಲ್ಲ.

ವಸ್ತುಗಳ ಸಹಾಯದಿಂದ ಮಕ್ಕಳಿಗೆ ಪಾಠವನ್ನು ಬೋಧಿಸಬೇಕೆಂದು ಪೆಸ್ಟಲಾಟ್ಸಿಯು ಸ್ಥಿರಪಡಿಸಿದನು; ಫ್ರೊಬೆಲ್ಲನು ಇನ್ನೊಂದು ಸೋಪಾನ ಮುಂದಕ್ಕೆ ಹೋಗಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅವರಲ್ಲಿ ಸಹಜವಾಗಿರುವ ಕಾರ್ಯಾಭಿನಿವೇಶವೇ ಕಾರಣವಾಗಿ ಇರಬೇಕೆಂಬುದನ್ನು ಸ್ಥಿರಪಡಿಸಿದನು. ಮಕ್ಕಳಲ್ಲಿ ಸಹಜವಾಗಿರುವ ಕಾರ್ಯಾಪೇಕ್ಷೆಯನ್ನು ಇವನು ವಿದ್ಯಾಭ್ಯಾಸಕ್ಕೆ ಆಧಾರವಾಗಿ ಇಟ್ಟುಕೊಂಡಿದ್ದರಿಂದ, ಅದರ ದೈಹಿಕ ಮಾನಸಿಕ ಶಕ್ತಿಗಳೆಲ್ಲವೂ ವಿದ್ಯಾಭ್ಯಾಸದಲ್ಲಿ ಉಪಯುಕ್ತವಾಗಿ, ವಿದ್ಯಾಭ್ಯಾಸದಿಂದಾಗುವ ಫಲವು ವಿಶೇಷ ಅಧಿಕವಾಯಿತು. ಇವನ ಮತಕ್ಕನುಸಾರವಾಗಿ ವಿದ್ಯಾಭ್ಯಾಸಕ್ರಮವನ್ನು ನಿಷ್ಕರ್ಷಿಸಲು ಬಾಲಕರೇ ಆಧಾರವು ಪಾಠಗಳಲ್ಲ. ಇವನು ಬರೆದಿರುವ "ಮನುಷ್ಯನ ವಿದ್ಯಾಭ್ಯಾಸ" ವೆಂಬ ಪುಸ್ತಕದಿಂದ ವಿದ್ಯಾಭ್ಯಾಸದಲ್ಲಿ ಮೂರು ಉದ್ದೇಶಗಳಿರುವಂತೆ ತೋರುವುದು.

1. ಮಗುವಿಗೂ ಇತರ ಮನುಷ್ಯರಿಗೂ ಇರುವ ಸಂಬಂಧವನ್ನು ತಿಳಿಸಿ ಮಗುವನ್ನು ಜನಸಮುದಾಯದಲ್ಲಿ ವಾಸಿಸುವುದಕ್ಕೆ ಅರ್ಹನನ್ನಾಗಿ ಮಾಡುವುದು.

2 ಮಗುವಿಗೂ ಪ್ರಕೃತಿಗೂ ಇರುವ ಸಂಬಂಧವನ್ನು ಸ್ಪಷ್ಟಗೊಳಿಸುವುದು.

3. ಮಗುವಿಗೂ ದೇವರಿಗೂ ಇರುವ ಸಂಬಂಧವನ್ನು ತಿಳಿಸುವುದು.

ಮಗುವಿನ ಕಾರ್ಯಾಭಿನಿವೇಶನವನ್ನು ಈ ಸಂಬಂಧಗಳನ್ನು ತೋರ್ಪಡಿಸುವ ಕಾರ್ಯಗಳಲ್ಲಿ ಉಪಯೋಗಿಸಿ ಅವುಗಳ ವಿಷಯಕವಾದ ಜ್ಞಾನವನ್ನುಂಟುಮಾಡುವುದೇ ಇವನು ಅನುಮೋದಿಸುವ ಮಾರ್ಗವು. ಈ ಮೂರುವಿಧವಾದ ಸಂಬಂಧಗಳನ್ನು ತಿಳಿಸಲು ಬೇರೆಬೇರೆ ಪ್ರಯತ್ನಗಳು ಅವಶ್ಯಕವೆಂದು ಭಾವಿಸಬಾರದು, ಏಕೆಂದರೆ ಈ ಮೂರು ಅಂಶಗಳು ಪರಸ್ಪರ ಸಮ್ಮಿಳಿತವಾಗಿಯೇ ಇರುವುವು. ಪ್ರಕೃತಿವಿಷಯಕವಾದ ಅನುಭವವನ್ನೂ, ಜನರವಿಷಯಕವಾದ ಅನುಭವವನ್ನೂ ಜತೆಯಲ್ಲೇ ಉಂಟುಮಾಡುವುದರಿಂದ ಒಂದರಿಂದ ಮತ್ತೊಂದಕ್ಕೆ ಸಹಾಯವಾಗಿ ಈ ಯಿರಡು ವಿಷಯಗಳಲ್ಲೂ ಸರಿಯಾದ ಜ್ಞಾನವುಂಟಾಗುವುದು.

ಮನುಷ್ಯರಲ್ಲಿ ಮೌಢ್ಯವು ಹೋಗಿ ನಾಗರೀಕತೆಯು ಹೆಚ್ಚುತ ಬಂದಹಾಗೆಲ್ಲ ಪ್ರಕೃತಿಯ ವಿಷಯದಲ್ಲೂ ದೇವರ ವಿಷಯದಲ್ಲೂ ಜ್ಞಾನವು ಹೆಚ್ಚುತ ಬಂದಿರುವುದು. ಆದುದರಿಂದ ಮಗುವನ್ನು ಸಮಾಧಾನವುದಲ್ಲಿ ವಾಸಿಸುವುದಕ್ಕೆ ಅರ್ಹನನ್ನಾಗಿ ಮಾಡುವಾಗ ಉಳಿದ ಎರಡು ವಿಷಯಗಳನ್ನು ನಾವು ಎಂದಿಗೂ ಮರೆಯಲಾಗುವುದಿಲ್ಲ. ಕಾರ್ಯಾಭಿನಿವೇಶವು ಈ ಕ್ರಮಕ್ಕೆ ಆಧಾರವಾದುದರಿಂದ ಇದರ ರೂಪಭೇದಗಳನ್ನು ಮಕ್ಕಳ ಸ್ವಭಾವದ ಪರೀಕ್ಷೆಯಿಂದ ತಿಳಿಯುವುದು ಅವಶ್ಯಕವು. ಫ್ರೊಬೆಲ್ಲನಿಗೆ ಮಕ್ಕಳ ಸ್ವಭಾವದ ವಿಷಯದಲ್ಲಿ ಅಶಿಕ್ಷಿತವಾಗಿದ್ದ ಜ್ಞಾನಬಲದಿಂದ ಈ ಕಾರ್ಯಾಭಿನಿವೇಶದ ರೂಪಭೇದಗಳನ್ನು ಮುಂದಿನ ರೀತಿಯಲ್ಲಿ ವಿಂಗಡಿಸಿದನು:—

1. ಮಾತನಾಡುವುದು.
2. ಆಡುವುದು.
3. ಪರೀಕ್ಷಿಸುವುದು.
4. ಚಿತ್ರ ಬರೆವುದು.

1900 ನೇ ಇಸವಿಯಲ್ಲಿ ಡಾಕ್ಟರ್ ಡ್ಯೂಯಿ ಎಂಬಾತನು ಮನಶ್ಶಾಸ್ತ್ರದಲ್ಲಿ ತನಗಿದ್ದ ಅಪಾರ ಜ್ಞಾನಬಲದಿಂದ ಮಕ್ಕಳ ಸ್ವಭಾವವನ್ನು ಪರೀಕ್ಷಿಸಿ ಮಕ್ಕಳಲ್ಲಿ ಸಹಜವಾಗಿರುವ ಕಾರ್ಯಾಪೇಕ್ಷೆಯಲ್ಲಿ ಫ್ರೊಬೆಲ್ಲನು ಹಿಂದೆ ನಿಷ್ಕರ್ಷಿಸಿದ್ದ ನಾಲ್ಕು ರೂಪಭೇದಗಳೇ ಇರುವುವೆಂದು ಸ್ಥಿರಪಡಿಸಿದನು. ಮಕ್ಕಳು ತಮ್ಮ ಚಟುವಟಿಕೆಯನ್ನು ಈ ನಾಲ್ಕುರೂಪಗಳಲ್ಲಿ ಉಪಯೋಗಿಸಿ ತಮ್ಮ ಸನ್ನಿವೇಶವನ್ನು ತಮ್ಮ ಸ್ವಾಧೀನಪಡಿಸಿಕೊಳ್ಳಲು ಯತ್ನಿಸುವರು. ಮಕ್ಕಳ ಚಟುವಟಿಕೆಯು ಈ ವಿಧವಾದ ಪ್ರವರ್ತನೆಗೆ ಸರಿಯಾದ ಅವಕಾಶವನ್ನು ಕಲ್ಪಿಸುವುದೇ ಉದ್ದೇಶಪೂರ್ವಕವಾದ ವಿದ್ಯಾಭ್ಯಾಸದ ಕೆಲಸವಾಗಿರುವುದು. ಇಂತಹ ವಿದ್ಯಾಭ್ಯಾಸಕ್ಕೆ ಆದಿಯು ಯಾವುದು ಎಂಬ ಪ್ರಶ್ನೆಯು ಹುಟ್ಟುವುದಷ್ಟೆ. ಮನೆಯೇ ಇಂತಹ ವಿದ್ಯಾಭ್ಯಾಸಕ್ಕೆ ಆದಿಯೆಂದು ಉತ್ತರ ಹೇಳಬೇಕಾಗುವುದು, ಏಕೆಂದರೆ ಮಗುವು ಕಿಂಡರ್‌ಗಾರ್ಟನ್‌ನನ್ನು ಪ್ರವೇಶಿಸುವಾಗ ಮನೆಯಲ್ಲಿ ಏನನ್ನೂ ಕಲಿತುಕೊಂಡು ಬಂದಿಲ್ಲವೆಂದು ಊಹಿಸಲಾಗುವುದಿಲ್ಲ, ಅಥವಾ ಪಾಠಶಾಲೆಯಲ್ಲಿ ನಾವು ಕೂಡಲೇ ಉಪಯೋಗಿಸಲು ಅನುಕೂಲವಾದ ಕ್ರಮವಾದ ತಿಳುವಳಿಕೆಯನ್ನು ಹೊಂದಿರುವುದೆಂತಲೂ ಊಹಿಸಲಾಗುವುದಿಲ್ಲ. ಮೇಲೆಹೇಳಿದ ನಾಲ್ಕುವಿಧವಾದ ಚಟುವಟಿಕೆಗಳು ಕೆಲಸಮಾಡಲು ಉಪಕ್ರಮಿಸಿದ್ದರೂ ಮಕ್ಕಳ ಸ್ವಾಧೀನಕ್ಕೆ ಬಂದಿಲ್ಲ. ಮೇಲಾಗಿ

ಮಕ್ಕಳ ಅನುಭವವು ಅವರ ಅನುಕೂಲಕ್ಕಾಗಿ ಕಲ್ಪಿಸಿದ ಸನ್ನಿವೇಶದಲ್ಲಲ್ಲ ಆಂ ಟಾಗಿರುವುದು ದೊಡ್ಡವರ ಅನುಕೂಲಕ್ಕಾಗಿ ಕಲ್ಪಿಸಿದ ಸನ್ನಿವೇಶದಲ್ಲಿ. ಆವರಿಗೆ ಗೋಚರವಾಗಿರುವ ಅನೇಕ ಅಂಶಗಳು ಅವರಿಗೆ ಅರ್ಥವಿಲ್ಲದವುಗಳಾಗಿ ಇರುವುವು. ಮಗುವಿನ ಈ ಅವಸ್ಥೆಯು ಕಿಂಡರ್‌ಗಾರ್ಟ್ನ್ ಪಾಠಶಾಲೆಯ ಕೆಲಸಕ್ಕೆ ಪ್ರತಿಕೂಲವೂ ಅನುಕೂಲವೂ ಆಗಿರುವುದು. ಉದ್ದೇಶಪೂರ್ವಕವಾದ ವಿದ್ಯಾಭ್ಯಾಸದಲ್ಲಿ ಕಿಂಡರ್‌ಗಾರ್ಟ್ನ್ ಮೊದಲನೆಯ ಸೋಪಾನವಾದುದರಿಂದ ಅದು ಮನೆಯ ಅನುಭವವನ್ನೂ ಪಾಠಶಾಲೆಯ ಅನುಭವವನ್ನೂ ಹೊಂದಿಸಬೇಕಾಗುವುದು. ಈ ಕಷ್ಟವಾದ ಕೆಲಸದಲ್ಲಿ ಕಿಂಡರ್ ಪಾಠಶಾಲೆಗೆ ಸಹಾಯಮಾಡಲು ಮಗುವಿನಲ್ಲಿ ನಿಷ್ಕೃಷ್ಟಪೂರ್ವಾನುಭವವಿಲ್ಲದಿರುವುದು ಒಂದು ದೊಡ್ಡ ತೊಂದರೆಯು. ಅದುವರೆಗೆ ಮಗುವಿನಲ್ಲಿ ಪಾಠಶಾಲೆಯ ಪಾಠದ ರೂಪವಾದ ಪೂರ್ವಾನುಭವವಿಲ್ಲದಿರುವುದು ಕಿಂಡರ್‌ಗಾರ್ಟ್ನ್ ಪಾಠಶಾಲೆಯ ಕೆಲಸಕ್ಕೆ ಒಂದು ಅನುಕೂಲವೆಂತಲೇ ಹೇಳಬೇಕು. ಇಂತಹ ಅನುಭವವಿಲ್ಲದಿರುವುದು ಮಗುವಿನಲ್ಲಿರುವ ರಚನಾ ಶಕ್ತಿಯನ್ನು ಕ್ರಮಮವಾಗಿ ವೃದ್ಧಿಗೊಳಿಸಲು ಅನುಕೂಲವಾಗಿರುವುದು. ಮಗುವು ಜನಸಮುದಾಯದಲ್ಲಿ ವಾಸಿಸುವುದಕ್ಕೆ ಅರ್ಹನಾಗಲು ಮುಂದಿನ ಪಾಠಗಳು ಆವಶ್ಯಕವೆಂದು ಫ್ರೊಬೆಲ್ಲನು ಹೇಳುವನು. ಇವು ಯಾವುವೆಂದರೆ:—

1. ಸ್ತೋತ್ರಗಳ ಸಹಾಯದಿಂದ ಮತಸಂಬಂಧವಾದ ತಿಳುವಳಿಕೆ
2. ಮನಸ್ಸಿಗೆ ಆಧಾರವಾದ ದೇಹದ ಆರೋಗ್ಯವನ್ನು ಕಾಪಾಡುವುದು.
3. ಭಾಷೆಯ ಜ್ಞಾನ.
4. ಹೋಲಿಕೆಗೋಸ್ಕರ ಸಂಖ್ಯೆಗಳ ಜ್ಞಾನ.
5. ಬಾಲಕರು ತಮ್ಮ ಮನಸ್ಸಿನ ಅಭಿಪ್ರಾಯಗಳನ್ನು ತಿಳಿಸಲು ಮೃದುವಾದ ಮತ್ತು ಕಠಿಣವಾದ ವಸ್ತುಗಳ ಉಪಯೋಗ.
6. ಚಿತ್ರ ಮತ್ತು ಬಣ್ಣಗಳ ಜ್ಞಾನ.
7. ಉದ್ದೇಶಪೂರ್ವಕವಾದ ಮತ್ತು ಬಾಲಕರ ಇಚ್ಛಾನುಸಾರವಾದ ಆಟಗಳು.
8. ಕಥೆಗಳು.
9. ಪಾಠಶಾಲೆಗೂ ಮನೆಗೂ ಸಂಬಂಧಪಟ್ಟ ಇತರ ಕೆಲಸಗಳು.

ಮೇಲೆ ಹೇಳಿರುವ ಕೆಲಸಗಳನ್ನು ನಡೆಸಲು ಮುಂದಿ ಅಂಶಗಳು ಆಧಾರವಾಗಿ ಇರಬೇಕೆಂದು ಫ್ರೊಬೆಲ್ಲನು ಹೇಳುವನು ಮತ್ತು ಹೀಗೆ ಆಧಾರವಾಗಿ

ಇಟ್ಟುಕೊಳ್ಳಲು ಕಾರಣವನ್ನೂ ತಿಳಿಸುವನ್ನು. ಮಗುವು ತನಿಗೆ ವಿಶೇಷ ಸಂಬಂಧವುಳ್ಳ ಅಥವಾ ತನ್ನ ಸವಿಾಪದಲ್ಲಿರುವ ವಸ್ತುಗಳನ್ನು ವಿಶೇಷ ಆದರದಿಂದ ನೋಡುವುದರಿಂದ ಇವುಗಳನ್ನೇ ನಮ್ಮ ಕೆಲಸಗಳಿಗೆ ಆಧಾರವಾಗಿ ಇಟ್ಟುಕೊಳ್ಳಬೇಕು. ಮಗುವು ಕುಳಿತುಕೊಳ್ಳುವ ಕೊಠಡಿಯಲ್ಲಿ, ವಾಸಮಾಡುವ ಮನೆಯಲ್ಲಿ, ಮನೆಗೆ ಸೇರಿದ ತೋಟದಲ್ಲಿ ಮತ್ತು ಹೊಲದಲ್ಲಿ, ಮಗುವು ಓದುವ ಪಾಠಶಾಲೆಯಲ್ಲಿ, ಅಥವಾ ವಾಸಿಸುವ ಗ್ರಾಮದಲ್ಲಿರುವ ವಸ್ತುಗಳೇ ನಮ್ಮ ವಿದ್ಯಾಭ್ಯಾಸಕ್ಕೆ ಆಧಾರವಾಗಿ ಇರಬೇಕೆಂದು ಅವನು ಹೇಳುವನು.

ಇದುವರೆಗೂ ನಾನು ಕಿಂಡರ್‌ಗಾರ್ಟ್ನ್ ಶಿಕ್ಷಣದ ಒಂದುಭಾಗವನ್ನು—ಮಗುವನ್ನು ಸಮುದಾಯದಲ್ಲಿ ವಾಸಿಸುವುದಕ್ಕೆ ಅರ್ಹನಾಗಿ ಮಾಡುವ ಭಾಗವನ್ನು—ಕುರಿತು ಮಾತನಾಡುತಿರುವೆನು. ಈ ಕ್ರಮದ ಇನ್ನೊಂದುಭಾಗಕ್ಕೆ ಗಮನಕೊಡದಿದ್ದರೆ ಇದು ಅರ್ಥವಿಲ್ಲದ ಕ್ರಮವಾಗುವುದು. ಮನುಷ್ಯನ ಲೋಕಾನುಭವಕ್ಕೆ ಆಧಾರವಾದ ಪ್ರಕೃತಿಯನ್ನು ಇಂತಹ ಅನುಭವದಿಂದ ಪ್ರತ್ಯೇಕಿಸಲಾಗುವುದಿಲ್ಲ. ಪ್ರಕೃತಿಯ ಪರೀಕ್ಷೆಯನ್ನು ಎರಡು ಉದ್ದೇಶಗಳಿಂದ ನಡೆಸಬಹುದು:—

1. ಪ್ರಕೃತಿಯನ್ನು ಪರೀಕ್ಷಿಸಿ ತಿಳಿದ ಅಂಶಗಳನೆಲ್ಲ ಕ್ರೋಡಿಕರಿಸಿ ನಮ್ಮ ಉಪಯೋಗಕ್ಕೆ ಅನುಕೂಲವಾದ ನಿಯಮಗಳನ್ನು ಮಾಡಿಕೊಳ್ಳಬಹುದು.

2. ಅಥವಾ ಪ್ರಕೃತಿಗೂ ಮನುಷ್ಯನಿಗೂ ಇರುವ ಸಂಬಂಧವೇನು, ಪ್ರಕೃತಿಯು ಎಷ್ಟರ ಮಟ್ಟಿಗೆ ದೇವರ ಮಹಿಮೆಯನ್ನು ತೋರ್ಪಡಿಸುವುದು ಎಂಬ ಅಂಶಗಳನ್ನು ತಿಳಿಯಲು ಪ್ರಕೃತಿ ವಿಮರ್ಶೆಯನ್ನು ಕೈಕೊಳ್ಳಬಹುದು.

ಫ್ರೊಬೆಲ್ಲನು ಪ್ರಕೃತಿ ಪರೀಕ್ಷೆಯನ್ನು ಮಕ್ಕಳ ವಿದ್ಯಾಭ್ಯಾಸದಲ್ಲಿ ಒಂದು ಭಾಗವನ್ನಾಗಿ ಮಾಡಿರಲು ಎರಡನೆಯ ಉದ್ದೇಶವೇ ಕಾರಣವೆಂದು ತೋರುವುದು. ಈ ವಿಷಯದಲ್ಲಿ ಅವನು ಹೇಳುವುದೇನೆಂದರೆ "ದೇವರ ಮಹಿಮೆಯನ್ನು ತೋರಿಸುವ ಮನುಷ್ಯನ ಕೆಲಸಗಳನ್ನು ನೋಡುವುದು ಎಲ್ಲರಿಗೂ ಸುಲಭಸಾಧ್ಯವಲ್ಲ, ಆದರೆ ಈ ಮಹಿಮೆಯನ್ನು ತೋರಿಸುವ ಪ್ರಕೃತಿಗೆ ಸಂಬಂಧಪಟ್ಟ ವಸ್ತುಗಳು ಎಲ್ಲೆಲ್ಲಿಯೂ ಯಥೇಚ್ಛವಾಗಿ ಇರುವುವು. ಮೇಲಾಗಿ ಪ್ರಕೃತಿಯ ವಸ್ತುಗಳಲ್ಲಿ ದೇವರ ಮಹಿಮೆಯು ಸ್ಪಷ್ಟವಾಗಿ ಕಾಣುವಂತೆ ಮನುಷ್ಯನ ಕೆಲಸಗಳಲ್ಲಿ ಕಾಣುವುದಿಲ್ಲ" ಮತ್ತೊಂದು ಸ್ಥಳದಲ್ಲಿ ಫ್ರೊಬೆಲ್ಲನು ಬರೆದಿರುವುದೇನೆಂದರೆ "ಬಿಸಿಲಿನಲ್ಲಿ ಪ್ರಕಾಶಿಸುವ ಪರ್ವತಗಳ ಮೇಲೆ, ಕನ್ನಡಿಯುಂತೆ ನುಣುವಾಗಿಯೂ ಸ್ಪಟಿಕದಂತೆ

ನಿರ್ಮಲವಾಗಿಯೂ ಇರುವ ಸರೋವರದ ತೀರದಲ್ಲಿ, ಅಥವಾ ಎತ್ತರವಾದ ಮರಗಳ ನೆರಳಿನಲ್ಲಿ ಸಂಚರಿಸುವಾಗ ದೇವರ ಮಹಿಮೆಯನ್ನು ವಿಶೇಷವಾಗಿ ತೋರ್ಪಡಿಸುವ ಪ್ರಕೃತಿ ವಿಷಯಕವಾದ ಅಭಿಪ್ರಾಯಗಳು ನನ್ನ ಮನಸ್ಸಿನಲ್ಲಿ ತುಂಬಿದವು, ಇಂತಹ ಅಂಶಗಳನ್ನು ತಿಳಿಯುಲು ಮನುಷ್ಯನ ಆತ್ಮಕ್ಕೆ ದೇವರು ಶಕ್ತಿಯನ್ನು ಕೊಟ್ಟಿರುವನಲ್ಲ ಎಂದು ನಾನು ಬಹಳವಾಗಿ ಸಂತೋಷಪಟ್ಟೆನು." ಇಂತಹ ಅಂಶಗಳನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು ಪ್ರೊಬೆಲ್ಲನು ಪ್ರಕೃತಿ ವಿಮರ್ಶೆಯನ್ನು ತನ್ನ ಶಿಕ್ಷಣಕ್ರಮದಲ್ಲಿ ಒಂದು ಮುಖ್ಯ ಭಾಗವನ್ನಾಗಿ ಮಾಡಿರುವನು. (ಸಶೇಷ).

ಗ ಣಿ ತ .

(1) ಒಬ್ಬನಲ್ಲಿ 1 ಡಬ್ಬಾ ಸೀಮೆಎಣ್ಣೆ ಇತ್ತು ಅದರಲ್ಲಿ $\frac{1}{2}$ ಭಾಗವನ್ನು ಮಾರಿದನು ಉಳಿದ್ದರ $\frac{2}{7}$ ಭಾಗವನ್ನು ಮನೆಗೆ ಉಪಯೋಗಿಸಿಕೊಂಡು ನಿಂತದ್ದರ $\frac{3}{5}$ ಭಾಗವನ್ನು ಬೇರೆ ಡಬ್ಬಾಕ್ಕೆ ಸುರಿದನು ತರುವಾಯ ಅದರಲ್ಲಿ $4\frac{1}{3}$ ಸೀಸಾ ಎಣ್ಣೆ ಉಳಿದಿದ್ದರೆ ಮೊದಲು ಆ ಡಬ್ಬಾದಲ್ಲಿದ್ದದ್ದು ಎಷ್ಟು ಸೀಸಾ ಎಣ್ಣೆ?

(2) ಒಬ್ಬನಲ್ಲಿ 1 ಡಬ್ಬಾ ಎಣ್ಣೆ ಇತ್ತು ಅದರಲ್ಲಿ $\frac{1}{3}$ ಭಾಗವನ್ನು ಮನೆಗೂ ಉಳಿದಿದ್ದರ $\frac{2}{7}$ ಭಾಗವನ್ನು ಮಾರಿಗೆಗೂ, ತರುವಾಯ ನಿಂತಿದ್ದರ $\frac{3}{5}$ ಭಾಗವನು ಎರವಾಗಿಯೂ, ಉಪಯೋಗಿಸಿದನು. ನಂತರ ಅದರಲ್ಲಿ 9 ಸೀಸಾ ಎಣ್ಣೆ ಇದ್ದರೆ ಒಟ್ಟು ಆ ಡಬ್ಬಾದಲ್ಲಿದ್ದ ಸೀಸಾ ಎಷ್ಟು? ಯಾವ ಯಾವ ರೀತಿ ಎಷ್ಟೆಷ್ಟು ಸೀಸಾ ವಿಲೇವಾರಿ ಮಾಡಿದನು?

(3) ಕೆಲವು ಜನಗಳು ಕೆಲಸವನ್ನು 25 ದಿನಗಳಲ್ಲಿ ಮಾಡುವರು 10 ಜನಗಳು ಬಾರದ್ದರಿಂದ ಕೆಲಸ ಮುಗಿಯಲು ಗೊತ್ತಾದದಿನಕ್ಕಿಂತಲೂ 5 ದಿನ ಹೆಚ್ಚಾಗಿಹಿಡಿಯಿತು. ಹಾಗಾದರೆ ಮೊದಲಿನ ಜನರೆಷ್ಟು?

(4) 910 ರಿಂದ ನಿಶ್ಶೇಷವಾಗಿ ಭಾಗವಾಗುವ ಮತ್ತು ಅತಿ ದೊಡ್ಡದಾದ 6ಅಂಕೆಗಳುಳ್ಳ ಸಂಖ್ಯೆ ಯಾವುದು. 999180.

(5) 809 ರಿಂದ ನಿಶ್ಶೇಷವಾಗಿ ಭಾಗವಾಗುವ ಮತ್ತು 8 ಅಂಕೆಗಳುಳ್ಳ ಕನಿಷ್ಟ ಸಂಖ್ಯೆ ಯಾವುದು?

(6) ಅ ಮತ್ತು ಕ ಎಂಬವರಿಗೆ ಕೆಲಸ ಹಣ ಹಂಚಲ್ಪಟ್ಟಿತು ಅವರ ಭಾಗವು 1:2 ರಂತೆ ಇದೆ. ಕನಭಾಗಕ್ಕೆ ಬಂದ ರೂ 378ಆಣೆ 5 ಪೈ 10 ಆದರೆ ಅನಭಾಗಕ್ಕೆ ಬಂದ ಹಣವೆಷ್ಟು? ಮತ್ತು ಒಟ್ಟು ಹಣವೆಷ್ಟು?

ಉತ್ತರ ಒಟ್ಟು ಹಣ ರೂ 567—8—9.

(7) ಕ ಮತ್ತು ಬಿ ಎಂಬಿಬ್ಬರಿಗೆ ಕೆಲವು ಹಣವು 2:7 ರ ಪ್ರಮಾಣದಂತೆ ಹಂಚಲ್ಪಟ್ಟಿತು ಕ ನ ಭಾಗಕ್ಕೆ $\frac{2}{7}$ ರೂ ಬಂದರೆ ಒಟ್ಟು ಮೊತ್ತವೆಷ್ಟು? ಬಿ ಗೆ ಬಂದ ಮೊಬಲಗೆಷ್ಟು?

ಒಟ್ಟು ಮೊಬಲಗು ರೂ. 999 – 9 – 9.
ಕ ನ ಭಾಗಕ್ಕೆ ರೂ. 222—2 – 2.

(8) 7 ಜನರು 3 ದಿವಸದಲ್ಲಿ 28 ಗಜದುದ್ದದ ಕಾಲಿವೆಯನ್ನು ತೋಡಿದರೆ 54 ಜನರು ಎಷ್ಟು ದಿನದಲ್ಲಿ 360 ಗಜದ ಕಾಲಿವೆಯನ್ನು ತೋಡುವರು?

ಉ. 5 ದಿನಗಳಲ್ಲಿ.

(9) 9 ಜನರು 10 ದಿನಗಳಲ್ಲಿ 10 ಗಜದುದ್ದ 2 ಅಡಿ ಅಗಲದ ಗೋಡೆಯನ್ನು ಹಾಕುವರು. 25 ಗಜದುದ್ದ $2\frac{1}{2}$ ಅಡಿ ಅಗಲ ಇರುವ ಗೋಡೆಯನ್ನು 5 ದಿನಗಳಲ್ಲಿ ಹಾಕಲು ಈಗಿರುವ ಜನರ ಜೊತೆಗೆ ಎಷ್ಟು ಜನರನ್ನು ಸೇರಿಸಬೇಕು?

ಉ. 36 ಜನಗಳು.

(10) ಒಬ್ಬ ಹೆಂಗಸು ಸೇರಿಗೆ 4 ದುಡ್ಡಿನಂತೆ 15 ಸೇರು ಎಮ್ಮೆಯ ಹಾಲನ್ನೂ, ಸೇರು 1ಕ್ಕೆ 6 ದುಡ್ಡಿನಂತೆ 25 ಸೇರು ಹಸುವಿನ ಹಾಲನ್ನೂ ತೆಗೆದು 3:5 ರ ಪ್ರಮಾಣದಂತೆ ಬೆರಸಿ ಸೇರು 1ಕ್ಕೆ 5 ದುಡ್ಡಿನಂತೆ ಮಾರುತ್ತಾಳೆ ಇವಳಿಗೆ ಸೇಕಡಾ ಲಾಭವೆಷ್ಟು ಬರುವುದು?

(11) ಸಮ ಚತುರ್ಭುಜಾಕೃತಿ ಹೊಲದ 1 ಬಾಹು 1 ಫರ್ಲಾಂಗ್ ಯಿರಲು ಇದರಷ್ಟೆ ವಿಸ್ತಾರವುಳ್ಳ ಮತ್ತು ಉದ್ದ ಅಗಲದಲ್ಲಿ 4:1 ಪ್ರಮಾಣದಲ್ಲಿರುವ ಆಯತಾಕಾರವಾದ ಹೊಲದ ಸುತ್ತಳತೆಯು ಎಷ್ಟು?

ರೀತಿ:— 1 ಫರ್ಲಾಂಗ್ = 220 ಗಜಗಳು,

ಸಮಜ ಹೊಲದ ವಿಸ್ತಾರ——— 1 ಬಾಹುವಿನ ವರ್ಗ.

∴ ———— 220×220

ಸಮಭುಜಾಕೃತಿ ಹೊಲದ ವಿಸ್ತಾರವು—

48100 ಚದರಗಜಗಳಾದಂತಾಯಿತು – ಇದೆ ಆಯತಾಕರದ ಹೊಲದ ವಿಸ್ತಾರಕ್ಕೆ ಸಮವು.

∴ ಆ ಆಯತಾಕಾರ ಹೊಲದ ವಿಸ್ತಾರ——48400 ಚ. ಗ.

∴ ಆ. ಆಯತಾ. ಕಾ. ಹೊ. ಉದ್ದ: ಅಗಲ ∴ 4:1 = 48400

∴ ಉದ್ದ. ಅಗಲ = 440:110 ಗಜಗಳು.

ಆ ಆಯತಾಕಾರವಾದ ಹೊಲ =

ಆಯತಾಕಾರ ಹೊಲದ ಸುತ್ತು = 2 ಉದ್ದ + 2 ಅಗಲ

∴ ———— ———— $880 + 220 = 1100$ ಗಜಗಳು.

ಭೂವಿವರಣೆ—ಅಮೆರ್ಜಾನ್.

(ಉಪಕರಣ—ವರ್ಲ್ಡ್ ಮ್ಯಾಪ್ ಮತ್ತು ದಕ್ಷಿಣಅಮೇರಿಕ ಮ್ಯಾಪ್)

ವಿಷಯ.	ಬೋಧನಾಕ್ರಮ.
ಪೀಠಿಕೆ—ಆಯಾಯ ಕಾಲದಲ್ಲಿನ ಸೆಕೆ ಚಳಿಗಳ ಹೆಚ್ಚು ಕಡಮೆಯನ್ನು ತಿಳಿಯಲು ಋತುಗಳನ್ನು ಗೊತ್ತುಮಾಡಿರುವರು. ಯಾವಯಾವ ದೇಶಗಳಲ್ಲಿ ಯಾವರೀತಿ ಸೆಕೆ ಛಳಿಗಳು ಇರುವುವೆಂಬುದನ್ನು ತಿಳಿಯಲು ವಲಯಗಳನ್ನು ಗೊತ್ತುಮಾಡಿರುವರು.	ಇದನ್ನು ಬಾಲಕರ ಅನುಭವದಿಂದ ಹೇಳಿಸಿ ವಲಯುಗಳನ್ನು ವರ್ಲ್ಡ್ ಮ್ಯಾಪಿನಲ್ಲಿ ತೋರಿಸುವಂತೆ ಮಾಡಿ, ಉಷ್ಣವಲಯದಲ್ಲಿರುವ ಖಂಡಗಳನ್ನು ಹೇಳಿಸಿ, ಬಾಲಕರಿಗೆ ಅಪರಿಚಿತವಾಗಿರುವ ದಕ್ಷಿಣ ಅಮೆರಿಕಾ ಖಂಡದ ವಿಷಯವನ್ನು ಹೇಳುವುದು.
1. ದಕ್ಷಿಣ ಅಮೇರಿಕದ ಸ್ವಭಾವಿಕವಾದ ಲಕ್ಷಣ:— 20000 ಅಡಿ ಎತ್ತರವುಳ್ಳ ಆಂಡೀಸ್ ಎಂಬ ಪರ್ವತಶ್ರೇಣಿಯು ಪಶ್ಚಿಮದಲ್ಲಿ ಎರೆಬಿಡದೆ ಹಬ್ಬಿಕೊಂಡಿದೆ. ಪೂರ್ವದಲ್ಲಿ ಅಲ್ಲಲ್ಲಿ ಸಣ್ಣ ಪರ್ವತಗಳು ಬಿಡಿಬಿಡಿಯಾಗಿ ಹಬ್ಬಿದೆ.	ಇದನ್ನು ಮ್ಯಾಪಿನ ಸಹಾಯದಿಂದ ಹೇಳಿಸುವುದು ಮತ್ತು ಇಂಡಿಯಾದಲ್ಲಿನ ಪಶ್ಚಿಮಘಟ್ಟ, ಪೂರ್ವಘಟ್ಟಗಳಿಗೆ ಹೋಲಿಸುವೆನು ಅಲ್ಲಿನ ನದಿಗಳು ಹರಿಯುವುದರ ಸಹಾಯದಿಂದ ಪಶ್ಚಿಮಭಾಗವು ಎತ್ತರವಾಗಿರುವುದೆಂಬುದನ್ನು ಹೇಳಿಸಿ ಆಂಡೀಸ್ ಪರ್ವತದ ಎತ್ತರವನ್ನು ತಿಳಿಸಿ ಹಲಗೆಯ ಮೇಲೆ ಬರೆದು ಹಿಮಾಲಯ ಪರ್ವತಕ್ಕೆ ಹೋಲಿಸುವೆನು. ಇದರಿಂದ ಈ ಪರ್ವತಶ್ರೇಣಿಯು ಬಹು ದೊಡ್ಡದೆಂಬುದನ್ನು ಹೊರಡಿಸುವೆನು.
2. ಅಮೆಜಾನ್ ನದಿ. (1) ಆಂಡೀಸ್ ಪರ್ವತದಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ.	ಇದನ್ನು ಮ್ಯಾಪಿನ ಸಹಾಯದಿಂದ ಹೇಳಿಸುವೆನು.
(2) ಇದರ ಉದ್ದ 4000 ಮೈಲಿಗಳು.	ಸಿಂಧು, ಗಂಗೆ ಮುಂತಾದ ಬಾಲಕರಿಗೆ ತಿಳಿದಿರುವ ನದಿಗಳಿಗೆ ಹೋಲಿಸಿ ಬಾಲಕರಿಂದಲೇ ಸ್ಥೂಲವಾಗಿ ಹೇಳಿಸುವೆನು. ಇದರ ಉದ್ದವನು ಎಷ್ಟೆಂದು ಹೇಳುವೆನು.

(3) ಈ ನದಿಯ ಜಲಾನಯನ ಭೂಮಿಯು ಯೂರೋಪ ಖಂಡದಷ್ಟು ವಿಸ್ತಾರವಾಗಿದೆ.

ಇದನ್ನೂ ಯೂರೋಪ ಖಂಡವನ್ನೂ ವ್ಯಾಪಿಸಿನಲ್ಲಿ ಹೋಲಿಸುವಂತೆ ಮಾಡಿ ಇದನ್ನು ಹೇಳಿಸುವೆನು. ಇಷ್ಟು ಹೆಚ್ಚು ಸ್ಥಳದಲ್ಲಿನ ನೀರು ಇದಕ್ಕೆ ಬರುವುದರಿಂದ ಯೂರೋಪ ಖಂಡದ ನದಿಗಳ ನೀರನ್ನೆಲ್ಲಾ ಕೂಡಿಸಿದರೆ ಈ ಒಂದು ನದಿಯಾಗುವುದೆಂಬುದನ್ನು ಹೇಳಿಸಿ, ಬಾಲಕರಿಗೆ ಅದ್ಭುತ ಕಲ್ಪನೆಯನ್ನುಂಟುಮಾಡುವೆನು.

(4) ಇದರ ಮುಖ್ಯೋಪನದಿಗಳು:- ದಕ್ಷಿಣದಿಂದ ಬಂದು ಸೇರುವ ಮೆಡೀರ. ಉದ್ದ 2000 ಮೈಲಿ ಉತ್ತರದಿಂದ ಬಂದು ಸೇರುವ ರಯೋನೀಗ್ರೊ, ಉದ್ದ 1400 ಮೈಲಿ.

ಈ ಉಪನದಿಗಳನ್ನು ನಮ್ಮ ಇಂಡಿಯಾದಲ್ಲಿ ಅತ್ಯಂತ ಪ್ರಸಿದ್ಧವಾದ ಸಿಂಧು, ಗಂಗೆಗಳಿಗೆ ಹೋಲಿಸುವಂತೆ ಮಾಡಿ–ಇಂಥ ಉಪನದಿಗಳುಳ್ಳ ಈ ಅಮ್ಸ್ಟಾ ನದಿಯು ಬಹು ವಿಸ್ತಾರವಾಗಿರಬಹುದೆಂದು ಹೇಳಿಸುವೆನು.

(5) ಈ ನದಿಯ ಮುಖವು 180 ಮೈಲಿ ಅಗಲವಿದೆ.

ಗಂಗಾನದಿಯು ಮುಖಕ್ಕೆ ಹೋಲಿಸಿ ಆದೂ ಇದರಷ್ಟೇ ವಿಸ್ತಾರವಾಗಿದ್ದರೂ ಸಣ್ಣ ಸಣ್ಣ ಶಾಖೆಗಳಾಗಿ ಅಷ್ಟುಸ್ಥಳದಲ್ಲಿಯೂ ಹರಿಯುತ್ತದೆ. ಈ ನದಿಯು ನೀರೆಲ್ಲವೂ ಇಷ್ಟುಸ್ಥಳದಲ್ಲಿ ಹರಿಯುತ್ತಿರುವುದರಿಂದ ಪ್ರವಾಹದವೇಗವೂ, ಆಳವೂ ಹೆಚ್ಚಾಗಿರುವುದೆಂಬುದನ್ನು ಹೇಳಿಸುವೆನು.

(ii) ಇದರಫಲ

ಈ ನದೀಮುಖವು ಇಷ್ಟು ವಿಸ್ತಾರವಾಗಿಯೂ, ಆಳವಾಗಿರುವುದರಿಂದಲೂ, ಕೆಲವುವೇಳೆ ಸಮುದ್ರವು ಈ ನದಿಯ ಮುಖಭಾಗದಿಂದ 500 ಮೈಲಿಯವರೆಗೆ ಹತ್ತಿ ಹೋಗುವುದರಿಂದಲೂ ಅಲ್ಲಿಯವರೆಗೂ ಹಡಗಿನ ಪ್ರಯಾಣಕ್ಕೆ ಬಹಳ ಅನುಕೂಲವಾಗಿದೆ.

(6) ಈ ನದಿಯು ಪ್ರವಾಹವು ಸಮುದ್ರದೊಳಕ್ಕೆ 150 ಮೈಲಿ ವರಿಗೂ ನುಗ್ಗಿ ಹೋಗುವುದು.

ಮೇಲಿನ ವಿಷಯಗಳಿಂದ ಇದನ್ನು ಸ್ಪಷ್ಟಪಡಿಸುವೆನು. ಇದರಿಂದ ಸಮುದ್ರದ ಅಷ್ಟು ಪ್ರದೇಶದಲ್ಲಿಯೂ ನೀನೀರೇ ದೊರೆಯುವುದು.

3. ಈ ನದಿಯಲ್ಲಿ ಯಾವಾಗಲೂ ಪೂರ್ವಪ್ರವಾಹವಿರುವುದು. ಇದಕ್ಕೆ ಕಾರಣಗಳು :—

ಸಮುದ್ರದ ಕಡೆಯಿಂದ ನಿರಂತರೇಶಾನ್ಯಾಗ್ನೇಯ ಮಾರುತಗಳು ಬೀಸುತ್ತಿರುವುವು.

(1) ಯಾವಾಗಲೂ ಮೋಡವನ್ನು ತರುತ್ತಿರುವ ಗಾಳಿಯು ಬೀಸುತ್ತಿರುವುದು.

(1) ಈ ಸಾಗರವು ಉಷ್ಣವಲಯದಲ್ಲಿಪೆ. ಅದ್ದರಿಂದ ಸಾಗರದ ನೀರು ಸೂರ್ಯನ ಹೆಚ್ಚಾದ ಸೆಕೆಯಿಂದ ಕಾದು ಆವಿಯಾಗುತ್ತಿರುವುದು. ಈ ಆವಿಯು ವಾಯುಮಂಡಲಕ್ಕೆ ಸೇರಿ ಅಲ್ಲಿನ ಶೈತ್ಯದಿಂದ ಮೋಡವಾಗುವುದು. ಈ ಮೋಡಗಳನ್ನು ಗಾಳಿಯು ಒಳಗೊಂಡು ಬರುತ್ತಿರುವುದೆಂಬುದನ್ನು ತಿಳಿಸುವುದು. ಬೇಸಿಗೆಯಲ್ಲಿ ಕೆರೆ, ನದಿ, ಬಾವಿಗಳ ನೀರು ಕಮ್ಮಿಯಾಗುವುದನ್ನೂ, ಮಳೆಗಾಲದಲ್ಲಿ ಬೀಸುವ ಗಾಳಿಯು ತಣ್ಣಗಿರುವುದನ್ನೂ ಮಳೆಗಾಲದಲ್ಲಿ ಮೋಡಗಳು ಗಾಳಿಯಿಂದ ಒಯ್ಯಲ್ಪಡುತ್ತಿರುವುದನ್ನು ಇದಕ್ಕೆ ನಿದರ್ಶನವಾಗಿ ಹೇಳುವುದು.

(2) ಎತ್ತರವಾದ ಪರ್ವತಗಳಿರುವುದು.

(2) ಇಂಥಾ ಮೋಡಗಳನ್ನು ಬೆಟ್ಟಗಳು ತಡೆದು ಮೇಲಕ್ಕೇರಿಸಿ ಶೈತ್ಯಾಧಿಕ್ಯದಿಂದ ಮಳೆಯಾಗಿ ಸುರಿಯುವಂತೆ ಮಾಡುತ್ತದೆ. ಮಲೆನಾಡಿನಲ್ಲಿ ವಿಶೇಷ ಮಳೆಯಾಗಲು ಅಲ್ಲಿನ ಪಶ್ಚಿಮಘಟ್ಟಗಳೇ ಕಾರಣವೆಂಬುದನ್ನು ನಿದರ್ಶಿಸುವುದು.

(3) ಕಾಡುಗಳು ಹೆಚ್ಚಾಗಿರುವುದು.	(3) ಬೆಟ್ಟಗಳಿದ್ದು ವಿಶೇಷ ಮಳೆಯುಳ್ಳ ಆಗಿ, ಅನುಕೂಲವಾದ ಹವೆಯೂ ಇರುವುದರಿಂದ ಇಲ್ಲಿ ದೊಡ್ಡ ಕಾಡುಗಳಿರುವುದು ಎಂದು ಹೇಳಿಸಿ, ಈ ಕಾಡೂ ಮಳೆಯ ನೋಡಗಳನ್ನು ಎಳೆದುಕೊಂಡು ಮಳೆಯನ್ನು ಸುರಿಸುತ್ತದೆ ಎಂದೂ ಹೇಳಿಸುವೆನು. ಕಾಡನ್ನು ನರ್ಮಿಸುವುದು.
(4) ದೊಡ್ಡ ಜಲಾನಯನಭೂಮಿಯಿರುವುದು. ಇಷ್ಟು ವಿಸ್ತಾರವಾದ ಪ್ರದೇಶದ ನೀರು ಬರುತ್ತಿರುವುದರಿಂದ ಪ್ರವಾಹ ಹೆಚ್ಚುವುದು. ಮತ್ತು ಈ ಪ್ರದೇಶವು ಸಮುಭಾಜವೃತ್ತದ ಎರಡುಕಡೆಯೂ ಇರುವುದರಿಂದ ವಿರಾಮವಿಲ್ಲದೆ ನೀರು ಬಂದೊದಗುತ್ತಿರುವುದು.	(4) ಇದನ್ನು ಹಲಗೆಯಮೇಲೆ ಬರೆದು 3—4 ಬಾಲಕರಿಂದ ಹೇಳಿಸುವುದು. ಈ ರೀತಿಯಾಗಿ ಈ ನದಿಯಲ್ಲಿ ಯಾವಾಗಲೂ ಪೂರ್ಣಪ್ರವಾಹವಿರುವುದರಿಂದಲೂ, ಬಹು ದೊಡ್ಡ ಉಪನದಿಗಳು ಬಂದು ಸೇರುತ್ತಿರುವುದರಿಂದಲೂ, ಹಡಗುಗಳ ಸಂಚಾರಕ್ಕೆ ಅನುಕೂಲವಾಗಿರುವುದರಿಂದಲೂ ಇದನ್ನು ಭೂಮಧ್ಯ ಸಮುದ್ರವೆಂದು ಕರೆಯಬಹುದು ಎಂದು ಸಮುದ್ರಕ್ಕೂ ಇದಕ್ಕೂ ಇರುವ ಹೋಲಿಕೆಯಿಂದ ಹೇಳಿಸುವುದು.

B. O. S.

ಜನರಲ್.

ತಾರೀಖು 18ನೇ ನವಂಬರ್ 1908.

ನಂಬರು ಜ. 3053—ಜ. ಮಿ. 163—08—18.

ಇಂಡಿಯಾದೇಶದ ರಾಜ್ಯಭಾರವನ್ನು ಬ್ರಿಟಿಷ್ ಸರ್ಕಾರದವರು ವಹಿಸಿಕೊಂಡ ಆಗಾಗಲಿತು ಐವತ್ತು ವರ್ಷಗಳು ಸಂದ ಮಹೋತ್ಸವ ಕಾಲದಲ್ಲಿ ಘನವನ್ನು

ಹೊಂದಿದ ಇಂಡಿಯಾ ಚಕ್ರವರ್ತಿಯವರು ಇಂಡಿಯಾದೇಶದ ರಾಜರುಗಳಿಗೂ ಪ್ರಜೆಗಳಿಗೂ ದಯಪಾಲಿಸಿದ ಇದರಡಿ ಕಂಡ ನಿರೂಪವನ್ನು ಈ ಮೂಲಕ ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ.

ಹುಕುಂ ಬಮೊಜೀಬ,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟೆರಿ.

ಘೋಷಣೆಯನ್ನು ಹೊಂದಿದ ಶ್ರೀಮದಿಂಡಿಯಾ ಚಕ್ರವರ್ತಿಯವರು ಇಂಡಿಯಾ ದೇಶದ ರಾಜರುಗಳಿಗೂ ಪ್ರಜೆಗಳಿಗೂ ಕಳುಹಿಸಿಕೊಟ್ಟ ಇಸ್ತಿಹಾರುನಾಮೆ.

1. ನಮ್ಮ ಪ್ರಿಯ ಮಾತೃಶ್ರೀಯವರಾದ ಮತ್ತು ನಮಗೆಮುಂಚೆ ಈ ರಾಜ್ಯದ ಸಿಂಹಾಸನಾರೂಢರಾಗಿ ಇದ್ದ ಪರಮಪೂಜ್ಯರಾದ ವಿಕ್ಟೋರಿಯಾ ಮಹಾರಾಜ್ಞಿಯವರು ಮೊದಲು ಈಸ್ಟ್ ಇಂಡಿಯಾ ಕಂಪೆನಿಯವರ ಆಡಳಿತಕ್ಕೆ ಒಳಪಟ್ಟಿದ್ದ ಪ್ರದೇಶಗಳ ರಾಜ್ಯಭಾರವನ್ನು ಪಾರ್ಲಿಮೆಂಟ್ ಮಹಾ ಸಭೆಯವರ ಸಲಹೆಯಿಂದಲೂ ಅನುಮತಿಯಿಂದಲೂ ವಿಶೇಷವಾದ ಅನೇಕ ಕಾರಣಗಳಮೇಲೆ ವಹಿಸಿಕೊಂಡು ಇಂದಿಗೆ ಐವತ್ತು ವರ್ಷಗಳಾದುವು. ಆಗ ವಿಧಿಪೂರ್ವಕವಾಗಿ ವಹಿಸಿಕೊಂಡ ಈ ಮಹತ್ಕಾರ್ಯದ ಸ್ಮರಣಾರ್ಥವಾಗಿ ಇಂಡಿಯಾದೇಶದ ರಾಜರುಗಳಿಗೂ ಪ್ರಜೆಗಳಿಗೂ ವಂದನಾಪೂರ್ವಕವಾಗಿ ಈ ಸಂದೇಶವನ್ನು ಕಳುಹಿಸಲು ಈ ವಾರ್ಷಿಕೋತ್ಸವಕಾಲವು ಸಕಾಲವಾಗಿರುತ್ತದೆಂದು ನಾವು ಭಾವಿಸುತ್ತೇವೆ. ಪುರಾತನದಿಂದ ಬಂದಿರುವ ನಿಮ್ಮ ಇತಿಹಾಸದಲ್ಲಿ ಅರ್ಧಶತವರ್ಷವೆನಿಸುವುದು ಅತ್ಯಲ್ಪಕಾಲವೇ ಸರಿ; ಆದರೂ ಈ ದಿನಕ್ಕೆ ಲಭ್ಯರಾಗುವ ಅರ್ಧಶತವರ್ಷವು ಚರಿತ್ರಾರ್ಹವಾದ ಅನೇಕಾನೇಕ ಶಕಗಳೆಂಬ ಸಾಗರದೊಳಗೆ ಅತ್ಯಂತ ತೇಜೋಮಯವಾದ ಒಂದು ಸೀಮೆಯು ಗುರುತಿನಂತೆ ಶೋಭಿಸುವುದು. ಇಂಡಿಯಾದೇಶದ ಪ್ರಭುತ್ವವನ್ನು ಇಂಗ್ಲೆಂಡಿನರಾಜರೇ ಸಾಕ್ಷಾತ್ತಾಗಿ ವಹಿಸಿಕೊಂಡ ಬಗ್ಗೆ ಇಸ್ತಿಹಾರ್ನಾಮೆಯನ್ನು ಪ್ರಕಟಿಸಿದಲಾಗಾಯಿತು ಇಂಡಿಯಾದೇಶವು ಬ್ರಿಟಿಷ್‌ನವರ ಏಕಚ್ಛತ್ರಾಧಿಪತ್ಯಕ್ಕೆ ಒಳಪಟ್ಟಂತಾಗಿ ಒಂದು ಹೊಸ ಶಕೆಯೇ ಆರಂಭವಾದಂತಾಯಿತು. ರಾಜ್ಯಭಾರನಿರೂಹಣಕಾರ್ಯವು ಕಷ್ಟಸಾಧ್ಯವಾಯಿತು; ಮತ್ತು ಅಭಿವೃದ್ಧಿಯು ಕಾರ್ಯರೂಪ

ಾದಾನವಾಗಿ ನಡೆಯುತ್ತಿದ್ದುದಾಗಿ ಕೆಲವುಸಾರಿ ತೋರಬಂದಿರಬಹುದು; ಆದರೆ ನಾನಾಜಾತಿಯ ಜನಾಂಗಗಳಿಂದ ಕೂಡಿದ ಸು. ಮೂರು ಮೂವತ್ತು ಕೋಟಿ ಪ್ರಜೆಗಳನ್ನು ಬ್ರಿಟಿಷ್ ಜನರ ತಹಬಂದಿಗೆ ಒಳಪಡಿಸಿಕೊಳ್ಳುವ ಕಾರ್ಯವು ದೃಢವಾಗಿಯೂ ಅವಿಚ್ಛಿನ್ನವಾಗಿಯೂ ನಡೆದುಬಂದಿದೆ. ಕಳೆದ 51 ವರುಷಗಳಲ್ಲಿ ನಡೆಸಿರುವ ಸಾಹಸಕಾರ್ಯಗಳನ್ನು ಸ್ಮರಣೆಮಾಡಿಕೊಂಡಲ್ಲಿ ಎಲ್ಲವೂ ನಿರ್ದುಷ್ಟವಾಗಿಯೂ ನ್ಯಾಯುಪರಾಯಣವಾಗಿಯೂ ನಡೆದಿವೆ ಎಂಬುವುದರಲ್ಲಿ ಸಂದೇಹವಿಲ್ಲ.

2. ಮನುಷ್ಯಮಾತ್ರದವರ ರಾಜ್ಯಭಾರದಲ್ಲಿ ಸರ್ವಕಾಲದಲ್ಲಿಯೂ ಸರ್ವದೇಶಗಳಲ್ಲಿಯೂ ಯಾವ ಯಾವ ಕಷ್ಟಗಳು ಪ್ರಾಪ್ತವಾಗಬಹುದೋ ಅಂಥಾ ಕಷ್ಟಗಳು ನಮ್ಮ ಆಡಳಿತದಲ್ಲಿಯೂ ಆಗಿಂದಾಗ್ಗೆ ಪ್ರಾಪ್ತವಾಗಿಯೇ ಇವೆ. ಅವುಗಳನ್ನು ಬ್ರಿಟಿಷ್‌ರಾಜ್ಯದ ಅಧಿಕಾರಿಗಳು ವಿಶೇಷ ಶ್ರಮದಿಂದಲೂ, ಧೈರ್ಯದಿಂದಲೂ, ತಾಳ್ಮೆಯಿಂದಲೂ, ದೀರ್ಘಾಲೋಚನೆಯಿಂದಲೂ, ದೃಢಸಂಕಲ್ಪದಿಂದಲೂ ತುಂಬಾ ಸಾಹಸಪಟ್ಟು ಪರಿಹಾರ ಮಾಡಲು ಯತ್ನಿಸಿರುತ್ತಾರೆ. ಅಲ್ಲಲ್ಲಿ ತಪ್ಪುಗಳೇನಾದರೂ ಸಂಭವಿಸಿದ್ದಪಕ್ಷ ಅವುಗಳನ್ನು ನಮ್ಮ ಸರ್ಕಾರದ ಮುಖ್ಯಾಧಿಕಾರಿಗಳು ಸಾಧ್ಯವಾದಷ್ಟು ಶ್ರಮಪಟ್ಟು ತಮ್ಮ ಕಷ್ಟನಷ್ಟಗಳನ್ನು ಲಕ್ಷೀಕರಿಸದೆ ಕ್ರಮಪಡಿಸಿರುತ್ತಾರೆ. ಅಕೃತ್ಯಗಳು ನಡೆದಿವೆ ಎಂದು ದೃಢಪಟ್ಟ ಸಂದರ್ಭಗಳಲ್ಲೆಲ್ಲಾ ಸರ್ಕಾರದ ಅಧಿಕಾರಿಗಳು ತುಂಬಾ ಸಾಹಸದಿಂದ ತಕ್ಕ ಪರಿಹಾರಗಳನ್ನು ಮಾಡಿರುತ್ತಾರೆ.

3. ದುರ್ಭಿಕ್ಷದ ಮತ್ತು ಪ್ಲೇಗಿನ ಹಾವಳಿಗಳನ್ನು ತಪ್ಪಿಸುವುದು ಯಾವ ರಾಜತಂತ್ರದಿಂದಲೂ ಸಾಧ್ಯವಾಗಲಾರದು; ಆದರೂ ಸ್ವಭಾವಸಿದ್ಧವಾಗಿ ಪ್ರಾಪ್ತವಾಗುವ ಈ ಭಯಂಕರವಾದ ವಿಪತ್ತುಗಳನ್ನು ಉಪಶಮನ ಮಾಡುವ ಭಾಗದಲ್ಲಿ ಅನುಭವಶಾಲಿಗಳಾದ ಅಧಿಕಾರಿಗಳು ತಮ್ಮ ಬುದ್ಧಿಕುಶಲತೆಯನ್ನೂ ಆಸಕ್ತಿಯನ್ನೂ ಸಾಧ್ಯವಾದಮಟ್ಟಿಗೂ ವಿನಿಯೋಗಿಸಿರುತ್ತಾರೆ. ನಿಮ್ಮ ಪೂರ್ವಚರಿತ್ರೆಯನ್ನೆಲ್ಲಾ ನೋಡಿದರೂ ಇಷ್ಟು ದೀರ್ಘಕಾಲ ನಿಮ್ಮ ದೇಶದೊಳಗೆ ನೀವು ಹಿಂದೆ ಯಾವಾಗಲೂ ಯುದ್ಧದಿಂದುಂಟಾಗುವ ಕಷ್ಟನಷ್ಟಗಳನ್ನೂ ಅನಾಹುತಗಳನ್ನೂ ತಪ್ಪಿಸಿಕೊಂಡಿರಲಿಲ್ಲ. ನಿಮ್ಮ ದೇಶದೊಳಗೆ ಅವಿಚ್ಛಿನ್ನವಾದ ನೆಮ್ಮದಿಯು ನೆಲೆಗೊಂಡಿರುತ್ತದೆ.

4. ಶ್ರೀ ವಿಕ್ಟೋರಿಯಾ ಮಹಾರಾಜ್ಞಿಯವರು 1858 ನೇ ವರ್ಷದಲ್ಲಿ ನಿಮಗೆ ದಯಪಾಲಿಸಿದ ಶಾಸನದಲ್ಲಿ (Charter) ಇಂಡಿಯಾದೇಶದ ವ್ಯವಸಾಯು ಮೊದಲಾದ ಕೆಲಸಗಳು ನಿರಾತಂಕವಾಗಿ ನಡೆಯುವಂತೆ ಪ್ರೋತ್ಸಾಹ ಕೊಡಬೇಕೆಂತಲೂ, ಜನಸಾಮಾನ್ಯಕ್ಕೆ ಪ್ರಯೋಜನಕರವಾದ ಮತ್ತು ಅವರ ಏಳಿಗೆಗೆ ಆಕರವಾದ ಕಾರ್ಯಗಳನ್ನು ಅಭಿವೃದ್ಧಿಪಡಿಸಬೇಕೆಂತಲೂ, ಅಲ್ಲಿನ ನಮ್ಮ ಪ್ರಜೆಗಳಿಗೆಲ್ಲಾ ಪ್ರಯೋಜನವಾಗುವಂತೆ ರಾಜ್ಯಭಾರ ಮಾಡಬೇಕೆಂತಲೂ ತಮ್ಮ ಮನಃಪೂರ್ವಕವಾದ ಕೋರಿಕೆಯಾಗಿರುವುದೆಂದು ಬಹು ಉದಾರವಾಗಿ ಅಭಯವನ್ನು

ಕೊಟ್ಟರು. ನಿಮ್ಮ ಸುಖಸಂಪತ್ತುಗಳನ್ನೂ ಶ್ರೇಯೋಭಿವೃದ್ಧಿಯನ್ನೂ ಹೆಚ್ಚಿಸುವುದಕ್ಕೋಸ್ಕರ ತುಂಬಾ ಬುದ್ಧಿಕುಶಲತೆಯಿಂದಲೂ ಸಾಹಸದಿಂದಲೂ ಕಲ್ಪಿಸಿರುವ ಅದ್ಭುತವಾದ ಏರ್ಪಾಡುಗಳು ಮೇಲ್ಕಂಡ ದಯಾಪೂರಿತವಾದ ವಾಗ್ದಾನವನ್ನು ಎಷ್ಟು ಉತ್ಸಾಹದೊಡನೆ ನೆರವೇರಿಸುತ್ತೀವೆಂಬುದಕ್ಕೆ ಪ್ರಪಂಚಕ್ಕೆಲ್ಲಾ ಸಾಕ್ಷೀಭೂತವಾಗಿವೆ.

5. ಸಾಮಂತರಾಜರುಗಳ ಮತ್ತು ರಾಜ್ಯಭಾರ ನಡೆಸುವ ಪ್ರಭುಗಳ ಹಕ್ಕು ಬಾಧ್ಯತೆಗಳನ್ನೂ ಸ್ವಾತಂತ್ರ್ಯಗಳನ್ನೂ ಗೌರವಿಸಿ ಕಾಪಾಡಿಕೊಂಡು ಬಂದಿರುತ್ತದೆ; ಅವರುಗಳಲ್ಲಿರುವ ರಾಜಭಕ್ತ್ಯಾಯು ಯಾವಾಗಲೂ ನಿಶ್ಚಲವಾಗಿರುತ್ತದೆ. ನಮ್ಮ ಪ್ರಜಾವರ್ಗಕ್ಕೆ ಸೇರಿದ ಯಾವನೊಬ್ಬನಿಗೂ ಆತನ ಮತಭಕ್ತ್ಯಾಯು ಅಕ್ಷವಾ ಆಚಾರದ ವಿಷಯದಲ್ಲಿ ಪಕ್ಷಪಾತವನ್ನಾಗಲಿ ಉಪದ್ರವನ್ನಾಗಲೀ ಮನೋವ್ಯಥೆಯನ್ನಾಗಲಿ ಉಂಟುಮಾಡಿರುವುದಿಲ್ಲ. ಸಮಸ್ತ ಜನರಿಗೂ ನ್ಯಾಯವಿಧಿಗನುಸಾರವಾದ ಸಂರಕ್ಷಣೆಯು ಸಮವಾಗಿ ದೊರಕಿರುತ್ತದೆ. ಆ ನ್ಯಾಯವಿಧಿಗಳನ್ನು ಜಾತಿ ಅಥವಾ ಮತದ ಕಟ್ಟಳೆಗಳಿಗಾಗಲೀ ನಿಮ್ಮ ನಾಗರೀಕತೆಯಲ್ಲಿ ನೆಲೆಗೊಂಡಿರುವ ಅಸ್ಪೃಶ್ಯವಾದ ಆಚಾರ ವ್ಯವಹಾರಗಳಿಗಾಗಲೀ ಯಾವುದೊಂದು ಅವಮರ್ಯಾದೆಯೂ ಆಗದಂತೆ ಜಾರಿಯಲ್ಲಿ ತಂದಿರುತ್ತದೆ. ಅವುಗಳನ್ನು ಸುಲಭವಾಗಿ ಆಚರಣೆಗೆ ತರುವಂತೆ ಮಾಡಿರುವುದಲ್ಲದೆ ಅವುಗಳ ಉದ್ದೇಶವನ್ನು ನೆರವೇರಿಸುವುದಕ್ಕೆ ಬೇಕಾದ ವಿಧಾನಗಳನ್ನು ಪುರಾತನ ಜನಾಂಗದವರಾಗಿಯೂ ಈಚೆಗೆ ನವೀನ ಮಾರ್ಗಗಳನ್ನು ಸ್ವಲ್ಪಸ್ವಲ್ಪ ಅವಲಂಬಿಸುವವರಾಗಿಯೂ ಇರುವ ನಿಮ್ಮಗಳಿಗೆ ಅನುಕೂಲವಾಗಿರುವಂತೆ ಅವುಗಳನ್ನು ಏರ್ಪಡಿಸಿದೆ.

6. ಅಸಂಖ್ಯಾತವಾದ ಪ್ರಜಾಸಮುದಾಯವು ಈಗಲೂ ಇನ್ನು ಮುಂದೆ ಬಹುಕಾಲದವರೆಗೂ ಅಭಿವೃದ್ಧಿಗೆ ಬರುವಂತೆ ಪರಿಪಾಲನೆ ಮಾಡುವ ಭಾರವು ನಮ್ಮ ಸರಕಾರಕ್ಕೆ ಸೇರಿರುವುದರಿಂದ ನ್ಯಾಯವಾದ ಕಾರಣವಾಗಲೀ ಘನತರವಾದ ಉದ್ದೇಶವಾಗಲೀ ಇಲ್ಲದೆ ಫಿತೂರಿ ನಡೆಸುವ ತಕ್ಸೀರುದಾರರನ್ನು ಕಠಿಣವಾಗಿ ಶಿಕ್ಷಿಸಿ ಅಡಗಿಸಬೇಕಾದುದು ನಮ್ಮ ಮುಖ್ಯಕರ್ತವ್ಯವಾಗಿರುವುದು. ರಾಜಭಕ್ತ್ಯಾವಿಶ್ವಾಸಯುಕ್ತರಾದ ನಮ್ಮ ಇಂಡಿಯಾದೇಶದ ಪ್ರಜಾವರ್ಗಕ್ಕೆ ಈ ಫಿತೂರಿಗಳು ಹೇಯವಾಗಿರುವುವೆಂದು ನಾವು ಬಲ್ಲೆವು. ಮತ್ತು ಪ್ರಜೆಗಳಲ್ಲಿ ಕ್ಷೇಮವೂ ನೆಮ್ಮದಿಯೂ ಶಾಶ್ವತವಾಗಿ ನೆಲೆಗೊಳ್ಳುವಂತೆ ಮಾಡಬೇಕಾದುದು ನಮ್ಮ ಕರ್ತವ್ಯವಾಗಿರುವುದರಿಂದ ಈ ಫಿತೂರಿಗಳು ನಡೆದ ಮಾತ್ರಕ್ಕೇ ನಾವು ಆ ಕರ್ತವ್ಯವನ್ನು ನಡೆಸದೆ ಬಿಡಲಾರೆವು.

7. ಚಿರಿತಾರ್ಹವಾದ ಈ ವಾರ್ಷಿಕೋತ್ಸವ ಕಾಲದಲ್ಲಿ ನಾವು ರಾಜಯೋಗ್ಯವಾದ ಕ್ಷಮಾಪಣೆಯನ್ನು ತೋರಿಸದೆ ಹೋಗಬಾರದೆಂಬ ಅಭಿಪ್ರಾಯದಿಂದ, ಹಿಂದೆ 1903 ನೇ ಇಸವಿಯಲ್ಲಿ ನಡೆದ ನಮ್ಮ ಪಟ್ಟಾಭಿಷೇಕಸಂಬಂಧವಾದ

ದರ್ಬಾರ್ ಕಾಲದಲ್ಲಿ ಅಪ್ಪಣೆ ಕೊಟ್ಟಪ್ರಕಾರವೇ, ಕಾನೂನಿಗೆ ವಿರೋಧವಾಗಿ ತಕ್ಸೀರ್ ನಡೆಸಿದ ಬಗ್ಗೆ ನಮ್ಮ ಕೋರ್ಟುಗಳವರಿಂದ ಶಿಕ್ಷೆ ವಿಧಿಸಲ್ಪಟ್ಟವರ ಪೈಕಿ ಕೆಲವರ ಶಿಕ್ಷೆಯನ್ನು ಮಾಫ್ ಮಾಡುವಂತೆಯೂ ಕೆಲಪರ ಶಿಕ್ಷೆಯನ್ನು ಯಥೋಚಿತವಾಗಿ ಕಮ್ಮಿ ಮಾಡುವಂತೆಯೂ ಹುಕುಂ ಕೊಟ್ಟಿರುತ್ತೇವೆ; ಅಂಥಾ ತಕ್ಸೀರುದಾರರು ಈ ಕ್ಷಮಾಪಣೆಯನ್ನು ಸ್ಮರಣೆಯಲ್ಲಿಟ್ಟುಕೊಂಡು ಇನ್ನು ಮುಂದೆ ಅಪರಾಧಗಳನ್ನು ಮಾಡದೆ ಸಚ್ಚರಿತರಾಗಿರಬೇಕೆಂದು ಅಪೇಕ್ಷಿಸುತ್ತೇವೆ.

೮. ದೊಡ್ಡ ದೊಡ್ಡ ಸರ್ಕಾರಿ ಹುದ್ದೆಗಳಿಗೆ ಇಂತಿಂಥಾ ಜನಾಂಗಕ್ಕೆ ಸೇರಿದವರನ್ನು ಮಾತ್ರವೇ ನೇಮಕ ಮಾಡಬೇಕೆಂಬ ಭೇದವನ್ನು ಸಂಪೂರ್ಣವಾಗಿ ತಪ್ಪಿಸುವ ಬಗ್ಗೆ ಆಗಿಂದಾಗ್ಗೆ ಪ್ರಯತ್ನ ನಡೆಸುತ್ತಿದೇವೆ. ಬುದ್ಧಿವಂತರೂ ಸಮರ್ಥರೂ ಆದ ನಮ್ಮ ಇಂಡಿಯಾದೇಶದ ಪ್ರಜೆಗಳಲ್ಲಿ ವಿದ್ಯಾಭ್ಯಾಸವು ಇನ್ನೂ ಅಧಿಕವಾಗಿ ಪ್ರಚಾರಕ್ಕೆ ಬಂದು ಅವರಿಗೆ ಇನ್ನೂ ಹೆಚ್ಚು ಅನುಭವವುಂಟಾಗಿ, ಅವರ ಜವಾಬ್ದಾರಿಯನ್ನು ಅವರು ಇನ್ನೂ ಚೆನ್ನಾಗಿ ತಿಳಿದುಕೊಳ್ಳುತ್ತಾ ಬಂದಹಾಗೆಲ್ಲಾ ಮೇಲ್ನಂಡ ಭೇದವನ್ನು ಇನ್ನು ಮುಂದೆ ಸುತರಾಂ ತಪ್ಪಿಸಬೇಕೆಂದು ನಾವು ಉದ್ದೇಶಿಸಿರುತ್ತೇವೆಯಲ್ಲದೆ ಅದೇ ಮೇರೆಗೆ ತಪ್ಪಿಸಲಾದೀತೆಂದು ದೃಢವಾಗಿ ನಂಬುತ್ತೇವೆ.

೯. ಪ್ರಜಾಪ್ರತಿನಿಧಿಗಳ ಮೂಲಕ ಕಾರ್ಯಭಾರ ನಡೆಸುವ ಪದ್ಧತಿಯನ್ನು ಇಂಡಿಯಾ ದೇಶದಲ್ಲಿ ಮೊದಲಿನಿಂದಲೂ ಕ್ರಮವಾಗಿ ಜಾರಿಗೆ ತಂದಿರುತ್ತದೆ. ಈಗ ಆ ಪದ್ಧತಿಯನ್ನು ಇನ್ನೂ ವಿಸ್ತಾರವಾಗಿ ಪ್ರಚಾರಕ್ಕೆ ತರುವುದು ಯುಕ್ತವೆಂಬುದಾಗಿ ನಮ್ಮ ವೈಸರಾಯಿ ಮತ್ತು ಗವರ್ನರ್ ಜನರಲ್‌ರವರೂ ಇತರ ಮಂತ್ರಾಲೋಚನಾಸಭಿಕರೂ ಅಭಿಪ್ರಾಯ ಪಡುತ್ತಾರೆ. ಇಂಡಿಯಾದೇಶದ ಪ್ರಜೆಗಳಾದ ನಿಮ್ಮ ಪೈಕಿ ಮುಖ್ಯ ಮುಖ್ಯವಾದ ಗುಂಪುಗಳವರು ಬ್ರಿಟಿಷ್ ಆಳ್ವಿಕೆಯಲ್ಲಿ ಅಭಿವೃದ್ಧಿಗೆ ಬಂದು ಪ್ರೋತ್ಸಾಹಗೊಂಡ ಅನೇಕ ಅಭಿಪ್ರಾಯಗಳುಳ್ಳವರಾಗಿ ಎಲ್ಲಾ ಪ್ರಜೆಗಳಿಗೂ ಒಂದೇ ಸಮನಾಗಿ ಹಕ್ಕುಬಾಧ್ಯತೆಗಳನ್ನು ಕೊಡಬೇಕೆಂತಲೂ, ಕಾಯಿದೆ ಕಾನೂನುಗಳನ್ನು ಏರ್ಪಡಿಸುವುದರಲ್ಲಿಯೂ ಸರ್ಕಾರಿ ಆಡಳಿತಗಳನ್ನು ನಡೆಸುವುದರಲ್ಲಿಯೂ ತಮಗೆ ಜಾಸ್ತಿ ಅಧಿಕಾರವನ್ನು ಕೊಡಬೇಕೆಂತಲೂ ಅಪೇಕ್ಷಿಸುತ್ತಾರೆ. ಇಂಥಾ ಅಪೇಕ್ಷೆಯನ್ನು ಯುಕ್ತವಾದ ರೀತಿಯಲ್ಲಿ ನೆರವೇರಿಸಿಕೊಟ್ಟೆವೆ, ಅದರಿಂದ ಈಗ ನಮಗಿರುವ ಅಧಿಕಾರವು ಇನ್ನೂ ದೃಢಪಡುತ್ತದೆಯೇ ಹೊರತು ಎಂದಿಗೂ ಕುಂದಿಹೋಗಲಾರದು. ಆಡಳಿತವನ್ನು ನಡೆಸುವ ಅಧಿಕಾರಿಗಳು ಪ್ರಜೆಗಳೊಡನೆಯೂ, ಸದರೀ ಆಡಳಿತದ ವಿಚಾರವಾಗಿ ಪ್ರಜೆಗಳಲ್ಲಿ ಉಂಟಾಗತಕ್ಕ ಅಭಿಪ್ರಾಯಕ್ಕೆ ಕಾರಣಭೂತರಾಗಿಯೂ ಮತ್ತು ಅವರ ಇಂಗಿತಗಳನ್ನು ತಿಳಿಸತಕ್ಕವರಾಗಿಯೂ ಇರುವ ಪ್ರತಿನಿಧಿಗಳೊಡನೆಯೂ ಇನ್ನೂ ಅಧಿಕವಾಗಿ ಕಲೆತು ಬಳಕೆಯಾಗಲು ಅವಕಾಶವುಂಟಾದರೆ, ಸದರೀ ಆಡಳಿತವು ಇನ್ನೂ ವಿಜಕ್ಷಣೆಯಿಂದ ನಡೆದೀತೆಂಬ ಭಾಗದಲ್ಲಿ ಸಂಶಯವಿಲ್ಲ. ಈ ಉದ್ದೇಶಗಳು ನೆರವೇರುವುದಕ್ಕೋ

ಸ್ಕರ ಈಗ ಬಹು ಚಾಗರೂಕತೆಯಿಂದ ನಡೆಸುತ್ತಿರುವ ಏರ್ಪಾಟುಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸಬೇಕಾದುದಿಲ್ಲ. ಅವುಗಳನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುತ್ತದೆ; ಅಲ್ಲದೆ ನಿಮ್ಮ ಪುರೋವೃದ್ಧಿಗೆ ಅವುಗಳಿಂದ ಬಹುಮಟ್ಟಿಗೆ ಸಹಾಯವಾದೀತೆಂದು ದೃಢವಾಗಿ ನಂಬುತ್ತೇವೆ.

10. ನಮ್ಮ ಇಂಡಿಯಾ ದೇಶೀಯ ಸೈನಿಕರ ಶೌರ್ಯವನ್ನೂ ರಾಜಭಕ್ತಿಯನ್ನೂ ನಾವು ತಿಳಿದಿರುತ್ತೇವೆ; ಮತ್ತು ರಣರಂಗದಲ್ಲಿ ಶೌರ್ಯ ತೋರಿಸಲು ಅವರಿಗಿರುವ ಸ್ವಾಭಾವಿಕ ಕುತೂಹಲವನ್ನೂ, ಶಿಕ್ಷಾತಿಶಯವನ್ನೂ, ಸ್ವಾಮಿಕಾರ್ಯೋತ್ಸಾಹವನ್ನೂ ನಾವು ಬಹಳವಾಗಿ ಶ್ಲಾಘಿಸಿರುತ್ತೇವೆಂದು ಪ್ರಕಾಶಪಡಿಸುವುದಕ್ಕಾಗಿ ಒರುವ ವರುಷದ ಪ್ರಾರಂಭದಲ್ಲಿ ಇವರುಗಳಿಗೆ ಸರಿಯಾದ ಪ್ರತಿಫಲವನ್ನು ಕೊಡಿಸಬೇಕೆಂದು ನಾವು ಆಜ್ಞಾಪಿಸಿದ್ದೇವೆ.

11. ಇಂಡಿಯಾ ದೇಶದ ಶ್ರೇಯೋಭಿವೃದ್ಧಿಯು ವಿಕ್ಟೋರಿಯಾ ಮಹಾರಾಜ್ಞಿಯವರಿಗೆ ಅತ್ಯಂತ ಪ್ರೀತ್ಯಾಸ್ಪದವಾಗಿತ್ತು. 1875 ನೇ ಇಸವಿಯಲ್ಲಿ ನಾವು ಇಂಡಿಯಾ ದೇಶವನ್ನು ನೋಡಿದಾರಭ್ಯ ಆ ದೇಶದ ವಿಷಯದಲ್ಲೆಯೂ ಅಲ್ಲಿನ ರಾಜರುಗಳ ವಿಷಯದಲ್ಲಿಯೂ, ಅಲ್ಲಿನ ಪ್ರಜೆಗಳ ವಿಷಯದಲ್ಲಿಯೂ ನಾವು ತುಂಬಾ ಪ್ರೀತಿಯುತರಾಗಿದ್ದೇವೆ. ಈ ನಮ್ಮ ಪ್ರೀತಿಯು ಎಷ್ಟುಕಾಲ ಗತಿಸಿದರೂ ಲೇಶಮಾತ್ರವೂ ಕುಂದಲಾರದು. ನಮ್ಮ ಪ್ರಿಯಪುತ್ರರಾದ ಪ್ರಿನ್ಸ್ ಆಫ್ ವೇಲ್ಸ್‌ರವರೂ ಅವರ ಪತ್ನಿಯವರೂ ನಿಮ್ಮ ದೇಶಕ್ಕೆ ಪ್ರಯಾಣಮಾಡಿ ಬಂದ ಬಳಿಕ ಅದರ ವಿಷಯವಾಗಿ ತುಂಬಾ ಅನುರಾಗಯುಕ್ತರಾಗಿಯೂ ಮತ್ತು ನಿಮ್ಮ ಕ್ಷೇಮಸಂತುಷ್ಟಿಗಳ ವಿಷಯದಲ್ಲಿ ತುಂಬಾ ಪ್ರೇಮಯುತರಾಗಿಯೂ ಇರುತ್ತಾರೆ. ಇಂಡಿಯಾ ದೇಶದ ವಿಷಯದಲ್ಲಿ ನಮ್ಮ ರಾಜಕುಟುಂಬದವರಿಗೂ ನಮ್ಮ ರಾಜಮಂತ್ರೀಕರಿಗೂ ಉಂಟಾಗಿರುವ ಮನಃಪೂರ್ವಕವಾದ ಅಭಿಮಾನವೂ ಕೋರಿಕೆಯೂ ಈ ರಾಜ್ಯದಲ್ಲಿರುವ ಜನರ ದೃಢಸಂಕಲ್ಪವನ್ನೂ ಗಂಭೀರೋದ್ದೇಶವನ್ನೂ ಯಥಾರ್ಥವಾಗಿ ಪ್ರಕಾಶಪಡಿಸುತ್ತವೆ.

12. ಹಿಂದೆ ಯಾವ ಕಾಲತ್ತಿನಲ್ಲಿಯೂ ಯಾವ ರಾಜ್ಯದ ಯಾ ಭವಿತ್ಪಾಧಿಪತ್ಯದ ಪ್ರಭುಗಳಿಗೂ ಲಭಿಸದಂಥಾ ಕೀರ್ತಿಪ್ರದವಾದ ಈ ಕಾರ್ಯವನ್ನು ನೆರವೇರಿಸುವುದರಲ್ಲಿ ಅವಶ್ಯಕವಾದ ವಿವೇಕವನ್ನೂ ಪರಸ್ಪರ ಪ್ರೀತಿಯನ್ನೂ ಭಗವಂತನು ಬಲಪಡಿಸಿ ಸಂರಕ್ಷಿಸಲಿ ಎಂದು ಪ್ರಾರ್ಥಿಸುತ್ತೇವೆ.

ವಿದ್ಯಾದಾಯಿನಿ.

(A MONTHLY JOURNAL)

ಭಾಗ ೧೬.] ಡಿಸಂಬರ್—೧೯೦೮. [ಸಂಚಿಕೆ ೧೦

ಕಿಂಡರ್‌ಗಾರ್ಟನ್ ಪ್ರೊಬೆಲ್ಲನ ಕ್ರಮನುಕ್ರಮಾನುಸಾರವಾಗಿ ಸಣ್ಣ ಮಕ್ಕಳ ವಿದ್ಯಾಭ್ಯಾಸ.

(ಹಿಂದಿನ ಸಂಚಿಕೆಯಿಂದ ಮುಂದರಿಸಿದುದು.)

ಪ್ರಕೃತಿಗೂ ದೇವರಿಗೂ ಇರುವ ಸಂಬಂಧದ ವಿಷಯದಲ್ಲಿ ಫ್ರೊಬೆಲ್ಲನು ಹೇಳುವುದೇನಂದರೆ "ಪ್ರಕೃತಿಯುಲ್ಲಿರುವ ಪ್ರತಿಯೊಂದು ವಸ್ತುವಿನಿಂದಲೂ ದೇವರನ್ನು ಹೊಂದುವುದಕ್ಕೆ ದಾರಿಯಿರುವುದು; ಆದರೆ ನಾವು ಯಾವುದಾದರೂ ಒಂದು ಮಾರ್ಗವನ್ನು ಕ್ರಮವಾಗಿ ಅನುಸರಿಸುತ ಹೋಗಬೇಕು, ಮತ್ತು ಪ್ರಕೃತಿಯಲ್ಲಿ ಕಾಣುವ ಅತ್ಯಂತ ಸಣ್ಣ ಸಣ್ಣ ಅಂಶಗಳಿಗೂ ದೇವರೇ ಕಾರಣನೆಂಬುದನ್ನು ಮರೆಯಬಾರದು." ಮತ್ತೊಂದುಕಡೆಯಲ್ಲಿ ಅವನು ಹೇಳುವುದೇನೆಂದರೆ "ಮನುಷ್ಯನು ಮುಖ್ಯವಾಗಿ ಬಾಲ್ಯದಲ್ಲಿ ಪ್ರಕೃತಿ ಸಂಸರ್ಗವನ್ನು ವಿಶೇಷವಾಗಿ ಹೊಂದಬೇಕು, ಪ್ರಕೃತಿಯಲ್ಲಿ ಇರುವ ವಿಶೇಷಾಂಶಗಳನ್ನು ತಿಳಿಯುಬೇಕೆಂಬುದೇ ಇಂತಹ ಸಂಸರ್ಗಕ್ಕೆ ಮುಖ್ಯೋದ್ದೇಶವಾಗಿ ಇರಬಾರದು, ಪ್ರಕೃತಿಯಲ್ಲಿ ಕಾಣುವ ದೇವರ ಮಹಿಮೆಯನ್ನು ತಿಳಿಯುಬೇಕೆಂಬುದೇ ಪರಮೋದ್ದೇಶವಾಗಿರಬೇಕು, ಆದುದರಿಂದ ದೊಡ್ಡವರೂ ಚಿಕ್ಕವರೂ, ಆಗಾಗ್ಗೆ ಹೊಲಗಳಿಗೂ, ಕಾಡುಗಳಿಗೂ ಹೋಗಿ ಪ್ರಕೃತಿಯಲ್ಲಿ ಕಾಣುವದೇವರ ಮಹಿಮೆಯನ್ನು ತಿಳಿಯಲು ಪ್ರಯತ್ನಪಡಬೇಕು."

ಇಂತಹ ಪ್ರಕೃತಿ ಸಂಸರ್ಗಕ್ಕೆ ಅವಕಾಶವನ್ನು ಕಲ್ಪಿಸುವುದಕ್ಕಾಗಿಯೇ ಫ್ರೊಬೆಲ್ಲನ ಪಾಠಶಾಲೆಗೆ ಸಂಬಂಧಪಟ್ಟಂತೆ ಒಂದು ತೋಟವಿರಬೇಕೆಂದು ಹೇಳು

ವುದು. ಈ ವಿಷಯದಲ್ಲಿ ಅವನು ಬರೆದಿರುವದೇನೆಂದರೆ " ಪ್ರತಿಯೊಬ್ಬ ಹುಡುಗನಿಗೂ ಒಂದು ಸಣ್ಣದಾದ ತೋಟವನ್ನು ಮಾಡುವದಕ್ಕೆ ಅವಕಾಶವಿಲ್ಲದಿದ್ದರೆ ಕೆಲವು ಗಿಡಗಳನ್ನು ಮರದ ಪೆಟ್ಟಿಗೆಗಳಲ್ಲಿ ಅಥವ ಹೂವಿನ ಕುಂಡಗಳಲ್ಲಿ ಬೆಳೆಸಬೇಕು. ಈ ಕುಂಡಗಳಲ್ಲಿ ವಿಶೇಷ ಆಶ್ಚರ್ಯಕರವಾದ ಅಥವ ಬಹಳ ಸುಖವಾಸಿಯಾದ ಗಿಡವನ್ನು ಬೆಳೆಸಬೇಕಾದುದಿಲ್ಲ. ಎಲ್ಲೆಲ್ಲೂ ಸಾಮಾನ್ಯವಾಗಿ ಬೆಳೆಯುವ ಎಲೆಗಳಿಂದಲೂ ಹೂಗಳಿಂದಲೂ ಕೂಡಿರುವ ಗಿಡವನ್ನು ಬೆಳಸಿದರೆ ಸಾಕು. ಒಂದು ಸಜೀವಿಯಾದ ಸಸ್ಯವನ್ನು ಅಥವ ಪ್ರಾಣಿಯನ್ನು ಎಚ್ಚರಿಕೆಯಿಂದ ಪೋಷಿಸುವ ಬಾಲಕನು ತನ್ನ ಜೀವವನ್ನು ಎಚ್ಚರಿಕೆಯಿಂದ ಕಾಪಾಡಿಕೊಳ್ಳುವನು. ಮೇಲಾಗಿ ತೋಟದಲ್ಲಿ ಕೆಲಸ ಮಾಡುವ ಬಾಲಕನಿಗೆ ತೋಟಕ್ಕೆ ಬರುವ ಚಿಟ್ಟೆಗಳು, ಪಕ್ಷಿಗಳು ಮುಂತಾದುವುಗುಳನ್ನು ನೋಡುವುದಕ್ಕೂ ಅವಕಾಶವು ದೊರಕುವುದು."

ಮೇಲಿನ ಅಂಶಗಳಿಂದ ಫ್ರೊಬೆಲ್ಲನ ಶಿಕ್ಷಣ ಕ್ರಮದಲ್ಲಿ ಪ್ರಕೃತಿ ವಿಮರ್ಶೆಯು ಒಂದು ಮುಖ್ಯಭಾಗವಾಗಿತ್ತೆಂಬುದು ಸ್ಪಷ್ಟಪಡುವುದು, ಮತ್ತೊಂದು ರೀತಿಯಲ್ಲಿ ತಿಳಿದ ಪ್ರಮಾಣವು ಈಅಂಶವನ್ನೇ ಸ್ಥಿರಪಡಿಸುವುದು. 1894 ನೇ ಇಸವಿಯಲ್ಲಿ ಮಿಸ್. ಲ್ಯಾಟರವರು ಫ್ರೊಬೆಲ್ಲನು ತನ್ನ ಜೀವಪೂರ್ತಿಯ ಮುಖ್ಯ ಕೆಲಸಗಳನ್ನು ನಡೆಸಿದ ಬ್ಲಾಂಕೆನ್‌ಬರ್ಗ್ ಎಂಬ ಸ್ಥಳಕ್ಕೆ ಹೋಗಿ ಫ್ರೊಬೆಲ್ಲನ ಚರಿತ್ರೆಯು ವಿಷಯದಲ್ಲೂ ಅವನ ಶಿಕ್ಷಣ ಕ್ರಮದ ವಿಷಯದಲ್ಲೂ ತಿಳಿಯಬಹುದಾದ ಅಂಶಗಳನ್ನು ಶೇಖರಿಸಿದರು. ಈ ಹಳ್ಳಿಯ ಸಮೀಪದಲ್ಲಿ ಇರುವ ಒಂದು ಗುಡ್ಡದಮೇಲೆ ಫ್ರೊಬೆಲ್ಲನ ಕಾಲದಲ್ಲಿ ಇದ್ದ ಪಾಠಶಾಲೆಯ ತೋಟದ ಚಿಹ್ನೆಯು ಇವರು ಹೋದಾಗಲೂ ಕಾಣುತಿತ್ತು. ಫ್ರೊಬೆಲ್ಲನ ಕೆಲಸವನ್ನು ಪ್ರತ್ಯಕ್ಷವಾಗಿ ನೋಡಿದ್ದ ಅನೇಕ ಜನರನ್ನು ಇವರು ಸಂಧಿಸಿದರು. ಇಂತಹ ಜನರಲ್ಲಿ ಒಬ್ಬಳು ಮುದುಕಿಯಿದ್ದಳು ಇವಳು ಹುಡುಗಿಯಾಗಿದ್ದಾಗ ತನ್ನ ಜೀವಪೂರ್ತಿಯ ಅತ್ಯಂತ ಸಂತೋಷಕರವಾದ ಕಾಲವನ್ನು ಫ್ರೊಬೆಲ್ಲನ ಕಿಂಡರ್ ಗಾರ್ಟ್ನಿನಲ್ಲಿ ಕಳೆದಿದ್ದಳು. ಇವಳಿಂದ ಫ್ರೊಬೆಲ್ಲನ ಕಾಲದಲ್ಲಿ ಪ್ರಕೃತಿ ವಿಮರ್ಶೆಯು ಪಾಠಶಾಲೆಯ ಕೆಲಸದ ಒಂದು ಮುಖ್ಯವಾದ ಭಾಗವಾಗಿತ್ತೆಂದು ಮಿಸ್. ಲ್ಯಾಟರವರು ತಿಳಿದುಕೊಂಡರು. ಈ ವಿಷಯದಲ್ಲಿ ಇಷ್ಟು ಪ್ರಮಾಣಗಳಿದ್ದರೂ ಪ್ರಕೃತಿ ವಿಮರ್ಶೆಗೆ ಸಣ್ಣಮಕ್ಕಳ ಶಿಕ್ಷಣ ಕ್ರಮದಲ್ಲಿ ಪ್ರಾಮುಖ್ಯತೆಯನ್ನು ಕೊಟ್ಟಿರುವುದು ಫ್ರೊಬೆಲ್ಲನಿಂದ ಈಚೆಗೆಂದು ಕೆಲವರು ಹೇಳುವುದು ಆಶ್ಚರ್ಯಕರವಾಗಿರುವುದು. ಎಲಿಮೆಂಟರಿ ಪಾಠಶಾಲೆಯ ಮೇ

ಲಿನ ತರಗತಿಗಳಿಗೆ ಪ್ರಕೃತಿ ವಿಮರ್ಶೆಯನ್ನು ಇಟ್ಟಿದು ಈಚೆಗೆ ಇರಬಹುದು. ಆದರೆ ಸಣ್ಣಮಕ್ಕಳ ಶಿಕ್ಷಣಕ್ಕಾಗಿ ಫ್ರೊಬೆಲ್ಲನು ಕಲ್ಪಿಸಿರುವ ಕ್ರಮದಲ್ಲಿ ಪ್ರಕೃತಿ ವಿಮರ್ಶೆಯು ಒಂದು ಮುಖ್ಯಭಾಗವಾಗಿರುವುದು ಎಂಬ ಅಂಶವನ್ನು ಎಲ್ಲರೂ ಒಪ್ಪ ಬೇಕಾಗಿರುವುದು. ಪ್ರಕೃತಿಗೂ ಮನುಷ್ಯನಿಗೂ ಇರುವ ಸಂಬಂಧವನ್ನು ಮಗುವಿಗೆ ತಿಳಿಸುವುದಕ್ಕೂ ಪ್ರಕೃತಿಗೆ ಕಾರಣನಾದ ದೇವರ ವಿಷಯವನ್ನು ಮಕ್ಕಳಿಗೆ ಬೋಧಿಸುವುದಕ್ಕೂ ಪ್ರಕೃತಿ ವಿಮರ್ಶೆಯನ್ನು ಕಿಂಡರ್‌ಗಾರ್ಟ್ನ್ ಕ್ರಮದಲ್ಲಿ ಫ್ರೊಬೆಲ್ಲನು ಒಂದು ಮುಖ್ಯ ಭಾಗವನ್ನಾಗಿ ಇಟ್ಟಿರುವನೆಂದು ನಾನು ಮೇಲೆ ಹೇಳಿರುವೆನಷ್ಟೆ. ಪ್ರಕೃತಿ ವಿಮರ್ಶೆಯಿಂದ ಇನ್ನೂ ಅನೇಕವಾದ ಪ್ರಯೋಜನಗಳೂ ಇರುವುವು. ಇವುಗಳಲ್ಲಿ ಮುಖ್ಯವಾದುವು ಯಾವುವೆಂದರೆ.—

1. ಮಗುವಿನ ಭಾಷೆಯು ಕ್ರಮಪಡುವುದು. ತನಗೆ ಔತ್ಸುಕ್ಯವನ್ನುಂಟುಮಾಡುವ ಮತ್ತು ತಾನು ನಿತ್ಯವೂ ನೋಡುವ ವಸ್ತುವಿನ ವಿಷಯದಲ್ಲಿ ಮಗುವು ಚೆನ್ನಾಗಿ ಮಾತನಾಡುವುದು ಸಹಜವಾಗಿಯೇ ಇರುವುದು.

2. ನಿಷ್ಕೃಷ್ಟವಾದ ಜ್ಞಾನ, ಜ್ಞಾನಾರ್ಜನೆಯಲ್ಲಿ ಕುತೂಹಲ, ಇವು ಕ್ರಮವಾಗಿ ನಡೆಯುವ ಪ್ರಕೃತಿ ವಿಮರ್ಶೆಯಿಂದ ಉಂಟಾಗುವುವು.

3. ಪ್ರಕೃತಿ ವಿಮರ್ಶೆಯಿಂದ ಮುಂದೆ ಮಕ್ಕಳಿಗೆ ಉಪಯೋಗಕ್ಕೆ ಬರುವ ಅನೇಕ ಅಂಶಗಳು ತಿಳಿಯುವುವಷ್ಟೆ. ಈ ಉಪಯೋಗವನ್ನು ಮಕ್ಕಳ ತಾಯಿ ತಂದೆಗಳು ಬಹಳ ದೊಡ್ಡದೆಂದೆಣಿಸುವರು.

4. ಪ್ರಕೃತಿ ವಿಮರ್ಶೆಯಿಂದ ಮಕ್ಕಳ ಸಂತೋಷವು ಹೆಚ್ಚಿ ಅವರ ಆರೋಗ್ಯವು ಅಭಿವೃದ್ಧಿ ಹೊಂದುವುದು. ಮತ್ತು ಬಾಲ್ಯದ ಸ್ಮೃತಿಯು ಸದಾ ಸಂತೋಷಜನಕವಾಗುವುದು.

ಆದರೆ ಈ ಉಪಯೋಗಗಳನ್ನು ಫ್ರೊಬೆಲ್ಲನು ಬಯ ಮುಖ್ಯವೆಂದೆಣಿಸಿರಲಿಲ್ಲವೆಂಬುದನ್ನು ನಾವು ಮರೆಯಬಾರದು.

ಈ ಭಾಗದಲ್ಲೂ ಮಕ್ಕಳು ತಮ್ಮ ಅಭಿಪ್ರಾಯಗಳನ್ನು ತಿಳಿಯಪಡಿಸುವುದಕ್ಕೆ ಅವರಲ್ಲಿ ಸಹಜವಾಗಿರುವ ಕಾರ್ಯಾಭಿನಿವೇಶವೇ ಕಾರಣವು. ಸದಾ ಬೆಳೆಯುತ್ತಿರುವ ಜೀವವುಳ್ಳ ವಸ್ತುವು ಮಕ್ಕಳ ಆತ್ಮವನ್ನು ತನ್ನಕಡೆಗೆಳೆಯುವುದು. ಸ್ಪರ್ಶಿಸುವುದು, ನೋಡುವುದು, ಕೇಳುವುದು, ವಾಸನೆ ತಿಳಿಯುವುದು, ರುಚಿನೋಡುವುದು, ಮುಂತಾದ ಕೆಲಸಗಳಿಂದ ಈ ವಸ್ತುವಿಷಯಕವಾದ ಜ್ಞಾನವು ಆತ್ಮ

ವನ್ನು ತಲಪುವುದು. ಈ ವಿಷಯದಲ್ಲಿ ಫ್ರೊಬೆಲ್ಲನು ಬರೆದಿರುವುದೇನೆಂದರೆ "ಜ್ಞಾನವು ಆತ್ಮವನ್ನು ತಲಪುವುದಕ್ಕೆ ಹೋಗುವ ಮಾರ್ಗದಲ್ಲಿ ಒಂದು ಬಾಗಿಲಿರುವುದು. ಪ್ರಕೃತಿಯು ಮಾತನಾಡುವಾಗ ಈ ಬಾಗಿಲು ಒಳಕ್ಕೆ ತೆರೆಯುವುದು. ಆಮೇಲೆ ಆತ್ಮವು ತನ್ನ ಅಭಿಪ್ರಾಯಗಳನ್ನು ತಿಳಿಸುವಾಗ ಈ ಬಾಗಿಲು ಹೊರಕ್ಕೆ ತೆರೆಯುವುದು" ಹಿಂದೆ ಮಗುವಿಗೂ ಪ್ರಪಂಚದಲ್ಲಿರುವ ಇತರ ಮನುಷ್ಯರಿಗೂ ಇರುವ ಸಂಬಂಧವನ್ನು ತಿಳಿಸುವಾಗ ನಾವು ಕೈಕೆಲಸಕ್ಕೆ ಉಪಯೋಗಿಸಿದ ವಸ್ತುಗಳೇ ಮಗುವಿಗೂ ಪ್ರಕೃತಿಗೂ ಇರುವ ಸಂಬಂಧವನ್ನು ತಿಳಿಸುವಾಗಲೂ ಉಪಯೋಗಕ್ಕೆ ಬರುವುವು.

ಇದುವರಿಗೂ ನಾನು ಮಗುವಿನ ವಿದ್ಯಾಭ್ಯಾಸದ ಎರಡು ಭಾಗಗಳನ್ನು ಅವು ಭಿನ್ನ ಭಿನ್ನವಾದ ಅಂಶಗಳಂತೆ ವರ್ಣಿಸಿರುವೆನು. ಆದರೆ ವಸ್ತುತಃ ಇದು ಸರಿಯಲ್ಲ. ಮೊದಲನೇ ಭಾಗದಿಂದ ಮಗುವು ಪ್ರಪಂಚದಲ್ಲಿ ವಿಶೇಷ ಅಭಿವೃದ್ಧಿಗೆ ಬಂದಿರುವ ಜನರಂತೆ ಆಗುವನು. ಪ್ರಕೃತಿ ಸಂಬಂಧವಾದ ಅಂಶಗಳು ಈ ಕಾಲದಲ್ಲೇ ಅವನ ಮನಸ್ಸನ್ನು ಪ್ರವೇಶಿಸಿ ಮನುಷ್ಯಸಿಗೆ ಸಂಬಂಧವಾಗ ಅಂಶಗಳೊಡನೆ ಸೇರಿಕೊಳ್ಳುವುವು. ಈ ಎರಡು ಅಂಶಗಳ ಸಹಾಯದಿಂದ ಮಗುವು ತನಿಗೂ ದೇವರಿಗೂ ಇರುವ ಸಂಬಂಧವನ್ನು ತಿಳಿಯಲು ಶಕ್ತನಾಗುವನು. ಇದೇ ವಿದ್ಯಾಭ್ಯಾಸದ ಪರಮೋದ್ದೇಶವು. ಈ ಉದ್ದೇಶಕ್ಕನುಸಾರವಾಗಿ ಮಕ್ಕಳ ವಿದ್ಯಾಭ್ಯಾಸದ ಎಲ್ಲಾ ಭಾಗಗಳೂ ಪರಸ್ಪರ ಸಂಬಂಧ ಉಳ್ಳವುಗಳಾಗಿರಬೇಕೆಂಬುದು ಸ್ಪಷ್ಟವಾಗಿಯೇ ಇರುವುದು. ಪೆಸ್ಟಲಾಟ್ಸಿಯು ಶಿಕ್ಷಣ ಕ್ರಮದಲ್ಲಿ ಇಂತಹ ಸಂಬಂಧವಿಲ್ಲದಿದ್ದುದು ಒಂದು ದೊಡ್ಡ ಕೊರತೆಯೆಂದು ಫ್ರೊಬೆಲ್ಲನು ಬರೆದಿರುವನು. ಮಕ್ಕಳ ವಿದ್ಯಾಭ್ಯಾಸದ ಎಲ್ಲ ಭಾಗಗಳಿಗೂ ಪರಸ್ಪರ ಸಂಬಂಧವಿರಬೇಕೆಂಬುದು ಫ್ರೊಬೆಲ್ಲನ ಗ್ರಂಥಗಳಲ್ಲೆಲ್ಲಾ ಕಾಣುತಿರುವುದು. ಹೀಗಿದ್ದರೂ ಫ್ರೊಬೆಲ್ಲನ ಗ್ರಂಥಗಳನ್ನು ಚೆನ್ನಾಗಿ ಓದದ ಕೆಲವರು ಮಕ್ಕಳ ವಿದ್ಯಾಭ್ಯಾಸದಲ್ಲಿ ಪರಸ್ಪರ ಸಂಬಂಧವನ್ನು ಕಲ್ಪಿಸಿದುದು ಫ್ರೊಬೆಲ್ಲನಿಂದ ಈಚಿಗೆ ಎಂದು ಹೇಳುವರು. ಆದರೆ ಇವರ ಅಭಿಪ್ರಾಯವು ಸಕಾರಣವಾದುದೆಂದು ತೋರುವುದಿಲ್ಲ.

ಫ್ರೊಬೆಲ್ಲನಿಂದೀಚಿಗೆ ಅವನ ಶಿಕ್ಷಣಕ್ರಮದ ಒಂದು ಭಾಗದಲ್ಲಿ ಮಾತ್ರ ವ್ಯತ್ಯಾಸವುಂಟಾಗಿರುವುದು; ಮತ್ತು ಈ ವ್ಯತ್ಯಾಸವು ಆವಶ್ಯಕವೆಂದು ತೋರುವುದು. ಫ್ರೊಬೆಲ್ಲನಿಗೆ ಗಣಿತಶಾಸ್ತ್ರದಲ್ಲಿದ್ದ ವಿಶೇಷವಾದ ಜ್ಞಾನವು ಮನಶ್ಶಾಸ್ತ್ರಕ್ಕೆ ಸಂ

ಬಂಧವಾದ ತಿಳಿವಳಿಕೆಯನ್ನು ಕೆಲವುವೇಳೆ ಮುಚ್ಚುತಿತ್ತು, ಉದಾಹರಣೆಗಾಗಿ ಫ್ರೊಬೆಲ್ಲನು ಮಕ್ಕಳಿಗೆ ಚಿತ್ರಬರೆವುದನ್ನು ಕಲಿಸಲು ಸರಳರೇಖೆಯನ್ನು ಆದಿಯಾಗಿ ಇಟ್ಟುಕೊಂಡಿರುವನು. ಆದರೆ ಮಗುವಿಗೆ ಬಾಲ್ಯದಿಂದ ಬಳಕೆಯಾಗಿರುವದು ಸರಳ ರೇಖೆಯಲ್ಲ, ಪದಾರ್ಥಗಳ ಒಟ್ಟು ಗಾತ್ರವು ಮತ್ತು ಆಕೃತಿಯು. ಆದುದರಿಂದ ಈಗಿನ ವಿದ್ವಾಂಸರು ಚಿತ್ರಬರೆಸುವುದಕ್ಕೆ ಪದಾರ್ಥಗಳ ಒಟ್ಟು ಗಾತ್ರವನ್ನೇ ಆಧಾರವಾಗಿಟ್ಟುಕೊಳ್ಳುವರು. ಈಗ ಮಕ್ಕಳು ವಸ್ತುಗಳ ಚಿತ್ರವನ್ನು ಬರೆಯುವಾಗ ಮ್ಯಾನ್ ಡಾ ಯಿಂಗನ್ನು ಬರೆಯುವರು. ಅಂದರೆ ಪದಾರ್ಥಗಳ ಒಟ್ಟು ಆಕೃತಿಯನ್ನು ತೋರ್ಪಡಿಸುವರು. ಹೀಗೆ ಕೆಲವುಕಾಲ ಅಭ್ಯಾಸವಾದಮೇಲೆ ಸರಳರೇಖೆಗಳನ್ನು, ವಕ್ರರೇಖೆಗಳನ್ನೂ ಬರೆಯಲು ಉಪಕ್ರಮಿಸುವರು. ಮನಶಾಸ್ತ್ರದಲ್ಲಿ ವಿಶೇಷ ಅನುಭವವುಳ್ಳವರು ಇದೇ ಸರಿಯಾದ ಕ್ರಮವೆಂದು ಒಪ್ಪುವರು.

ಫ್ರೊಬೆಲ್ಲನ ಕ್ರಮದಲ್ಲಿ ಉಪಯೋಗಿಸಲ್ಪಟ್ಟಿರುವ ಉಪಕರಣಗಳ ವಿಷಯವನ್ನು ಸ್ವಲ್ಪ ವರ್ಣಿಸುವೆನು. ಫ್ರೊಬೆಲ್ಲನು ಸಂಚರಿಸಿದ ನಾನಾದೇಶಗಳಲ್ಲಿ ಮಕ್ಕಳು ತಮ್ಮ ಆಟಗಳಲ್ಲಿ ಉಪಯೋಗಿಸುತಿದ್ದ ಉಪಕರಣಗಳಿಂದಲೇ ಇವನು ತನಗೆ ಬೇಕಾದ ಉಪಕರಣಗಳನ್ನು ಆರಿಸಿಕೊಂಡಿರುವನು. ಇವನು ಹೀಗೆ ಆರಿಸಿಕೊಳ್ಳುವಾಗ ಮೂರು ಉದ್ದೇಶಗಳನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಂತೆ ಕಾಣುವುದು.

(1) ಮಕ್ಕಳ ಕಲ್ಪನೆಗೆ ಅವಕಾಶವಿರುವಂತೆ ಉಪಕರಣವು ಒರಟಾಗಿಯೂ ಸುಲಭವಾಗಿಯೂ ಇರುವುದು. ಸಂಪೂರ್ಣವಾಗಿ ಅಲಂಕೃತವಾದ ಅಥವಾ ಸರ್ವಾಪಯೋಗಗಳಿಂದ ಕೂಡಿದ ಬೊಂಬೆ ಮುಂತಾದ ಸಾಮಗ್ರಿಗಳಿಗೆ ಇವನ ಕ್ರಮದಲ್ಲಿ ಅವಕಾಶವಿಲ್ಲ.

(2) ಮಗುವಿನಶಕ್ತಿ ಹೆಚ್ಚಿದಂತೆ ಉಪಕರಣವು ಕಷ್ಟವಾಗುತ ಬರುವುದು.

(3) ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ಇತರರಿಗೆ ತಿಳಿಸುವುದಕ್ಕೆ ಅನುಕೂಲವಾಗಿರುವುದು.

ಮಕ್ಕಳು ತಮ್ಮಲ್ಲಿರುವ ಕಾರ್ಯಾಪೇಕ್ಷೆಯನ್ನು ಕೈಕೆಲಸಗಳಲ್ಲಿ ಉಪಯೋಗಿಸಿ ತಮ್ಮ ಅಭಿಪ್ರಾಯಗಳನ್ನು ಇತರರಿಗೆ ತಿಳಿಯಪಡಿಸಬೇಕೆಂಬುದೇ ಈ ಉಪಕರಣಗಳು ಮುಖ್ಯೋದ್ದೇಶವಾದುದರಿಂದ ಈ ಉದ್ದೇಶಕ್ಕೆ ಅನುಕೂಲವಾದ ಉಪಕರಣಗಳನ್ನೇ ಫ್ರೊಬೆಲ್ಲನು ಆರಿಸಿಕೊಂಡಿರುವನು. ಇವನಿಂದೀಚಿಗೆ ಇನ್ನೂ ಅನೇಕ

ಉಪಕರಣಗಳನ್ನು ಸೇರಿಸಿರುವರು. ಆದರೆ ಹೀಗೆ ಸೇರಿಸುವುದಕ್ಕೂ ಪ್ರೊಬೆಲ್ಲನ ಉದ್ದೇಶಗಳನ್ನೇ ಆಧಾರವಾಗಿಟ್ಟುಕೊಂಡು ಅವಕ್ಕನುಗುಣವಾದವುಗಳನ್ನೇ ಸೇರಿಸಿರುವರು. ಪ್ರೊಬೆಲ್ಲನು ಏರ್ಪಡಿಸಿರುವ ಕ್ರಮದಲ್ಲಿ ಇಷ್ಟೇ ಉಪಕರಣಗಳಿರಬೇಕು ಇನ್ನು ಹೆಚ್ಚಾಗಿರಕೂಡದು ಎಂಬ ನಿಯಮವಿಲ್ಲ. ಈಗ ಪ್ರಪಂಚದ ನಾನಾರಾಜ್ಯಗಳಲ್ಲಿ ವಿಶೇಷ ಉತ್ಸಾಹದಿಂದ ಕೆಲಸಮಾಡುವ ಕಿಂಡರ್ ಗಾರ್ಟ್ನ ಉಪಾಧ್ಯಾಯರು ಇರುವರು. ಇವರು ಕೆಲಸಮಾಡುವಕಾಲದಲ್ಲಿ ತಮ್ಮದೇಶಕ್ಕನುಗುಣವಾದ ಹೊಸ ಉಪಕರಣಗಳನ್ನು ಏರ್ಪಡಿಸಿಕೊಳ್ಳಬಹುದು. ಇವು ಪ್ರೊಬೆಲ್ಲನ ಉದ್ದೇಶಗಳನ್ನು ನೆರವೇರಿಸುವುದಕ್ಕೆ ಅನುಕೂಲವಾಗಿದ್ದರೆ ಕಿಂಡರ್ ಗಾರ್ಟ್ನ ಕ್ರಮದಲ್ಲಿ ಸೇರಲು ಅಭ್ಯಂತರವೇ ಇರುವುದಿಲ್ಲ. ಪ್ರೊಬೆಲ್ಲನ ಉದ್ದೇಶವನ್ನು ಸಂಪೂರ್ಣವಾಗಿ ನೆರವೇರಿಸುವ, ಅವನ ಪಟ್ಟಿಯಲ್ಲಿ ಕಾಣಿಸಲ್ಪಡದೇ ಇರುವ, ಹೊಸದಾದ ಉಪಕರಣಗಳ ಒಂದು ಪಟ್ಟಿಯನ್ನು ಏರ್ಪಡಿಸಿಕೊಳ್ಳುವುದು ಸಾಧ್ಯವೆಂದು ತೋರುವುದು.

ಚೈತನ್ಯವುಳ್ಳ ಬೆಳೆಯುವ ಮಗುವಿನ ವಿದ್ಯಾಭ್ಯಾಸಕ್ಕೆ ಅಚೇತನವಾದ ಉಪಕರಣಗಳನ್ನು ಏರ್ಪಡಿಸಿದುದು ಪ್ರೊಬೆಲ್ಲನ ಶಿಕ್ಷಣಕ್ರಮದಲ್ಲಿ ಒಂದು ಕೊರತೆಯೆಂದು ಕೆಲವರು ಹೇಳುವರು. ಹೀಗೆ ಹೇಳುವವರು ಮಗುವಿನಲ್ಲಿ ಮುಖ್ಯವಾಗಿರುವ ಒಂದು ಲಕ್ಷಣಕ್ಕೆ ಸರಿಯಾಗಿ ಗಮನಕೊಡಲಿಲ್ಲವೆಂದು ತೋರುವುದು. ಕಲ್ಪನೆಯು ಬಹು ವಿಶೇಷವಾಗಿರುವುದೇ ಈ ಲಕ್ಷಣವು. ನನ್ನ ಅಭಿಪ್ರಾಯವನ್ನು ಸ್ಥಿರಪಡಿಸುವುದಕ್ಕೆ ನನ್ನ ಅನುಭವದಿಂದ ಒಂದು ನಿದರ್ಶನವನ್ನು ಕೊಡುವೆನು. ಕೆಲವು ತಿಂಗಳಕೆಳಗೆ ಮೂರುನಾಲ್ಕು ವಯಸ್ಸುಳ್ಳ ನನ್ನ ಸೋದರಳಿಯನೊಬ್ಬನು ನನ್ನಲ್ಲಿ ಇದ್ದನು. ಈ ಮಗುವು ಬೀದಿಯಲ್ಲಿ ಸಂಚರಿಸುವ, ಮತ್ತು ಲಾಯದಲ್ಲಿ ಕಟ್ಟಿಹಾಕಿದ್ದ ಆನೆಗಳ ಕೆಲಸಗಳನ್ನು ನೋಡಲು ವಿಶೇಷ ಕುತೂಹಲವುಳ್ಳವನಾಗಿದ್ದನು. ತಾನೂ ಇಂತಹ ಆಶ್ಚರ್ಯಕರವಾದ ಪ್ರಾಣಿಯೊಂದನ್ನು ಇಡಬೇಕೆಂಬ ಕುತೂಹಲವು ಇವನಿಗೆ ಹುಟ್ಟಿತು. ಇವನ ಆಟಕ್ಕಾಗಿ ಒಂದು ಮರದ ಆನೆಯನ್ನು ತರಿಸಿಕೊಟ್ಟೆನು. ಇವನು ತನ್ನ ಆನೆಯನ್ನು ಜೀವವುಳ್ಳ ಆನೆಗಳನ್ನು ಅಲಂಕರಿಸಿದ್ದಂತೆ ಅಲಂಕರಿಸಿ ಅದರಮುಂದೆ ಹುಲ್ಲುಹಾಕಿ ಅದನ್ನು ಕಂಬಕ್ಕೆ ಕಟ್ಟಿದನು. ನಿಜವಾದ ಆನೆಯಮೇಲೆ ಮಾವಟಿಗರು ಸವಾರಿಮಾಡುವಂತೆ ಇವನು ತನ್ನ ಆನೆಯ ಮೇಲೆ ಕುಳಿತು ಸವಾರಿಮಾಡುತಿದ್ದಂತೆ ನಟಿಸುತಿದ್ದನು. ಒಂದು ದಿವಸ ಮಧ್ಯಾ

ಹ್ನ ಇವನು ಊಟಮಾಡುತಿದ್ದಾಗ ದೊಡ್ಡಮಳೆಯು ಬಂದಿತು. ಒಡನೆಯೇ ತನ್ನ ಆನೆಯು ಅಂಗಳದಲ್ಲಿ ಮಳೆಯಲ್ಲಿ ನೆನೆಯುತಿರುವುದೆಂದು ಜ್ಞಾಪಿಸಿಕೊಂಡು ಓಡಿ ಹೋಗಿ ಅದನ್ನು ಒಳಗೆತಂದು ಒಂದು ಮೂಲೆಯಲ್ಲಿ ಕಟ್ಟಿಹಾಕಿ ಅದರಮುಂದೆ ಹುಲ್ಲನ್ನು ಹಾಕಿದನು. ದೊಡ್ಡವರ ದೃಷ್ಟಿಯಿಂದ ನೋಡಿದರೆ ಈ ಆನೆಯು ಒಂದು ಮರದತುಂಡೇ ಆಗಿರುವುದು. ಆದರೆ ಆ ಮಗುವಿಗೆ ಈ ಮರದ ಆನೆಯು ತಾನು ಬೀದಿಯಲ್ಲಿ ನೋಡುತಿದ್ದ ಆನೆಗಳಂತೆಯೇ ಜೈತನ್ಯವುಳ್ಳದ್ದಾಗಿತ್ತು. ಈ ಯಂಶವೇ ಫ್ರೊಬೆಲ್ಲನ ಉಪಕರಣಗಳಿಗೆಲ್ಲ ಅನ್ವಯಿಸುವುದೆಂದು ನನಗೆ ತೋರುವುದು. ಈ ಉಪಕರಣಗಳು ದೊಡ್ಡವರಿಗೆ ಅಚೇತನವಸ್ತುಗಳಾಗಿ ತೋರಬಹುದು. ಆದರೆ ಮಕ್ಕಳು ತಮ್ಮ ಕಲ್ಪನೆಯ ಪ್ರಭಾವದಿಂದ ತಾವು ನೋಡುವ ವಸ್ತುಗಳಲ್ಲಿರುವ ಜೈತನ್ಯವನ್ನು ಈ ಉಪಕರಣಗಳಿಗೂ ಆರೋಪಿಸಿ ಅವುಗಳೊಡನೆ ಆಡುವರು.

ಎಲ್ಲಪಾಠಶಾಲೆಗಳಲ್ಲೂ ಈ ಉಪಕರಣಗಳನ್ನು ಉಪಯೋಗಿಸಲು ವಿಶೇಷ ದ್ರವ್ಯಾನುಕೂಲವು ಅವಶ್ಯಕವೆಂದು ಕೆಲವರು ಹೇಳಬಹುದು. ಆದರೆ ಈ ವರ್ಷ ನಾನು ಎಗ್ಜಿಬಿಷನ್ನಲ್ಲಿ ಇಟ್ಟಿರುವ ಕೆಲವು ವಸ್ತುಗಳಿಂದ ಇಂತಹ ಉಪಕರಣಗಳನ್ನು ಏರ್ಪಡಿಸಿಕೊಳ್ಳುವುದಕ್ಕೆ ವಿಶೇಷ ದ್ರವ್ಯವು ಅವಶ್ಯಕವಿಲ್ಲವೆಂಬುದನ್ನು ತೋರ್ಪಡಿಸಲು ಯತ್ನಿಸಿರುವೆನು. ಉಪಾಧ್ಯಾಯರಲ್ಲಿ ವಿಶೇಷ ಉತ್ಸಾಹವಿದ್ದರೆ ಇಂತಹ ತೊಂದರೆಗಳನ್ನೆಲ್ಲಾ ದಾಟುವ ಮಾರ್ಗವನ್ನು ಅವರು ಸುಲಭವಾಗಿ ತಿಳಿಯುವರು.

ಫ್ರೊಬೆಲ್ಲನ ಕ್ರಮದಲ್ಲಿ ಉಪಾಧ್ಯಾಯರಿಗೂ ಮಕ್ಕಳಿಗೂ ಇರಬೇಕಾದ ಸಂಬಂಧವನ್ನು ಕುರಿತು ಕೆಲವು ಮಾತುಗಳನ್ನು ಹೇಳುವುದು ಅವಶ್ಯಕವು. ಮಕ್ಕಳಿಗೋಸ್ಕರ ಬೀವಿಸಬೇಕೆಂಬುದೇ ಫ್ರೊಬೆಲ್ಲನ ನಿಯಮವಾದುದರಿಂದ ಈ ಸಂಬಂಧವು ಪ್ರೀತಿ ಮತ್ತು ಅನುತಾಪರೂಪವಾದದ್ದಾಗಿರಬೇಕೆಂಬುದು ಸ್ಪಷ್ಟಪಡುವುದು. ಈ ವಿಷವಾದ ಸಂಬಂಧಕ್ಕೆ ನಾನು ಒಂದು ನಿದರ್ಶನವನ್ನು ಕೊಡುವೆನು. ಇನ್ಸ್ಪೆಕ್ಟರ್ ಜನರಲ್ ಸಾಹೇಬರವರು ನಮ್ಮ ಪ್ರಾಕ್ಟಿಸಿಂಗ್ ಸ್ಕೂಲಿನ ಮಕ್ಕಳು ಮಾಡಿರುವ ತೋಟವನ್ನು ನೋಡಲು ದಯಮಾಡಿದ್ದಾಗ ಒಂದು ಸಣ್ಣ ಮಗುವು ಅವರ ಬಳಿಗೆ ಹೋಗಿ ಕೈಯ್ಯನ್ನು ಹಿಡಿದುಕೊಂಡು ನನ್ನ ಪಾತಿಯನ್ನು ನೋಡಿದಿರಾ ? ಎಂದು ಕೇಳಿತು. ಇಂತಹ ಸಂದರ್ಭದಲ್ಲಿ ಕೋಪಿಷ್ಠನಾದ ಉಪಾಧ್ಯಾಯನು

ಮಗುವು ತೆಗೆದುಕೊಂಡ ಸ್ವಾತಂತ್ರ್ಯಕ್ಕಾಗಿ ಗದರಿಸುತ್ತಿದ್ದನು. ಮಕ್ಕಳಲ್ಲಿ ಅನು ತಾಪವಿಲ್ಲದ ಉಪಾಧ್ಯಾಯನು ಮಗುವಿನ ಮಾತಿನಲ್ಲಿ ಔದಾಸೀನ್ಯವನ್ನು ವಹಿಸುತ್ತಿದ್ದನು. ಆದರೆ ಮಕ್ಕಳಲ್ಲಿ ವಿಶೇಷ ಅನುತಾಪವುಳ್ಳ ಉಪಾಧ್ಯಾಯನು ಒಡನೆಯೇ ಮಗುವಿನ ಮಾತಿನಲ್ಲಿ ಆದರವನ್ನು ತೋರ್ಪಡಿಸಿ ಅದರಜೊತೆಯಲ್ಲಿ ಪಾತಿಗೆ ಹೋಗಿ ಆದರ ಸಂತೋಷಕ್ಕೆ ತಾನೂ ಭಾಗಿಯಾಗುವನು, ಇನ್‌ಸ್ಪೆಕ್ಟರ್‌ಜನರಲ್ ಸಾಹೇಬರವರು ಆ ಮಗುವಿನ ವಿಷಯದಲ್ಲಿ ಹೀಗೆಯೇ ನಡೆದುಕೊಂಡರೆಂದು ನಾನು ಹೇಳಬೇಕಾದುದೇ ಇಲ್ಲ. ನಮ್ಮ ದೇಶದಲ್ಲಿರುವ ಉಪಾಧ್ಯಾಯರು ಇನ್‌ಸ್ಪೆಕ್ಟರ್‌ಜನರಲ್ ಸಾಹೇಬರವರ ಮೇಲ್ಪಚ್ಚಿಯನ್ನು ಅನುಸರಿಸಿದರೆ ನಮ್ಮ ಪಾಠಶಾಲೆಗಳಲ್ಲಿ ಓದುವ ಮಕ್ಕಳ ಸೌಖ್ಯವು ಹೆಚ್ಚುವುದರಲ್ಲಿ ಸಂಶಯವಿಲ್ಲವೆಂದು ತೋರುವುದು.

ಮೇಲೆ ವಿವರಿಸಿರುವ ಕ್ರಮಕ್ಕನುಸಾರವಾಗಿ ಸಣ್ಣಮಕ್ಕಳ ವಿದ್ಯಾಭ್ಯಾಸವನ್ನು ನಡೆಸುವಾಗ ನನಗೆ ಉಂಟಾಗಿರುವ ಅನುಭವವನ್ನು ಕುರಿತು ಸ್ವಲ್ಪ ಮಾತನಾಡುವೆನು. ಇನ್‌ಸ್ಪೆಕ್ಟರ್‌ಜನರಲ್ ಸಾಹೇಬರವರು ಪ್ರಾಕ್ಟೀಸಿಂಗ್ ಸ್ಕೂಲಿನ ಮಕ್ಕಳ ತರಗತಿಗಳನ್ನು ಪ್ರೊಬೆಲ್ಲನ ಕ್ರಮಕ್ಕನುಸಾರವಾಗಿ ಕೆಲಸದಲ್ಲಿ ತೊಡಗಿಸಬೇಕೆಂದು ನಿಯಮಿಸಿದಾಗ ನಾನು ನನ್ನ ಕೆಲಸದ ಫಲದ ವಿಷಯದಲ್ಲಿ ವಿಶೇಷ ಅಧೈರ್ಯಪಟ್ಟೆನು. ಆದರೆ ನಾರ್ಮಲ್‌ಸ್ಕೂಲ್ ಹೆಡ್‌ಮಾಸ್ಟರವರು ನಾನು ಅಪೇಕ್ಷಿಸಿದಾಗಲೆಲ್ಲ ನನಗೆ ಮಾಡಿದ ಆದರಪೂರ್ವಕವಾದ ಸಹಾಯದಿಂದಲೂ, ಪ್ರಾಕ್ಟೀಸಿಂಗ್ ಸ್ಕೂಲಿನ ಹೆಡ್‌ಮಾಸ್ಟರವರು ಮತ್ತು ಸುಶಿಕ್ಷಿತರಾದ ಸಹಾಯೋಪಾಧ್ಯಾಯರು ನಾನು ಹೇಳಿದ ಕೆಲಸಗಳನ್ನು ಮನಃಪೂರ್ವಕವಾಗಿ ನಡೆಸಿದುದರಿಂದಲೂ, ನನ್ನ ಕೆಲಸವು ನಾನು ಊಹಿಸಿದ್ದಕ್ಕಿಂತಲೂ ಸುಲಭವಾಯಿತು. ಮಿಸ್ ಲ್ಯಾಟರವರು ಬೆಂಗಳೂರು ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಲ್ಲಿ ಸುಶಿಕ್ಷಿತರಾಗಿಲ್ಲದಿದ್ದ ಉಪಾಧ್ಯಾಯರಿಂದ ಅನುಭವಿಸಿದ ಕಷ್ಟಗಳಲ್ಲಿ ಅರ್ಧವನ್ನೂ ನಾನು ಅನುಭವಿಸಲಿಲ್ಲ. ಮೊದಲೇ ಸರಿಯಾಗಿ ಯೋಚಿಸಿ ನಿಶ್ಚಯಿಸಲ್ಪಟ್ಟಿದ್ದ ಕ್ರಮದಲ್ಲಿ ಕೆಲಸವು ಪ್ರಾರಂಭವಾಗಿ ಆದಿಯಿಂದಲೂ ಅದು ತೃಪ್ತಿಕರವಾಗಿ ನಡೆಯುತಿರುವುದು. ನಾರ್ಮಲ್‌ಸ್ಕೂಲಿಗೆ ಪ್ರತಿವರ್ಷವೂ ಬರುವ ಅನೇಕ ಉಪಾಧ್ಯಾಯರಲ್ಲಿ ಕಾಣುವ ಒಂದು ಕೊರತೆಯು ನಮ್ಮ ಪ್ರಾಕ್ಟೀಸಿಂಗ್ ಸ್ಕೂಲಿನ ಉಪಾಧ್ಯಾಯರಲ್ಲಿಯೂ ಕಾಣುವುದು. ಈ ಕೊರತೆಯಿಂದ ಶೀಘ್ರವಾಗಿ ಅಭಿವೃದ್ಧಿಯನ್ನು ಹೊಂದುವುದಕ್ಕೆ ಸ್ವಲ್ಪ ಅಡ್ಡಿಯುಂಟಾಗಿರುವುದು. ಯಾವುದಾದರೂ ಒಂದು ಪ್ರಕೃತಿ ವಿಮರ್ಶೆಯನ್ನು ನಡೆಸುವ ಕ್ರಮ.

ವನ್ನು ಅವರ ಮುಂದಿಟ್ಟರೆ ಅವರು ಅದನ್ನು ಸರಿಯಾಗಿ ನಡೆಸುವರು. ಆದರೆ ತಾವೇ ಒಂದು ಹೊಸಕ್ರಮವನ್ನು ಏರ್ಪಡಿಸಿಕೊಂಡು ಕೆಲಸ ನಡೆಸುವ ಶಕ್ತಿಯು ಅವರಿಗೆ ಉಂಟಾಗಿಲ್ಲ. ನಡೆಸುವವನ ಕೈ ನಿಂತರೆ ಮಧ್ಯ ಸಮುದ್ರದಲ್ಲಿರುವ ಹಡಗಿನ ಸ್ಥಿತಿಯು ಹೇಗೋ ಅದರಂತಾಗುವುದು. ಆದುದರಿಂದ ಸಾಧ್ಯವಾದಾಗಲೆಲ್ಲ ನನ್ನ ಸಹಾಯವನ್ನು ಕಡಮೆ ಮಾಡುವುದಕ್ಕೆ ಪ್ರಯತ್ನಪಡುತಿರುವೆನು. ಆದರೆ ದೇಶಭಾಷೆಯಲ್ಲಿ ಶಕ್ತಿಶಾಸ್ತ್ರ, ವಸ್ತುಶಾಸ್ತ್ರ, ಸಸ್ಯಶಾಸ್ತ್ರ, ಭೂಗರ್ಭಶಾಸ್ತ್ರ, ಮತ್ತು ಪ್ರಾಣಿಶಾಸ್ತ್ರ ಈ ಶಾಸ್ತ್ರಗಳ ವಿಷಯದಲ್ಲಿ ಒಳ್ಳೇ ಪುಸ್ತಕಗಳು ಇಲ್ಲದಿರುವುದು ಅವರು ತಮ್ಮ ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೆ ಒಂದು ದೊಡ್ಡ ಪ್ರತಿಬಂಧಕವಾಗಿರುವುದು. ಈ ಕೊರತೆಯು ಬೇಗ ತೊಲಗಬೇಕೆಂದು ನಾನು ಕೋರುವೆನು.

ಕಳೆದ ಒಂಭತ್ತು ತಿಂಗಳಲ್ಲಿ ಮಕ್ಕಳ ತರಗತಿಗಳಲ್ಲಿ ನಾಲ್ಕು ಪ್ರಕೃತಿವಿಷಯಕವಾದ ವಿಮರ್ಶೆಗಳು ನಡೆದುವು. ನವರಾತ್ರಿಯ ರಜವು ಪೂರೈಸಿದಮೇಲೆ ಮಕ್ಕಳು ಪಾಠಶಾಲೆಯಲ್ಲಿಟ್ಟು ಸಾಕುತಲಿರುವ ಪಾರಿವಾಳದ ಹಕ್ಕಿಗಳ ವಿಷಯವನ್ನು ವಿಮರ್ಶೆಮಾಡಲು ಪ್ರಾರಂಭಿಸುವರು. ಬ್ರಷ್ ಕೆಲಸ, ಕ್ಲೇಮಾಡಲಿಂಗ್, ಮರಳಿನ ಕೆಲಸ, ಕಾಗದದಕೆಲಸ ಮುಂತಾದ ಕೈಕೆಲಸಗಳೆಲ್ಲವೂ ಪ್ರಕೃತಿವಿಮರ್ಶೆಯು ಪಾಠದೊಡನೆ ಸಂಬಂಧಿಸಲ್ಪಟ್ಟಿರುವುವು. ಒಂದನೇ ತರಗತಿಯಲ್ಲಿ ಮಕ್ಕಳು ಪ್ರಕೃತಿವಿಮರ್ಶೆಯು ಕಾಲದಲ್ಲಿತಾವು ನೋಡಿದ ಅಂಶಗಳನ್ನು ಬರವಣಿಗೆಯಲ್ಲೂ ಚಿತ್ರರೂಪದಲ್ಲೂ ತೋರ್ಪಡಿಸುವ ಪುಸ್ತಕಗಳನ್ನಿಟ್ಟಿರುವರು. ಈ ಪುಸ್ತಕಗಳಲ್ಲಿ ಕೆಲವು ಈವರ್ಷ ಯಗ್ಜಿಬಿಷನ್‌ನಲ್ಲಿ ಇರುವುವು. ಕೆಳಗಿನ ತರಗತಿಯಲ್ಲಿ ಬಾಲಕರು ತಮ್ಮ ಅನುಭವವನ್ನು ಬರವಣಿಗೆಯಲ್ಲಿ ತೋರ್ಪಡಿಸುವ ಶಕ್ತಿಯನ್ನು ಹೊಂದಿಲ್ಲವಾದುದರಿಂದ ಚಿತ್ರರೂಪದಲ್ಲಿ ಮಾತ್ರ ತೋರ್ಪಡಿಸುವರು. ಇಂತಹ ಚಿತ್ರಗಳು ಎಗ್ಜಿಬಿಷನ್‌ನಲ್ಲಿ ಇಡಲ್ಪಟ್ಟಿರುವುವು.

ಈ ವರ್ಷ ಜೂನ್ ತಿಂಗಳಿಂದೀಚೆಗೆ ಎರಡು ಮೂರನೇ ತರಗತಿಗಳಲ್ಲಿ ಕೆಂಡರ್‌ಗಾರ್ಟ್ನ್ ಕ್ರಮಕ್ಕನುಸಾರವಾಗಿ ಪಾಠವು ನಡೆಯುತ್ತಿರುವುದು. ಪ್ರಕೃತಿವಿಮರ್ಶೆಯು ಈತರಗತಿಗಳಲ್ಲೂ ಒಂದು ಮುಖ್ಯ ಪಾಠವಾಗಿರುವುದು. ಈ ತರಗತಿಗಳಲ್ಲಿ ನಡೆಯುವ ವಿಮರ್ಶೆಯು ಮಕ್ಕಳ ತರಗತಿಗಳಲ್ಲಿ ನಡೆಯುವ ವಿಮರ್ಶೆಗಿಂತಲೂ ಸ್ವಲ್ಪಮಟ್ಟಿಗೆ ಪ್ರೌಢವಾದುದು. ಇಲ್ಲಿನ ವಿಮರ್ಶೆಯಲ್ಲಿ ಪ್ರಾಕೃತಿಕ ಶಾಸ್ತ್ರಗಳಿಗೆ ಸಂಬಂಧಪಟ್ಟ ಕಷ್ಟವಾದ ಅಂಶಗಳಿಗೆ ಹೆಚ್ಚು ಗಮನವನ್ನು ಕೊಡುವೆವು.

ಇವರು ತಮ್ಮ ಅನುಭವವನ್ನು ಭಾಷೆ, ಚಿತ್ರ, ಮತ್ತು ಬ್ರಷ್‌ವರ್ಕ್ ರೂಪದಲ್ಲಿ ತೋರ್ಪಡಿಸುತ್ತಿರುವರು. ಸಾಧ್ಯವಾದಾಗಲೆಲ್ಲ ಈ ತರಗತಿಗಳಲ್ಲಿ ನಡೆಯುವ ಮಣ್ಣಿನ ಕೆಲಸ, ಬೆತ್ತದ ಕೆಲಸ ಮುಂತಾದ ಕೈಕೆಲಸಗಳು ಪ್ರಕೃತಿವಿಮರ್ಶೆಯ ಪಾಠದೊಡನೆ ಸಂಬಂಧಿಸಲ್ಪಡುವವು. ಈ ತರಗತಿಗಳು ಈಗ ಹತ್ತಿಯಜಾತಿಗೆ ಸೇರಿದ ಹತ್ತಿ, ದಾಸವಾಳ, ದೊಡ್ಡಬಿಂದಿಗೆ ಮುಂತಾದ ಗಿಡಗಳನ್ನು ಪರೀಕ್ಷಿಸುತಿರುವರು.

ಎಲ್ಲಾ ತರಗತಿಗಳೂ ಪ್ರತಿದಿವಸವೂ ತೋಟದ ಕೆಲಸವನ್ನು ಮಾಡುವುವು. ಪ್ರತಿಯೊಂದು ತರಗತಿಗೂ ಕೆಲವು ಪಾತಿಗಳಿರುವುವು. ಈ ತೋಟದ ಕೆಲಸದಲ್ಲಿ ಮಕ್ಕಳು ವಿಶೇಷ ಔತ್ಸುಕ್ಯವನ್ನು ತೋರ್ಪಡಿಸುತಿರುವುದು ಬಹಳ ಸಂತೋಷಕರವಾಗಿರುವುದು. ಈ ತೋಟದಲ್ಲಿ ಬೆಳೆಯುವ ವಸ್ತುಗಳು ಆಯಾಯ ಪಾತಿಗಳಲ್ಲಿ ಕೆಲಸಮಾಡುವ ಬಾಲಕರಿಗೆ ಕೊಡಲ್ಪಡುವವು. ಅವರು ಅವನ್ನು ತಮಗೆ ಬೇಕಾದ ರೀತಿಯಲ್ಲಿ ವಿನಿಯೋಗಿಸಬಹುದು. ಈ ಮಕ್ಕಳೆಲ್ಲರೂ ಮನೆಯಲ್ಲೂ ಒಂದು ಸಣ್ಣ ತೋಟವನ್ನು ಮಾಡಿಕೊಂಡಿರುವರು. ಇವರು ತಮ್ಮ ತೋಟಗಳಲ್ಲಿ ಬೆಳೆಯುವ ಪುಷ್ಪಗಳನ್ನು ಆಗಾಗ್ಗೆ ಪಾಠಶಾಲೆಗೂ ತರುವರು.

ಮಕ್ಕಳ ತರಗತಿಗಳಲ್ಲಿ ಬಾಲಕರು ಡಿಪಾರ್ಟ್‌ಮೆಂಟಿನವರು ಗೊತ್ತುಮಾಡಿರುವ ಪಾಠಪುಸ್ತಕಗಳನ್ನೋದಬೇಕಾಗಿರುವುದರಿಂದ ಓದುವ ಪಾಠವನ್ನು ಸಂಪೂರ್ಣವಾಗಿ ಪ್ರಕೃತಿವಿಮರ್ಶೆಯ ಪಾಠದೊಡನೆ ಸಂಬಂಧಿಸುವುದು ಸಾಧ್ಯವಾಗಿಲ್ಲ. ಆದುದರಿಂದ ವಾರದಲ್ಲಿರುವ ಆರು ಓದುವ ಪಾಠಗಳಲ್ಲಿ ನಾಲ್ಕನ್ನು ಡಿಪಾರ್ಟ್‌ಮೆಂಟ್ ರೀಡರುಗಳನ್ನು ಓದುವುದಕ್ಕೆ ಇಟ್ಟಿರುವೆವು. ಉಳಿದ ಎರಡನ್ನು ಪ್ರಕೃತಿವಿಮರ್ಶೆಯ ಪಾಠಕ್ಕೆ ಸಂಬಂಧಿಸಿರುವೆವು. ಓದುವ ಪಾಠವನ್ನು ಪ್ರಕೃತಿವಿಮರ್ಶೆಯ ಪಾಠಕ್ಕೆ ಸಂಪೂರ್ಣವಾಗಿ ಸಂಬಂಧಿಸಬೇಕಾದರೆ ಈಗಿರುವ ಡಿಪಾರ್ಟ್‌ಮೆಂಟಿನ ರೀಡರುಗಳನ್ನು ಕ್ರಮಪಡಿಸಬೇಕಾಗುವುದು. ಅಥವ ಮಕ್ಕಳ ತರಗತಿಗಳಲ್ಲಿ ಓದುವ ಪುಸ್ತಕಗಳನ್ನೇ ತೆಗೆದುಹಾಕಿ ಮಕ್ಕಳು ತಾವು ಓದುವ ಪುಸ್ತಕಗಳನ್ನು ತಾವೇ ಏರ್ಪಡಿಸಿಕೊಳ್ಳುವಂತೆ ಮಾಡಬಹುದು.

ಈ ಹೊಸಕ್ರಮದಿಂದ ನಮ್ಮ ಮಕ್ಕಳಿಗುಂಟಾಗಿರುವ ಫಲದ ವಿಷಯವನ್ನು ಸ್ವಲ್ಪ ತಿಳಿಸುವೆನು. ಮಕ್ಕಳಿಗೆ ಇದುವರೆಗೂ ಪಾಠಶಾಲೆಯು ವಿಷಯದಲ್ಲಿದ್ದ ಭಯವು ಹೋಗಿ ತಾವೇ ಅಪ್ರೇರಿತವಾಗಿ ಪಾಠಶಾಲೆಗೆ ಬರುತಿರುವರು. ಪಾಠಶಾಲೆಯು ಸೌಖ್ಯವನ್ನು ಕೊಡತಕ್ಕ, ಅನೇಕವೇಳೆ ಮನೆಗಿಂತಲೂ ಹೆಚ್ಚು ಸೌಖ್ಯವನ್ನು ಕೊಡುವ ಸ್ಥಳವೆಂದು ಮಕ್ಕಳು ತಿಳಿಯುತಿರುವರು. ಅವರ ಬುದ್ಧಿಯು ಚೆನ್ನಾಗಿ ವಿಕಾಸವಾ

ಗುತಿರುವುದು. ಅವರು ಈಗ ಪಡೆಯುತಿರುವ ಜ್ಞಾನವು ತಾವೇ ವಸ್ತುಪರೀಕ್ಷೆ ಯಿಂದ ಹೊಂದಿದ ಜ್ಞಾನವಾಗಿರುವುದು. ಅವರ ಪರೀಕ್ಷಣ ಶಕ್ತಿಯು ಅಭಿವೃದ್ಧಿ ಯನ್ನೈದಿರುವುದು. ಈ ಮಕ್ಕಳಿಗೆ ತನ್ನ ಸನ್ನಿವೇಶದ ವಿಷಯದಲ್ಲಿರುವ ಜ್ಞಾನವು ದೊಡ್ಡವರಿಗೂ ಸ್ಪೃಹಣೀಯವಾಗಿರುವುದು. ಈ ಮಕ್ಕಳ ರಚನಾಶಕ್ತಿಯು ವಿಶೇ ಷ ಅಭಿವೃದ್ಧಿಯನ್ನು ಹೊಂದಿರುವುದು. ಈಗ ನಾರ್ಮಲ್ ಸ್ಕೂಲಿನಿಂದ ಈ ತರಗತಿಗಳಿಗೆ ಪಾಠಹೇಳುವುದಕ್ಕೆ ಬರುವ ಉಪಾಧ್ಯಾಯರು ಮಕ್ಕಳ ಹೆಚ್ಚು ಚಟು ವಟಿಕೆಗೆ ತಕ್ಕಂತೆ ಕೆಲಸವನ್ನುಕೊಡದಿದ್ದರೆ ಈ ತರಗತಿಗಳ ಕೆಲಸವನ್ನು ನಿರ್ವಹಿ ಸುವುದೇ ಅವರಿಗೆ ಅಸಾಧ್ಯವಾಗುವುದು. ಈಗ ಕೆಲವುದಿನಗಳ ಹಿಂದೆ ಟ್ರೈನಿಂಗ್ ತರಗತಿಯಲ್ಲಿರುವ ಒಬ್ಬರು ಉಪಾಧ್ಯಾಯರು ಬಿ. ತರಗತಿಯ ಬಾಲಕರಿಗೆ ಕಾಗದ ವನ್ನು ಕತ್ತರಿಸುವ ವಿಷಯದಲ್ಲಿ ಒಂದು ಪಾಠವನ್ನು ನಡೆಸಿದರು. ಉಪಾಧ್ಯಾ ಯರು ಟಿಪ್ಪಣಿಯನ್ನು ನನಗೆ ತೋರಿಸಿದಾಗ ಪಾಠವು ತರಗತಿಗೆ ಸ್ವಲ್ಪ ಕಷ್ಟವಾದು ದೆಂದು ಭಾವಿಸಿದೆನು. ಆದರೆ ಪಾಠವು ನಡೆದಾಗ ಮಕ್ಕಳ ಚಟುವಟಿಕೆಯನ್ನು ನೋಡಿ ನನಗೆ ಆಶ್ಚರ್ಯವಾಯಿತು. ಮಕ್ಕಳು ಉಪಾಧ್ಯಾಯರನ್ನು ಸುಲಭವಾಗಿ ಹಿಂಬಾಲಿಸುತ್ತಿದ್ದರು. ಕೆಲವರು ಉಪಾಧ್ಯಾಯರು ಮುಂದೆ ಹೇಳುವ ಕೆಲಸವನ್ನು ಊಹಿಸಿಕೊಂಡು ಮೊದಲೇ ಮಾಡಿ ಇಡುತ್ತಿದ್ದರು, ಈ ಪಾಠವು ತರಗತಿಗೆ ಸಂಪೂ ರ್ಣವಾಗಿ ಹೊಸದೆಂದು ನನಗೆ ಮೊದಲು ತಿಳಿಯದಿದ್ದರೆ ಅವರಿಗೆ ಪರಿಚಿತವಾದ ಪಾಠವೆಂದು ನಾನು ಊಹಿಸಬೇಕಾಗುತ್ತಿತ್ತು. ಈ ಮಕ್ಕಳಲ್ಲಿರುವ ರಚನಾಶಕ್ತಿ ಯನ್ನು ಮೇಲಿನ ತರಗತಿಗಳಲ್ಲಿ ಸರಿಯಾದ ಕೈಕೆಲಸಗಳಿಂದ ವೃದ್ಧಿಗೊಳಿಸಿದರೆ ಇವ ರು ವಿಶೇಷ ಅಭಿವೃದ್ಧಿಗೆ ಬರುವುದರಲ್ಲಿ ಸಂಶಯವಿಲ್ಲವೆಂದು ತೋರುವುದು.

ಈ ಮಕ್ಕಳ ನಡತೆಯ ವಿಷಯದಲ್ಲಿ ಉಂಟಾಗಿರುವ ವ್ಯತ್ಯಾಸವನ್ನು ಕುರಿತು ಸ್ವಲ್ಪ ಮಾತನಾಡುವೆನು. ನಮ್ಮ ಪಾಠಶಾಲೆಗೆ ಬರುವ ಅನೇಕ ಬಾಲಕರು ನಮ್ಮ ಸಮುದಾಯದಲ್ಲಿ ಕೆಳಗಿನ ಅಂತಸ್ತಿನಿಂದ ಬರುತಿರುವರು. ಇವರು ಪಾಠಶಾಲೆಗೆ ಬರುವುದಕ್ಕೆ ಮೊದಲೇ ಮೇಲಿನ ಅಂತಸ್ತಿನವರ ಮಕ್ಕಳಲ್ಲಿ ವಿಶೇಷವಾಗಿ ಇಲ್ಲದಿ ರುವ ಅನೇಕ ಅಸ್ಪೃಹಣೀಯವಾದ ಗುಣಗಳನ್ನು ಹೊಂದಿರುವರು. ಈ ಅಂತದಿಂದ ನನಗೆ ಅಧೈರ್ಯವುಂಟಾಗಿಲ್ಲ. ಕಿಂಡರ್‌ಗಾರ್ಟನ್ ಕ್ರಮದಿಂದ ಮಕ್ಕಳ ನಡ ತೆಯುಲ್ಲುಂಟಾಗುವ ಮೇಲು ಈ ಮಕ್ಕಳಲ್ಲಿ ಬಹುಸ್ಪಷ್ಟವಾಗಿ ಕಾಣುವುದು. ಈಗ ನಮ್ಮ ಪಾಠಶಾಲೆಯಲ್ಲಿ ಮಕ್ಕಳಿಗೂ ಉಪಾಧ್ಯಾಯರಿಗೂ ಪ್ರೀತಿಯೂ ಅನುತಾಪವೂ

ವಿಶೇಷವಾಗಿರುವುದರಿಂದ ಈ ಮಕ್ಕಳ ನಡತೆಯಲ್ಲಿ ವಿಶೇಷ ಅಭಿವೃದ್ಧಿಯು ಕಾಣುತಿರುವುದು. ಪ್ರಕೃತಿವಿಮರ್ಶೆ, ಕಥೆ, ಸಲ್ಲಾಪೋಪದೇಶ, ಓದುವುದು, ಈ ಪಾಠಗಳಲ್ಲಿ ಸಾಧ್ಯವಾದಾಗಲೆಲ್ಲ ಮನುಷ್ಯರಿಗೂ ದೇವರಿಗೂ ಇರುವ ಸಂಬಂಧವನ್ನು ತಿಳಿಸಲು ಪ್ರತ್ನಪಡುತಿರುವೆವು. ಈಗ ಅವರು ತಮ್ಮ ಸ್ನೇಹಿತರ ವಿಷಯದಲ್ಲಿ ಅನುತಾಪವನ್ನೂ, ತಮ್ಮ ಉಪಾಧ್ಯಾಯರ ವಿಷಯದಲ್ಲಿ ಪ್ರೀತಿಯನ್ನೂ, ಗೌರವವನ್ನೂ ತೋರ್ಪಡಿಸುತಿರುವರು. ಈ ಅಂಶಕ್ಕೆ ನನ್ನ ಅನುಭವದಿಂದ ಒಂದು ಉದಾಹರಣೆಯನ್ನು ಕೊಡುವೆನು. ನನ್ನ ಕೈಯ್ಯಲ್ಲಿ ಮೇಲಿನ ಎರಡು ತಿಪ್ಪೆಗಳನ್ನೂ ಒಳಗೊಂಡಿರುವ ಒಂದು ಜಾಯಿಕಾಯಿ ಇರುವುದು, ಈ ಹಣ್ಣು ನನ್ನಲ್ಲಿ ಬಂದಾಗ ಇನ್ನೂ ಒಣಗಿರಲಿಲ್ಲ. ಇದು ಈ ಪ್ರಾಂತ್ಯದಲ್ಲಿ ಅಪುರೂಪವಾದ ವಸ್ತುವು, ನಮ್ಮಲ್ಲಿರುವ ಒಂದು ಮಗುವಿನ ತಂದೆಯು ಇದನ್ನು ನೀಲಗಿರಿಯಿಂದ ತರಿಸಿದನು, ಮಗುವು ಅದನ್ನು ತನ್ನ ಉಪಾಧ್ಯಾಯನಿಗೋಸ್ಕರವೆಂದು ತಂದೆಯಿಂದ ತೆಗೆದುಕೊಂಡು ಮರುದಿವಸ ಅದನ್ನು ನನಗೆ ಕೊಟ್ಟಿತು. ಮಕ್ಕಳು ಇಂತಹ ಸಣ್ಣಸಣ್ಣ ಚಿಹ್ನೆಗಳಿಂದ ತಮ್ಮ ಉಪಾಧ್ಯಾಯರ ವಿಷಯದಲ್ಲಿ ಗೌರವವನ್ನೂ ಪ್ರೀತಿಯನ್ನೂ ಆಗಾಗ್ಗೆ ತೋರಿಸುತಿರುವರು. ನಾನು ಈ ಪಾಠಶಾಲೆಯಲ್ಲಿ ಹತ್ತುವರ್ಷದಿಂದಲೂ ಕೆಲಸ ಮಾಡುತಿರುವೆನು. ಹತ್ತುವರ್ಷದಿಂದಲೂ ಮಕ್ಕಳು ಅಲ್ಲಿ ಓದುತ್ತಿರುವರು ಅದರೆ ಮಕ್ಕಳಿಗೂ ಉಪಾಧ್ಯಾಯರಿಗೂ ಪರಸ್ಪರ ಪ್ರೀತಿಯನ್ನು ಸೂಚಿಸುವ ಇಂತಹ ಚಿಹ್ನೆಗಳು ಅಪುರೂಪವಾಗಿ ನನಗೆ ಗೋಚರವಾಗಿರುವುವು. ಅದುದರಿಂದ ಇವರಿಬ್ಬರಿಗೂ ಇರುವ ಸಂಬಂಧದಲ್ಲಿ ಉಂಟಾಗಿರುವ ಮೇಲು ಈಗ ಹೊಸದಾಗಿ ಏರ್ಪಟ್ಟಿರುವ ವಿದ್ಯಾಭ್ಯಾಸಕ್ರಮದಿಂದಲೇ ಎಂದು ನಾನು ಊಹಿಸುವೆನು. ಯಾವ ಪಾಠಶಾಲೆಯಲ್ಲಿ ಬಾಲಕರಿಗೂ ಉಪಾಧ್ಯಾಯರಿಗೂ ಈವಿಧವಾದ ಸಹೃದಯತೆ ಇರುವುದೋ ಆ ಪಾಠಶಾಲೆಯು ಒಳ್ಳೇ ಹೆಸರನ್ನು ಹೊಂದಬಹುದೆಂತಲೂ, ಅಲ್ಲಿನ ಬಾಲಕರು ಒಳ್ಳೇ ನಡತೆಯುಳ್ಳ ಮನುಷ್ಯರಾಗಬಹುದೆಂತಲೂ ನಾನು ಊಹಿಸುವೆನು.

ಈ ಹೊಸಕ್ರಮದ ವಿಷಯದಲ್ಲಿ ಮಕ್ಕಳ ತಾಯಿತಂದೆಗಳ ಅಭಿಪ್ರಾಯವನ್ನು ಸ್ವಲ್ಪಮಟ್ಟಿಗೆತಿಳಿಸಿ ನನ್ನ ಉಪನ್ಯಾಸವನ್ನು ಮುಗಿಸುವೆನು. ಈ ಮಾತಾಪಿತೃಗಳು ನಮ್ಮ ಪಾಠಶಾಲೆಯ ವಿಷಯದಲ್ಲಿ ಆಶ್ಚರ್ಯವನ್ನೂ, ಅಪನಂಬಿಕೆಯನ್ನೂ ತೋರ್ಪಡಿಸುತಿರುವರು. ಮಕ್ಕಳು ತಾವಾಗಿಯೇ ಪಾಠಶಾಲೆಗೆ ಓಡಿಬರುತ್ತಿರುವುದನ್ನು

ಕಂಡು ಆಶ್ಚರ್ಯಪಡುತಿರುವರು. ಮಕ್ಕಳು ಪಾಠಶಾಲೆಯಲ್ಲಿ ನಡೆಯುವ ವಿಷಯುಗಳನ್ನು ಮನೆಯಲ್ಲಿ ಹೇಳುವರಷ್ಟೆ, ಈ ವಿಷಯಗಳನ್ನು ಕೇಳಿ ತಾಯಿತಂದೆಗಳು ಪಾಠಶಾಲೆಯಲ್ಲಿ ಒರೀ ಆಟವೇ ಹೊರತು ವಿದ್ಯಾಭ್ಯಾಸವು ನಡೆಯುತಿಲ್ಲವೆಂದು ಊಹಿಸಿಕೊಂಡು ಅಪನಂಬಿಕೆಯನ್ನು ತೋರ್ಪಡಿಸುತಿರುವರು. ಇವರಲ್ಲಿ ಕೆಲವರು ಪಾಠಶಾಲೆಗೆ ಕೆಲವು ವೇಳೆ ಬರುವುದೂ ಉಂಟು. ಆಕಾಲಗಳಲ್ಲಿ ನಾನು ಅವರನ್ನು ತರಗತಿಗಳಿಗೆ ಕರೆದುಕೊಂಡು ಹೋಗಿ ಮಕ್ಕಳು ಮಾಡುತಿರುವ ಕೆಲಸಗಳನ್ನು ತೋರಿಸಿದೆನು. ಮಕ್ಕಳ ವಿದ್ಯಾಭ್ಯಾಸದಲ್ಲಿ ಓದುವುದು, ಬರೆಯುವುದು, ಅಂಕಗಣಿತ ಈ ಮೂರು ಅಂಶಗಳೇ ಅಲ್ಲ ಇರುವುದು, ಇವಕ್ಕಿಂತಲೂ ಮುಖ್ಯವಾದ ಇನ್ನೂ ಅನೇಕ ಅಂಶಗಳು ಇರುವುವೆಂದು ತಿಳಿಸಲು ಪ್ರಯತ್ನಪಟ್ಟೆನು. ಇವರಲ್ಲಿ ತಿಳಿವಳಿಕೆಯುಳ್ಳ ಅನೇಕರು ನಾನು ಹೇಳಿದ ಅಂಶಗಳಿಂದಲೂ, ಮಕ್ಕಳು ಮಾಡುತಿರುವ ಕೆಲಸಗಳಿಂದಲೂ, ತೃಪ್ತಿಯನ್ನು ಹೊಂದಿ ಹೊರಟುಹೋದರು. ಇನ್ನು ಕೆಲವರು ತಮ್ಮ ಮುಖಭಾವದಿಂದಲೂ, ತಲೆಯನ್ನು ಆಲ್ಲಾಡಿಸುವುದರಿಂದಲೂ, ಪಾಠಶಾಲೆಯಲ್ಲಿ ಎಲ್ಲವೂ ಸಮರ್ಪಕವಾಗಿಲ್ಲವೆಂತಲೂ ಇನ್ನು ಮುಂದೆ ತಮ್ಮ ಬಾಲಕರು ಈ ಪಾಠಶಾಲೆಯಲ್ಲಿರುವವರೆಗೂ ಅವರ ಅಭಿವೃದ್ಧಿಯನ್ನು ಎಚ್ಚರಿಕೆಯಿಂದ ನೋಡುತ್ತಿರುವೆವೆಂತಲೂ ತೋರ್ಪಡಿಸಿದರು. ಈ ಹೊಸ ಕ್ರಮವು ಸ್ಥಿರವಾಗಿ ನಿಲ್ಲಬೇಕಾದರೆ ಇಂತಹ ತಾಯಿತಂದೆಗಳನ್ನು ಅದರಕಡೆಗೆ ಆಕರ್ಷಿಸುವುದು ಆವಶ್ಯಕವು. ಇದಕ್ಕಾಗಿ ಒಂದು ಸಂಘವನ್ನೇರ್ಪಡಿಸಿ ಆ ಸಂಘಕ್ಕೆ ಮಕ್ಕಳ ತಾಯಿತಂದೆಗಳನ್ನು ಕರೆಸಿಕೊಂಡು ಅಲ್ಲಿ ಆಗಾಗ್ಗೆ ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಅಂಶಗಳನ್ನು ಕುರಿತು ಉಪನ್ಯಾಸಗಳನ್ನು ನಡೆಸುವುದಲ್ಲದೆ ಒಂದು ತರಗತಿಗೆ ಈ ಕ್ರಮಕ್ಕನುಸಾರವಾಗಿ ಅವರೆದುರಿಗೆ ಆಗಾಗ್ಗೆ ಪಾಠಗಳನ್ನು ನಡೆಸುವುದು ಆವಶ್ಯಕವೆಂದು ತೋರುವುದು. ಅಕ್ಷರಸ್ಥರಲ್ಲದ ಜನಗಳು ವಿಶೇಷವಾಗಿರುವ ಹಳ್ಳಿಗಳಲ್ಲಿ ಪಾಠಶಾಲೆಯ ತೋಟದಿಂದ ವ್ಯವಸಾಯಕ್ಕೆ ಉಂಟಾಗುವ ಪ್ರಯೋಜನವನ್ನು ತಿಳಿಸಿ ಅವರನ್ನು ಈ ಕ್ರಮದ ಕಡೆಗೆ ಆಕರ್ಷಿಸಬಹುದೆಂದು ತೋರುವುದು.

ಈ ಕ್ರಮದಿಂದ ಮುಂದೆ ಪಾಠಶಾಲೆಗಳಲ್ಲಿ ಓದುವ ಮಕ್ಕಳ ಸಂಖ್ಯೆಯು ಹೆಚ್ಚುವುದಾದರೆ ಇದನ್ನು ಸ್ಥಿರಪಡಿಸುವ ವಿಷಯದಲ್ಲಿ ಉಪಾಧ್ಯಾಯರೂ, ಮಕ್ಕಳ ತಾಯಿತಂದೆಗಳೂ ಪ್ರಯತ್ನಪಡುವುದು ಆವಶ್ಯಕವೆಂದು ತೋರುವುದು.

ಮಹನೀಯರೇ! ಬ್ರೂಬೆಲ್ಲನ ಕ್ರಮದ ಮುಖ್ಯಾಂಶಗಳನ್ನೂ ಈ ಕ್ರಮದಲ್ಲಿ ನನಗೆ ಉಂಟಾಗಿರುವ ಒಂದು ವರ್ಷದ ಅನುಭವವನ್ನೂ ತಮ್ಮ ಮುಂದಿಟ್ಟಿರುವೆನು ಈ ನನ್ನ ಪ್ರಯತ್ನದಿಂದ ಮಕ್ಕಳ ವಿದ್ಯಾಭ್ಯಾಸದಲ್ಲಿ ನಿರತರಾಗಿರುವ ನಿಮಗೆ ಯಾವುದಾದರೂ ಹೊಸ ಅಂಶಗಳು ಹೊಳೆದರೆ ನಾನು ಪಟ್ಟಿರುವ ಶ್ರಮಕ್ಕೆ ತಕ್ಕ ಪ್ರತಿಫಲವು ದೊರೆಯಿತೆಂದು ಭಾವಿಸುವೆನು.

ಗಣಿತ—(ಭಿನ್ನರಾಶಿ ಭಾಗಹಾರ).

ಉಪಕರಣ :—ರಟ್ಟುಗಳು ಮತ್ತು ಅವುಗಳನ್ನು ಸಮಭಾಗವಾಡಿದ ತುಂಡುಗಳು (ಪ್ರಕೃತಕ್ಕೆ)—ಕತ್ತರಿಸಿ 15 ಸಮಭಾಗ ಮಾಡಿದ ತುಂಡುಗಳು ಮತ್ತು ಒಂದು ಪೂರಾ ರಟ್ಟು.

ವಿಷಯ.	ಬೋಧನಕ್ರಮ.
ಹಳೇಪಾಠದ ಪರೀಕ್ಷೆ:—i ಭಿನ್ನರಾಶಿಯು ಗುಣಕಾರದವಿಷಯ. ii ಭಾಜ್ಯಭಾಜಕ ಭಾಗಲಬ್ಧಗಳ ವಿಷಯ.	$\frac{3}{4}\times\frac{1}{4}$; $\frac{3}{5}\times\frac{1}{5}$ ಇಂಥಾ ಬಾಯಿ ಲೆಕ್ಕಗಳನ್ನು ಹೇಳಿಸುವುದು. ಕೆಲವು ನಿದರ್ಶನಗಳಿಂದ ಇದನ್ನು ಜ್ಞಾಪಿಸುವುದು.
ಹೊಸಪಾಠ:—$1\frac{2}{5}\div 5$. ಭಿನ್ನರಾಶಿಯನ್ನು ಪೂರ್ಣಾಂಕದಿಂದ.	ರಟ್ಟಿನ ಮತ್ತು ರಟ್ಟಿನ ತುಂಡುಗಳ ಸಹಾಯದಿಂದ ಇದರ ಅರ್ಥವನ್ನು ವಿವರಿಸುವುದು.
ರಚನಾಕ್ರಮ :— 	ಈರೀತಿಯಾಗಿ ಕಪ್ಪು ಹಲಗೆಯಮೇಲೆ ಕಲಂಗಳನ್ನು ಬರೆದು ನಾಲ್ಕಾರು ಲೆಕ್ಕಗಳನ್ನು ತೋರಿಸಿಕೊಡುವುದು.
ಅಭ್ಯಾಸದ ಲೆಕ್ಕಗಳು :— II (i) $\frac{3}{4}\div 2=\frac{3}{8}$ (ii) $\frac{2}{5}\div 4=\frac{2}{15}$ (iii) $\frac{2}{7}\div 5=\frac{2}{35}$	ಮೇಲಿನಂತೆ ಕಲಂಗಳನ್ನು ಹಾಕಿಕೊಂಡು ಬಾಲಕರಿಂದ ಈ ಲೆಕ್ಕಗಳನ್ನು ಮಾಡಿಸುವುದು.

ವಿಧಿ:—ಭಾಜ್ಯದ ಅಂಶವನ್ನು ಭಾಗಲಬ್ಧದ ಅಂಶವನ್ನಾಗಿ ಬರೆದು, ಭಾಜ್ಯದ ಛೇದವನ್ನು ಭಾಜಕದಿಂದ ಗುಣಿಸಿ ಲಬ್ಧದ ಛೇದವನ್ನಾಗಿ ಬರೆವುದು.

ಅನೇಕ ಲೆಕ್ಕಗಳನ್ನು ಹಲಗೆಯುಮೇಲೆ ಬರೆದು ಉತ್ತರವನ್ನು ಹೇಳಿಸಿ ಬರೆದು ಎಲ್ಲವನ್ನೂ ಹೋಲಿಸುವಂತೆ ಮಾಡಿ ಈ ವಿಧಿಯನ್ನು ಹೇಳಿಸುವುದು.

III ಭಿನ್ನರಾಶಿಗಳನ್ನು ಭಿನ್ನರಾಶಿಗಳಿಂದ ಭಾಗಿಸುವುದು.

$\frac{3}{5} \div \frac{1}{7}$

ಪ್ರಕೃತಕ್ಕೆ ಸಾಧಕವಾದ ಅಂಶಗಳು.

(i) $6 = \frac{3}{5}$ ರ 5 ರಷ್ಟು ; $8 = \frac{3}{5}$ ರ 3 ರಷ್ಟು ; $4 = \frac{4}{5}$ ರ 4.

ಇದನ್ನು ಈ ಕೆಳಗಿನ ಕ್ರಮದಲ್ಲಿ ನಿದರ್ಶಿಸುವುದು.

4 ಎಂಬುದು 2 ರ ಎಷ್ಟರಷ್ಟು? ಎಂದರೆ 2 ನ್ನು ಎಷ್ಟರಿಂದ ಗುಣಿಸಿದರೆ 4 ಆಗುವುದು? ಎಂಬರೀತಿಯಲ್ಲಿಯಾಗಲೀ ಅಥವಾ $\frac{1}{3}$ ಎಂದರೆ 4 ನ್ನು 3 ಪಾಲು ಮಾಡಿದೆ ಎಂಬರೀತಿಯಲ್ಲಿಯಾಗಲೀ ದೃಢಪಡಿಸುವುದು.

$\therefore \frac{1}{3}$ ಎಂಬುದು 4 ರಲ್ಲಿ ಮೂರನೇ ಒಂದುಪಾಲು ಅಥವಾ 4 ಎಂಬುದು $\frac{1}{3}$ ರ 3 ರಷ್ಟು ?

(ii) ಯಾವುದಾದರೊಂದು ಸಂಖ್ಯೆಯನ್ನು ಎಷ್ಟರಿಂದ ಭಾಗಿಸಬೇಕೋ ಅದಕ್ಕಿಂತಲೂ ಹೆಚ್ಚಾದ್ದರಿಂದ ಭಾಗಿಸಿದರೆ ಬರುವ ತಪ್ಪು ಉತ್ತರವನ್ನು ಹೊಸಭಾಜಕವು ಸರಿಯಾದ ಭಾಜಕಕ್ಕಿಂತ ಎಷ್ಟರಷ್ಟು ಹೆಚ್ಚೋ ಅಷ್ಟರಿಂದ ಗುಣಿಸಿದರೆ ಉತ್ತರವು ಸರಿಯಾಗುವುದು.

i $80 \div 4 = (80 \div 20) \times 5 = 20$
ii $48 \div 6 = (48 \div 12) \times 2 = 8$
iii $50 \div 5 = (50 \div 25) \times 5 = 10$

ಇಂತಹ ಅನೇಕ ದೃಷ್ಟಾಂತಗಳಿಂದ ಪ್ರಕೃತ ವಿಷಯವನ್ನು ಸ್ಪಷ್ಟಪಡಿಸಿ ನಾಲ್ಕಾರು ಬಾಲಕರಿಂದ ಹೇಳಿಸಿ ಮುಂದಟ್ಟು ಮಾಡಿಸುವುದು.

ರಚನಾಕ್ರಮ :—

$\frac{3}{5} \div 4 = \frac{3}{20}$
$\frac{3}{20} \times 7 = \frac{21}{20}$ } $(\frac{3}{5} \div 4) \times 7$

ಮೇಲಿನ ಅಂಶಗಳ ಸಹಾಯದಿಂದ ಸ್ಪಷ್ಟಮಾಡಿಸುವುದು.

iv ಅಭ್ಯಾಸದ ಲೆಕ್ಕಗಳು :—

(1) $\frac{5}{6} \div \frac{3}{7} = (\frac{5}{6} \div 3) \times 7 = \frac{35}{18}$
(2) $\frac{3}{4} \div \frac{5}{9} = (\frac{3}{4} \div 5) \times 9 = \frac{27}{20}$

ವಿಧಿ :—ಭಾಜ್ಯದ ಅಂಶವನ್ನು ಭಾಜಕದ ಛೇದದಿಂದ ಗುಣಿಸಿ ಲಬ್ಧದ ಅಂಶವನ್ನಾಗಿಯೂ, ಭಾಜ್ಯದ ಛೇದವನ್ನು ಭಾಜಕದ ಅಂಶದಿಂದ ಗುಣಿಸಿ ಲಬ್ಧದ ಛೇದವನ್ನಾಗಿಯೂ ಮಾಡಬೇಕು.

ಕಪ್ಪುಹಲಗೆಯಮೇಲೆ 6—7 ಲೆಕ್ಕಗಳನ್ನು ಮಾಡಿ ಎಲ್ಲವನ್ನೂ ಹೋಲಿಸುವುದರಿಂದ ವಿಧಿಯನ್ನು ಹೇಳಿಸುವುದು.

v ರಚನಾಸಂಗ್ರಹ :—

$\frac{3 \times 9}{4 \times 5} = \frac{3}{4} \times \frac{9}{5} = \frac{27}{20}$

ಎಂದರೆ ಭಾಜಕವನ್ನು ತಲೆಕೆಳಗಾಗಿ ಮಾಡಿಕೊಂಡು ಭಿನ್ನರಾಶಿಯು ಗುಣಕಾರದಂತೆ ಮಾಡುವುದು, ಎಂಬುದನ್ನು ಮೇಲಿನ ವಿಧಿಯು ಸಹಾಯದಿಂದ ಹೊರಡಿಸುವುದು.

ಕೈದೋಟಮಾಡಿಸುವುದು. (ಹಿಂದಣ ಶೇಷ)

—:o:—

ಈ ಕೆಲಸವು ದೊಡ್ಡವರಿಗೂ ಚಿಕ್ಕವರಿಗೂ ಏಕರೀತಿಯಾಗಿ ಇಷ್ಟವಾಗಿರುವುದು. ನೆಲವನ್ನು ಆಗೆದು ಬಿತ್ತನೆಗೆ ಸಿದ್ಧಪಡಿಸುವುದು, ಗಿಡಗಳ ಬೆಳೆವಣಿಗೆಯನ್ನು ಕಾದುಕಾದು ನೋಡುವುದು, ಆ ಬೆಳೆವಣಿಗೆಗೆ ಅನುಕೂಲ ಪ್ರತಿಕೂಲಗಳನ್ನುಂಟುಮಾಡುವ ಗಾಳಿ, ಬೆಳಕು ಮತ್ತು ಕ್ರಿಮಿ ಮುಂತಾದುವುಗಳ ಕೆಲಸಗಳನ್ನು ಪರೀಕ್ಷಿಸುವುದು ಇವೆಲ್ಲಾ ಮಕ್ಕಳಿಗೆ ಸ್ವಾಭಾವಿಕವಾಗಿ ಮನೋಹರವಾಗಿರುವುದರಿಂದ ಪ್ರತಿಯೊಂದು ಪಾಠಶಾಲೆಯಲ್ಲಿಯೂ ಕೈದೋಟ ಮಾಡಿಸುವುದನ್ನು

ಇಟ್ಟುಕೊಳ್ಳಬೇಕು. ಇದಕ್ಕಾಗಿ ಉಪಾಧ್ಯಾಯರು ಸ್ವಲ್ಪ ಹೆಚ್ಚಾಗಿ ಕೆಲಸ ಮಾಡಬೇಕಾಗುವುದು. ಈ ದೇಶದಲ್ಲಿ ತೋಟಕ್ಕೆ ಬೇಕಾದಷ್ಟು ಭೂಮಿಯನ್ನು ಸ್ಕೂಲಿನಪತ್ತಿರ ಸಂಪಾದಿಸುವುದು ಕಷ್ಟವಲ್ಲ. ಹೀಗೆ ಬೇಕಾದಷ್ಟು ಸ್ಥಳವನ್ನು ಗೊತ್ತುಮಾಡಿಕೊಂಡು ಮಕ್ಕಳಿಂದ ಕೈದೋಟ ಮಾಡಿಸುವುದಕ್ಕೆ ಎಲ್ಲಾ ಉಪಾಧ್ಯಾಯರೂ ಯತ್ನಿಸಬೇಕು. ಪಾಠಶಾಲೆಗೆಲ್ಲಾ ಸೇರಿ ಒಂದೇ ತೋಟ ಸಾಕು. ಇದನ್ನು ಸಾಮಾನ್ಯವಾಗಿ ಎರಡುಭಾಗ ಮಾಡಬಹುದು. ತರಕಾರಿಯನ್ನು ಬೆಳೆಯುವ ಭಾಗ ಒಂದು; ಹೂಗಳನ್ನು ಬೆಳೆಯುವ ಭಾಗ ಇನ್ನೊಂದು; ತೋಟದಲ್ಲಿ ಒಂದೊಂದು ತರಗತಿಗೆ ಇಷ್ಟಿಷ್ಟು ಪಾತಿಗಳೆಂದು ಗೊತ್ತುಮಾಡಿ ಅವುಗಳನ್ನು ಆಯಾತರಗತಿಯ ಹುಡುಗರಿಗೆ ಹಂಚಿಕೊಡಬೇಕು. ಹೀಗೆ ಹಂಚಿಕೊಟ್ಟಮಾತ್ರಕ್ಕೆ ಒಬ್ಬರ ಪಾತಿಯಲ್ಲಿ ಇನ್ನೊಬ್ಬರು ಕೆಲಸವನ್ನು ಮಾಡಲೇಕೂಡದೆಂಬ ಅಭಿಪ್ರಾಯವು ಮಕ್ಕಳಿಗೆ ಹುಟ್ಟುವಂತೆ ಮಾಡಬಾರದು. ಸಮಯಬಂದಾಗ ಎಂದರೆ ಕಳೆಕೀಳುವುದು, ಒಕ್ಕಣೆ ಮಾಡುವುದು, ಬಿತ್ತುವುದು ಇಂತಹಕಾಲಗಳಲ್ಲಿ ಹುಡುಗರೆಲ್ಲ ಸೇರಿ ಒಟ್ಟಾಗಿ ತೋಟದ ಕೆಲಸವನ್ನು ಮಾಡುವಂತೆ ಮೊದಲಿನಿಂದಲೂ ಮಾಡಬೇಕು. ಪ್ರತಿದಿನವೂ ಪಾಠಕಾಲ ಅಥವಾ ಉಚಿತವಾದ ಇತರಕಾಲದಲ್ಲಿ 15—20 ನಿಮಿಷಗಳವರಿಗೆ ಪ್ರತಿ ತರಗತಿಯವರೂ ಈ ತೋಟದ ಕೆಲಸವನ್ನು ನೋಡಿಕೊಳ್ಳುವಂತೆ ಮಾಡಬೇಕು. ಹೇಗೆಂದರೆ—ರಾತ್ರಿ ಗಾಳಿಯಿಂದ ಬಗ್ಗಿಹೋದ ಗಿಡಗಳನ್ನು ನೆಟ್ಟಗೆ ನಿಲ್ಲಿಸುವುದು, ಹಬ್ಬಿಸತಕ್ಕ ಗಿಡಗಳಿದ್ದರೆ ಸರಿಯಾಗಿ ಹಬ್ಬಿಸುವುದು, ನೀರುಹಾಕುವುದು, ಮತ್ತು ಕಸ ತೆಗೆಯುವುದು, ಈರೀತಿಯಾಗಿ ಮಾಡುವುದು.

ಪ್ರತಿಸ್ಕೂಲಿನಲ್ಲೂ ಇಂಥಾ ಕೈದೋಟವೊಂದನ್ನು ಇಟ್ಟುಕೊಂಡಿರುವುದರಿಂದ ಮಕ್ಕಳಿಗೆ ಬೆಚ್ಚಾದ ಪ್ರಕೃತಿಸಂಸರ್ಗವು ದೊರೆಯುವುದು ಮಾತ್ರವಲ್ಲದೆ ಬೇರೆಯಾದ ಒಂದು ಅನುಕೂಲವೂ ಉಂಟು. ಅದೇನೆಂದರೆ ಸ್ಕೂಲಿನಲ್ಲಿ ಆಗಾಗೆ ನಡೆಯಿಸುವ ಪ್ರಕೃತಿವಿಮರ್ಶೆಯ ಪಾಠಕ್ಕೆ ವಿಷಯವನ್ನು ಒದಗಿಸಿಕೊಡುವುದು. ಈ ಪ್ರಕೃತಿವಿಮರ್ಶೆಯ ಪಾಠವನ್ನು ಪ್ರತಿದಿನವೂ ನಡೆಯಿಸುವುದಿಲ್ಲ. ವಾರಕ್ಕೆ ಎರಡು ಮೂರು ಗಂಟೆಯಕಾಲ ಮಾತ್ರ ನಡೆಯಿಸುವೆವು. ಈ ಪ್ರಕೃತಿವಿಮರ್ಶೆಗೆ ಕೈದೋಟಕ್ಕೆ ಸಂಬಂದಪಟ್ಟಿರುವ ವಿಷಯವೊಂದನ್ನು ಇಟ್ಟುಕೊಂಡರೆ ಮಕ್ಕಳಿಗೆ ಸಾಮಾನ್ಯವಾಗಿ ಪರಿಚಿತವಾಗಿರುವ ವಿಷಯವೊಂದನ್ನು ತೆಗೆದುಕೊಂಡು ಅದನ್ನು ವಿಶೇಷವಾಗಿ ವಿಚಾರಮಾಡಿದಂತಾಗುವುದು. ಕೈದೋಟದಲ್ಲಿ ನಡೆಯುತಕ್ಕ ಕೆಲಸವೆಲ್ಲಾ,

ಪ್ರಕೃತಿಗೆ ಸಂಬಂಧಪಟ್ಟುದೇ. ಆದರೂ ಕ್ಲಿಪ್ತವಾಗಿಯೂ, ಪೂರ್ಣವಾಗಿಯೂ ವಿಮರ್ಶೆಮಾಡುವುದಕ್ಕಾಗಿ ಕೈದೋಟದಲ್ಲಿ ನಾವು ಪ್ರಯತ್ನಿಸುವುದಿಲ್ಲ; ಆದುದರಿಂದ ಆಗಾಗ್ಗೆ ತೋಟದಲ್ಲಿರುವ ಪದಾರ್ಥಗಳಲ್ಲೊಂದನ್ನು ವಿಮರ್ಶೆಯ ಪಾಠಕ್ಕೆ ವಿಷಯವನ್ನಾಗಿ ಮಾಡುವುದರಿಂದ ಮಕ್ಕಳಿಗೆ ಅನೇಕ ವಸ್ತುಗಳ ವಿಷಯವಾಗಿ ಸಾಮಾನ್ಯಜ್ಞಾನವನ್ನೂ, ಅವುಗಳಲ್ಲಿ ಕೆಲವುಗಳ ವಿಷಯವಾಗಿ ವಿಶೇಷ ಜ್ಞಾನವನ್ನೂ ಉಂಟುಮಾಡಿದಂತಾಗುವುದು. ಇದಕ್ಕೆ ತೋಟಕ್ಕೆ ಸಂಬಂಧಪಡದ ವಿಷಯವನ್ನು ತೆಗೆದುಕೊಳ್ಳುವುದಾದರೆ ಕೆಲವು ತೊಂದರೆಗಳು ಸಂಭವಿಸಬಹುದು. ಉದಾಹರಣೆಗಾಗಿ ಯಾವುದಾದರೊಂದು ಸಸ್ಯವನ್ನು ತೆಗದುಕೊಳ್ಳೋಣ. ಇದನ್ನು ವಿಮರ್ಶೆಗೆ ವಿಷಯಮಾಡಿದರೆ ಆದಿಯಲ್ಲಿ ಬೀಜವು ಅಂಕುರಿಸಿ ಎಲೆ ಬಿಟ್ಟು ಸ್ವಲ್ಪಮಟ್ಟಿಗೆ ಬೆಳೆಯುವ ವರೆಗೆ ಬೇಗಬೇಗ ಬದಲಾಯಿಸುತ್ತಾ ಬರುವುದು. ಈ ಕಾಲದಲ್ಲಿ ವಿಮರ್ಶೆಗೆ ಅವಕಾಶವಿದೆ. ಆದರೆ ಸ್ವಲ್ಪಮಟ್ಟಿಗೆ ಬೆಳೆದಮೇಲೆ ವಿಶೇಷ ಬದಲಾವಣೆ (ವ್ಯತ್ಯಾಸ) ಗಳನ್ನು ತೋರಿಸದೆ ಕೆಲವುಕಾಲ ಇದ್ದಂತೆಯೇ ಇರುವುದು. ಈಕಾಲದಲ್ಲಿ ವಿಮರ್ಶೆಗೆ ಅವಕಾಶ ಕಡಮೆ. ಆದುದರಿಂದ ತೋಟದಲ್ಲಿಲ್ಲದ ಪದಾರ್ಥವನ್ನು ತೆಗೆದುಕೊಂಡರೆ ತೊಂದರೆಯಾಗುವುದು. ತೋಟದಲ್ಲಿದ್ದ ಪದಾರ್ಥವಾದರೆ ವಿಮರ್ಶೆಗೆ ಹೆಚ್ಚು ವಿಷಯವಿಲ್ಲದಕಾಲದಲ್ಲಿ ಅದರವಿಷಯವಾಗಿ ತಿಳಿಯಬೇಕಾದ ಅಲ್ಪವಾದ ಅಂಶಗಳನ್ನು ಕೈದೋಟದ ಪಾಠದಲ್ಲಿ ತಂದು ಮೊದಲಿನ ವಿಷಯದಲ್ಲಿ ವಿಮರ್ಶೆಗೆ ವಿಶೇಷ ಅವಕಾಶವಿರುವಂತೆ ಮೊಗ್ಗಾಗಿ ಅರಳಿ, ಹೀಚುದೋರಿಸಿ, ಕಾಯಿಹಣ್ಣುಗಳಾಗುವಾಗ ಪುನಃ ಅದನ್ನು ವಿಮರ್ಶೆಯ ಪಾಠಕ್ಕೆ ತೆಗೆದುಕೊಳ್ಳಬಹುದು. ಹೀಗೆ ಪ್ರತಿದಿನವೂ ಇಟ್ಟುಕೊಳ್ಳುವ ಈಕಾಲದ ಜತೆಗೆ ವಾರಕ್ಕೆ ಒಂದೆರಡಾವರ್ತಿ ತೋಟದಲ್ಲಿರತಕ್ಕ ಪದಾರ್ಥಗಳ ಸ್ವರೂಪವನ್ನು ಸಾಮಾನ್ಯವಾಗಿ ತಿಳಿಸುತ್ತ ಬರಬೇಕು. ಹೀಗೆ ತಿಳಿಸುವುದರಲ್ಲಿ ಮಕ್ಕಳಿಗೆ ಉಪಯುಕ್ತವಾದ ಅಂಶಗಳು ಗೊತ್ತಾಗುವಂತೆಯೂ, ಬುದ್ಧಿಗೆ ತಕ್ಕಮಟ್ಟಿಗೆ ಸಂಸ್ಕಾರವಾಗುವಂತೆಯೂ ನೋಡಿಕೊಳ್ಳಬೇಕು.

ಕೈದೋಟಕ್ಕೆ ಸಂಬಂಧಪಟ್ಟಿರುವ ವಸ್ತುವನ್ನೇ ಪ್ರಾಯಶಃ ವಿಮರ್ಶೆಯ ಪಾಠಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದರೆ ಸಸ್ಯಗಳನ್ನೇ ನಿಗೆದುಕೊಳ್ಳಬೇಕೆಂದು ತಿಳಿಯಬಾರದು. ತೋಟಕ್ಕೆ ಸಂಬಂಧಪಟ್ಟ ಸಸ್ಯಭಿನ್ನವಾದ ಸಂದರ್ಭಗಳನ್ನೂ ತೆಗೆದುಕೊಳ್ಳಬಹುದು. ನಾಯಿಕೊಡೆ, ಕಳೆ, ದುಂಬಿ, ಹುಳುವಣ್ಣು ಮುಂತಾದುವನ್ನೂ ತೆಗೆದುಕೊಳ್ಳಬಹುದು.

ಕೈದೋಟದ ಕೆಲಸವನ್ನು ಬಿಟ್ಟು ಪ್ರಕೃತಿವಿಮರ್ಶೆಯನ್ನು ಮಾತ್ರ ಇಟ್ಟು ಕೊಂಡರೆ ಮಕ್ಕಳಿಗೆ ಪ್ರಕೃತಿಸಂಸರ್ಗವು ಸಾಲದೆಹೋಗುವುದು ಮಾತ್ರವಲ್ಲದೆ, ಮಕ್ಕಳ ದೇಹದಾರ್ಢ್ಯ ವಿಷಯದಲ್ಲಿಯೂ ನಡತೆಯವಿಷಯದಲ್ಲಿಯೂ ಆಗಬೇಕಾದ ಪ್ರಯೋಜನವು ಪೂರ್ಣವಾಗಿ ಆಗದೆ ಹೋಗುವುದು.

ಕೈದೋಟಮಾಡಿಸುವವರು ತಿಳಿಯಬೇಕಾದ ಕೆಲವು ಅಂಶಗಳಿವೆ. ಅವು ಯಾವುವೆಂದರೆ :—

1. ಸಣ್ಣದಾಗಿ ಆರಂಭಮಾಡಬೇಕು. ದೊಡ್ಡದಾಗಿ ಪ್ರಾರಂಭಿಸಿ ಮಧ್ಯದಲ್ಲಿ ಆಧೈರ್ಯಪಟ್ಟು ಬಿಡುವುದು ತಕ್ಕದ್ದಲ್ಲ. ಇದರಿಂದ ತೋಟಕ್ಕಾಗಿ ಸ್ಥಳವನ್ನು ಚಿಕ್ಕದಾಗಿಯೇ ತೆಗೆದುಕೊಳ್ಳಬೇಕೆಂದು ಅರ್ಥವಲ್ಲ. ಮೊದಲೇ ವಿಸ್ತಾರವಾದ ಸ್ಥಳವನ್ನು ಸಂಪಾದಿಸಬೇಕು. ಆದರೆ ಅಷ್ಟನ್ನೂ ವ್ಯವಸಾಯಕ್ಕೆ ಉಪಯೋಗಿಸಬಾರದು. ಉಳಿದ ಸ್ಥಳವನ್ನು ಹುಲ್ಲು ಬೆಳೆಯುವುದಕ್ಕೆ ಬಿಟ್ಟರೂ ಸುಲಭವಾಗಿ ಅಂದವಾಗಿರುವಂತೆ ಇಟ್ಟುಕೊಳ್ಳಬಹುದು.

(2) ಕೈದೋಟದ ಪಾಠವು ಇದುವರೆಗೆ ಇದ್ದ ಪಾಠದ ಜತೆಗೆ ಇನ್ನೊಂದು ಪಾಠವಾಯಿತೆಂಬ ತಪ್ಪು ಅಭಿಪ್ರಾಯವನ್ನು ಬಿಡಬೇಕು. ಕೈದೋಟದ ಕೆಲಸವು ಪಾಠಶಾಲೆಗೆ ಸೇರಿದರೆ ಪಾಠಶಾಲೆಯಲ್ಲಿ ನಡೆಯುವ ಕೆಲಸವನ್ನೆಲ್ಲ ಪ್ರಾಯಶಃ ತೋಟದ ಕೆಲಸಕ್ಕೆ ಅನ್ವಯಿಸಿ ಆಯಾಪಾಠಗಳಿಂದ ಆದುವರೆಗೆ ದೊರೆಯುತಿದ್ದ ಪ್ರಯೋಜನಕ್ಕಿಂತಲೂ ಹೆಚ್ಚು ಪ್ರಯೋಜನವು ದೊರೆಯಬೇಕೆಂದು ತಿಳಿಯಬೇಕು. ಆದುವರೆಗೆ ಮಕ್ಕಳು ನಿಸ್ಸಾರವೆಂದು ತಿಳಿದಿದ್ದ ಪಾಠಗಳೆಲ್ಲಾ ಅವರಿಗೆ ಕೈದೋಟದ ಕೆಲಸ ಬಂದಮೇಲೆ ಸಾರವತ್ತಾಗಿ ತೋರುವಂತೆ ಇರಬೇಕು.

(3) ತೋಟದಲ್ಲಿ ಅಭಿನವವಾದ ಮತ್ತು ಆಶ್ಚರ್ಯಕ್ಕೆ ಮಾತ್ರ ವಿಷಯವಾದ ಪದಾರ್ಥಗಳನ್ನು ಬೆಳೆಯಿಸಬಾರದು.

(4) ಆಯಾಋತುಧರ್ಮಕ್ಕನುಸಾರವಾಗಿ ಬೆಳೆಗಳನ್ನಿಟ್ಟುಕೊಳ್ಳಬೇಕು.

(5) ಈ ತೋಟದಲ್ಲಿ ಬೆಳೆಯುವ ಗಿಡಗಳಿಂದ ಮುಂದಿನ ವರ್ಷದ ಕೆಲಸಕ್ಕಾಗಿ ಬೀಜಗಳನ್ನು ಕೂಡಿಡಬೇಕು.

(6) ಒಂದು ವರ್ಷದಲ್ಲಿ ಹಾಕಿದ ಬೆಳೆಗಳನ್ನೇ ಮುಂದಿನ ವರ್ಷದಲ್ಲಿಯೂ ಹಾಕಿದರೆ ಬೆಳೆಯು ತೃಪ್ತಿಕರವಾಗುವುದಿಲ್ಲವಾದ್ದರಿಂದ ಬೆಳೆಗಳ ಪರಿವರ್ತನೆಗೆ ಗಮನಕೊಡಬೇಕು.

(7) ಸುಗ್ಗಿಕಾಲದಲ್ಲಿ ಬಂದ ಫಲವನ್ನು ಅನುಕೂಲವಾದರೆ ಇತರರೊಡನೆ ಬೆರೆದು ಅನುಭವಿಸಬೇಕು. ಇದರಿಂದ ತನ್ನ ಪದಾರ್ಥವು ಎಂದನೆ ತಿಂಡಿಯು ತನಗೇ ಎಂಬ ಮಕ್ಕಳಲ್ಲಿರುವ ದುರಭಿಮಾನವು ಹೋಗುವುದು.

(8) ಕೈದೋಟದ ಕೆಲಸವು ಸ್ಕೂಲಿನ ಹೊರಗಡೆ ನಡೆಯುತಕ್ಕುದಾದುದರಿಂದ ಮಗುವು ನಿರ್ಮಲವಾದ ಗಾಳಿಯಲ್ಲಿ ಹೆಚ್ಚುಕಾಲವನ್ನು ಕಳಿಯುವಂತಾಗುವುದು. ಇದು ಆರೋಗ್ಯಕರ. ಇಷ್ಟುಮಾತ್ರವೇ ಅಲ್ಲದೆ ತೋಟದ ಕೆಲಸದಲ್ಲಿ ಮಕ್ಕಳು ತಮ್ಮ ಅಂಗಗಳನ್ನು ವಿವಿಧವಾಗಿ ಉಪಯೋಗಿಸಬೇಕಾಗುವುದು. ಇದರಿಂದ ಅವರಲ್ಲಿ ಸಹಜವಾಗಿರುವ ಚಟುವಟಿಕೆಯು ಹೊರಪಡುವುದಕ್ಕೆ ಉಚಿತವಾದ ಅವಕಾಶದೊರೆಯುವುದರಿಂದ ಚಟುವಟಿಕೆಯು ಒರಟುತನವಾಗಿಯಾಗಲೀ ಚೇಷ್ಟೆಯಾಗಿಯಾಗಲೀ ಪರಿಣಮಿಸುವುದು ತಪ್ಪುವುದು. ಮತ್ತು ಈ ಕೆಡಸದಿಂದ ಅಂಗಗಳಿಗೆ ಪುಷ್ಟಿ ಬಂದು ದೇಹದಾರ್ಢ್ಯಕ್ಕೆ ಕಾರಣವಾಗುವುದು.

ತೋಟದಲ್ಲಿ ಸುಂದರವಾದ ಪುಷ್ಪಗಳೂ, ಮನೋಹರವಾದ ಜೀವಜಂತುಗಳೂ ಕಾಣಿಸಿಕೊಳ್ಳುತಲೇ ಇರುವುದರಿಂದ ಮಗುವಿನ ನೇತ್ರೇಂದ್ರಿಯವು ತಾನಾಗಿ ಕೆಲಸಮಾಡುವಂತಾಗಿ ಇಂದ್ರಿಯಶಕ್ತಿಯು ಹೆಚ್ಚುವುದಕ್ಕೂ ಅವಧಾನವು ಬೆಳೆಯುವುದಕ್ಕೂ ಕಾರಣವಾಗುವುದು. ಇದರಂತೆಯೇ ಇತರ ಇಂದ್ರಿಯಗಳಿಗೂ ತೋಟದ ಮೂಲಕ ತಕ್ಕಮಟ್ಟಿಗೆ ಕೆಲಸ ದೊರೆಯುವುದು.

ಪ್ರಕೃತಿಗೆ ಸೇರಿದ ಪದಾರ್ಥಗಳನ್ನು ಪ್ರೀತಿಸಿ ಅವುಗಳಿಗೆ ತಕ್ಕ ಉಪಚಾರವನ್ನು ಮಾಡುವುದರಿಂದ ಮಗುನಿಗೆ ಪ್ರಕೃತಿಯಲ್ಲಿರುವ ಅದ್ಭುತಪದಾರ್ಥಗಳಲ್ಲಿಯೂ, ಸುಂದರವಾದ ಪದಾರ್ಥಗಳಲ್ಲಿಯೂ ಅಭಿನಿವೇಶವು ಹೆಚ್ಚಿ ಮಗುವಿನ ಹೃದಯವು ಪರಿಪಕ್ವವಾಗುವುದು. ಈ ಹೃದಯಪರಿಪಾಕದಿಂದ ನಯವು ಹುಟ್ಟುವುದು. ಸೂಕ್ಷ್ಮವಾಗಿದ್ದ ಬಿತ್ತದಿಂದಲೂ ನೋಡಿಕೊಂಡು ಸಾಕಿರುವ ಗಿಡದ ಹೂವನ್ನು ಯಾರುತಾನೇ ನಿಷ್ಕರುಣಿಗಳಾಗಿ ಕಿವಿಚಿಹಾಕುವರು! ಈ ತೋಟದಲ್ಲಿ ಸಿಕ್ಕುವ ಅಲ್ಪವಾದ ಕ್ರಿಮಿಗಳನ್ನು ನೋಡಿ ಅವುಗಳ ಸ್ವರೂಪವನ್ನು ವಿಚಾರಪೂರ್ವಕವಾಗಿರುವ ಮಗುವು ಮುಂದಕ್ಕೆ ದುರ್ಬಲವಾಗಿರುವ ಪ್ರಾಣಿಗಳನ್ನು ಆಟಕ್ಕಾಗಿ ಸೆಳೆದು ಕೊಂದುಹಾಕುವುದು ಅಸಂಭವ.

ಮೇಲೆ ಹೇಳಿದಂತೆ ಪ್ರಕೃತಿಯಲ್ಲಿನ ಪದಾರ್ಥಗಳನ್ನು ಉಪಚಾರ ಮಾಡುವುದು ಅಭ್ಯಾಸವಾಗುತ ಹುಡುಗರಿಗೆ ಜತೆಗಾರರಲ್ಲೂ ನೆರೆಹೊರೆಯವರಲ್ಲೂ ಉಪಕಾರಬುದ್ಧಿಯು ಹುಟ್ಟುವಂತಾಗುವುದು.

ತೋಟದಲ್ಲಿರುವ ಪದಾರ್ಥಗಳಿಂದ ಮಗುವಿನ ಇಂದ್ರಿಯಗಳಿಗೆ ಕೆಲಸ ದೊರೆಯುವುದೆಂದು ಹೇಳಿದ್ದಾಯಿತು. ಈ ಕಾರಣದಿಂದ ಮಗುವಿನ ಕುತೂಹಲವು ಹೆಚ್ಚಿ ಆಯಾವಸ್ತುಗಳ ಸ್ವರೂಪವನ್ನು ತಿಳಿಯುವಂತಾಗುವುದು. ಇದರಿಂದ ಲೋಕವ್ಯವಹಾರಕ್ಕೆ ಉಪಯುಕ್ತವಾದ ಎಷ್ಟೋ ಅಂಶಗಳು ಗೊತ್ತಾಗುವುವು. ಪಾಠಶಾಲೆಗೆ ಸಂಬಂಧಪಟ್ಟ ಕೈದೋಟವೊಂದಿದ್ದರೆ ಸಣ್ಣ ಮಕ್ಕಳಿಗೆ ಮಾತ್ರ ಪ್ರಯೋಜನವೆಂದು ಭಾವಿಸಬಾರದು. ದೊಡ್ಡತರಗತಿಯವರಿಗೂ ಇದರಿಂದ ಫಲವುಂಟು. ನೀಲಣತರಗತಿಗಳಲ್ಲಿ ನಡೆಯುವ ವಸ್ತುಪಾಠ, ವ್ಯವಸಾಯ, ಉದ್ಭಿಜಶಾಸ್ತ್ರ ಇಂಥಾ ಪಾಠಗಳಿಗೆಲ್ಲ ಎಷ್ಟೋ ಸಹಾಯವುಂಟು.

ಪ್ರಕೃತಿಸಂಚಾರ (ನೇಚರ್‌ರ್ಯಾಂಬಲ್ಸ್)

ಪ್ರಕೃತಿ ಸಂಸರ್ಗವು ಸಾಕಾದಷ್ಟು ಮಕ್ಕಳಿಗೆ ಉಂಟಾಗಬೇಕಾದರೆ ಕೈದೋಟದ ಕೆಲಸ ಸಹ ಸಾಲದೆ ಹೋಗುವುದು; ಅದುದರಿಂದ ಮಕ್ಕಳನ್ನು ಆಗಾಗ್ಗೆ ಹೊರಗಡೆಗೆ ಕರೆದುಕೊಂಡುಹೋಗಿ ತೋಟ, ತೋಪು ಅಥವಾ ಸಣ್ಣಕಾಡು ಇಂಥ ಕಡೆಗಳಲ್ಲಿ ಮಗುವಿನ ದೃಷ್ಟಿಗೆ ಗೋಚರವಾಗುವ ಪದಾರ್ಥಗಳ ಸ್ವರೂಪವನ್ನು ಆಯಾಯವು ವಿಚಾರಪೂರ್ವಕವಾಗಿ ತಿಳಿಯುವಂತೆ ಮಾಡಬೇಕು.

ಅಂತೂ ಪ್ರಕೃತಿಬೋಧೆಯಲ್ಲಿ ಒಟ್ಟು ಮೂರುಭಾಗಗಳಾದುವು;—

(i) ಕೈದೋಟದ ಕೆಲಸ.

(ii) ಪ್ರಕೃತಿವಿಮರ್ಶೆ.

(iii) ನೇಚರ್‌ರ್ಯಾಂಬಲ್ಸ್.

ಸ್ಕೂಲಿನಲ್ಲಿ ನಡೆಯತಕ್ಕ ಪಾಠಗಳನ್ನೆಲ್ಲಾ ಇವುಗಳಲ್ಲಿ ಯಾವುದಾದರೊಂದಕ್ಕೆ ಹೊಂದಿಸಿಕೊಂಡು ನಡೆಯಿಸಬೇಕು. ಹಾಗೆ ಹೊಂದಿಸುವುದರಿಂದ ಪ್ರಕೃತಿಬೋಧೆಯಲ್ಲಿ ಉಂಟಾದಜ್ಞಾನವು ಪರಿಷ್ಕೃತವಾಗುವುದು. ಹೊಂದಿಸಲ್ಪಟ್ಟ ಪಾಠಕ್ಕಾದರೋ ಪ್ರತ್ಯಕ್ಷವಾದ ಪದಾರ್ಥಗಳ ಸಂಬಂಧ ಬರುವುದರಿಂದ ಮಕ್ಕಳಿಗೆ ಪಾಠದಲ್ಲಿ ಹೆಚ್ಚು ಆದರವೂ, ಪಾಠದಿಂದ ಹೆಚ್ಚು ಪ್ರಯೋಜನವೂ ಉಂಟಾಗುವುದು.

(B. O. S)

ವಿದ್ಯಾಭ್ಯಾಸದ ಸಮೀಚಾರಗಳು.

ನಮ್ಮ ದೇಶದಲ್ಲಿ ಆಯುರ್ವೇದ (ವೈದ್ಯ) ವಿದ್ಯಾಭ್ಯಾಸವು ಬಹಳ ಖಿಲವಾಗುತ್ತ ಬರುತ್ತಿರುವದನ್ನು ನೋಡಿ ನಮ್ಮ ಸರಕಾರದವರು ಈ ವಿದ್ಯೆಯನ್ನು ಅಭಿವೃದ್ಧಿಗೆ ತರಬೇಕೆಂಬ ಉದ್ದೇಶದಿಂದ ಬರುವ ಜನವರಿಯಿಂದ ಮೈಸೂರು ರಾಜಧಾನಿಯಲ್ಲಿ ಒಂದು ಆಯುರ್ವೇದ ಪಾಠಶಾಲೆಯನ್ನು ಏರ್ಪಡಿಸುವರು. ಇದು ಬಹಳ ಸಂತೋಷಕರವೂ ಅನುಕೂಲವೂ ಆದ ಏರ್ಪಾಡೇ ಸರಿ. ಆಂಗ್ಲೇಯ ವೈದ್ಯಶಾಸ್ತ್ರಕ್ಕಿಂತ ನಮ್ಮ ವೈದ್ಯಶಾಸ್ತ್ರದಲ್ಲಿ ಇಲ್ಲಿನ ರೋಗಿಗಳಿಗೆ ಸುಲಭವಾಗಿಯೂ, ಒಗ್ಗತಕ್ಕದ್ದಾಗಿಯೂ ಇರುವ ಅನೇಕ ಚಿಕಿತ್ಸಾಕ್ರಮಗಳು ಹೇಳಲ್ಪಟ್ಟಿವೆ.—ಯಾವವಿದ್ಯೆಯೇ ಆಗಲಿ ತಕ್ಕ ಪ್ರೋತ್ಸಾಹದಿಂದ ಪ್ರಕಾಶಕ್ಕೆ ಬರುವದರಲ್ಲಿ ಸಂಶಯವಿಲ್ಲ. ಪ್ರಕೃತ ಏರ್ಪಾಡಾಗುವ ಪಾಠಶಾಲೆಯಲ್ಲಿ ಓದುವ ವಿದ್ಯಾರ್ಥಿಗಳಿಗೆ 8—10—12 ರೂಗಳನ್ನು ವೇತನ ಕೊಡುವರು. ಈ ಪಾಠಶಾಲೆಗೆ ಸೇರಬೇಕಾದ ವಿದ್ಯಾರ್ಥಿಗಳು ಸಂಸ್ಕೃತಭಾಷಾ ಪರಿಜ್ಞಾನವನ್ನು ಚನ್ನಾಗಿ ಪಡೆದಿರಬೇಕು. ಈ ಪಾಠಶಾಲಾ ಕಾರ್ಯನಿರ್ವಾಹಕ್ಕಾಗಿ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿದೆ.

ಸಂಗೀತಶಾಸ್ತ್ರವು ವೃದ್ಧಿಗೆ ಬರಲೆಂಬ ತಾತ್ಪರ್ಯದಿಂದ ಸರಕಾರದವರು ಮ॥ ರಾ॥ ಹೆಚ್. ಪಿ. ಕೃಷ್ಣರಾವ್ ಬಿ. ಎ. ಯವರನ್ನು ಮೈಸೂರು ನಾರ್ಮಲ್‌ಸ್ಕೂಲು ಸಹಾಯೋಪಾಧ್ಯಾಯರಾಗಿ ನೇಮಿಸಿರುವರು. ಇವರು ಸರಕಾರದ ಅಪ್ಪಣೆಯ ಮೇರೆಗೆ ನಾರ್ಮಲ್‌ಸ್ಕೂಲು ಟ್ರೈನಿಂಗ್ ತರಗತಿಗಳ ವಿದ್ಯಾರ್ಥಿಗಳಿಗೆ ಗಾನವನ್ನು ಹೇಳಿಕೊಡುವದಲ್ಲದೆ, ಪ್ರತಿನಿತ್ಯವೂ (ಸ್ಕೂಲ್ ದಿನದಲ್ಲಿ) ಸಾಯಂಕಾಲ $5\frac{1}{2}$ ಘಂಟೆಯಿಂದ $6\frac{1}{2}$ ಘಂಟೆಯ ವರಿಗೆ ಎಲ್ಲಾ ಜನಗಳಿಗೂ (ಪಬ್ಲಿಕ್) ಅನುಕೂಲಿಸುವಂತೆ ತರಗತಿಯನ್ನು ಏರ್ಪಡಿಸಿಕೊಂಡು ಗಾನವಿದ್ಯೆಯನ್ನು ಶಾಸ್ತ್ರೀಯವಾಗಿ ಪಾಠ ಹೇಳುತ್ತಿರುವರು.

ಈ ಮೈಸೂರು ದೇಶದಲ್ಲಿರುವ ಸರಕಾರದ ಎಲ್ಲಾ ಸ್ಕೂಲುಗಳಲ್ಲಿಯೂ ಬಾಲಕರಿಗೆ ಮತ ಮತ್ತು ನೀತಿಯ ಸಂಬಂಧವಾದ ವಿಷಯಗಳನ್ನು ಬೋಧಿಸಬೇಕೆಂದು ಸರಕಾರದವರು ನಿಯಮಿಸಿರುತ್ತಾರೆ. ಅದರಂತೆ ಈ ನವಂಬರ್ ತಿಂಗಳ ಪ್ರಾರಂಭದಿಂದ ಕೆಲವು ಸ್ಕೂಲುಗಳಲ್ಲಿ ಬೋಧನೆಯು ಮೊದಲು ಮಾಡಲ್ಪಟ್ಟಿತು. ಅದರೆ ಮತವಿಜಾನದಲ್ಲಿ ಯಾವ ಗ್ರಂಥವನ್ನು ಆರಂಭಿಸಬೇಕೆಂಬುದು ಇನ್ನೂ ನಿರ್ಧರಿಸಲ್ಪಟ್ಟಿಲ್ಲ. ಈಗ ನಮ್ಮ ದೇಶದಲ್ಲಿ ಮತಬೋಧನೆಯೆಂಬುದು ಬಹಳ ಕಷ್ಟವಾಗಿರುವದು ಏಕೆಂದರೆ ನಮ್ಮ ಸ್ಕೂಲುಗಳ ಯಾವ ತರಗತಿಯಲ್ಲಿನೋಡಿದರೂ ಹುಡುಗರಲ್ಲಿ ಒಂದೇ ಮತದವರು ಇರುವದಿಲ್ಲ. ಶೈವ ವೈಷ್ಣವಾದಿ ಮತಭೇದಗಳೂ ಆ ಪ್ರತಿಯೊಂದರಲ್ಲಿಯೂ ದ್ವೈತಾದ್ವೈತ ವಿಶಿಷ್ಟಾದ್ವೈತಾದಿ ಅನೇಕ ಒಳಭೇದಗಳು ಇವೆ. ಇವೆ

ಲ್ಲಕ್ಕೂ ಸಾಧಾರಣವಾದ ವಿಷಯುಗಳನ್ನು ಉಪದೇಶಿಸುವ ಪಕ್ಷದಲ್ಲಿ ಬಾಲಕರಿಗೆ ಅವರ ಮತದ ತತ್ವವು ಏನು ತಿಳಿಯುಬರುವದು? ಮತ್ತು ಅಂಥ ಸಾಧಾರಣವಾದ ವಿಷಯುಗಳು ಕೂಡ ಪರ್ಯಾಲೋಚಿಸಿದಲ್ಲಿ ಒಹಳ ಸ್ವಲ್ಪವಾಗಿಯೇ ಇರುವವು. ಅವುಗಳು—ಜಗತ್ತಿಗೆಲ್ಲ ಕಾರಣವು ಒಂದಿರುವದು, ಅವನೇ ದೇವರು. ಆ ಭಗವಂತನಲ್ಲಿ ಭಕ್ತಿಯಿಡು, ಪೂಜಿಸು, ಧ್ಯಾನಿಸು ಇಂಥಾ ವಿಷಯುಗಳು ಸರಕಾರದಿಂದ ನಿಯುಮಿತವಾದೀ ಮತಬೋಧನಾ ಕ್ರಮವನ್ನು ಈಗಿನ ಸ್ಕೂಲುಗಳಲ್ಲಿ ಸರಿಯಾಗಿಯೂ ಲೋಕಕ್ಕೂ ಸರಕಾರಕ್ಕೂ ಸಮರ್ಪಕವಾಗಿಯೂ ಹೇಗೆ ನೆರವೇರಿಸಬೇಕು? ಎಂಬುದನ್ನು ಅನೇಕ ವಿದ್ವಾಂಸರು ವಿಚಾರಮಾಡುತ್ತಿರುವರು.

ರಾಜಧಾನಿಯಲ್ಲಿರುವ ಸಂಸ್ಕೃತ ಮಹಾಪಾಠಶಾಲೆಯು ಅಧಿಕಾರವು ಪೂರ್ವದಲ್ಲಿ ಮಃ॥ ರಾ॥ ಅರ್ಕಾಡು ಶ್ರೀನಿವಾಸಾಚಾರ್ಯರ ಕಾಲದಲ್ಲಿ ಮುಜರಾಯಿ ಇಲಾಖೆಗೆ ಸೇರಿ ಇದುವರೆಗೂ ಹಾಗೆಯೇ ನಡೆಯಿತು. ಈಗ ಆ ಇಲಾಖೆಯಿಂದ ತಪ್ಪಿಸಿ ಅರಮನೆ ಇಲಾಖೆಗೆ ಸೇರಿಸಲ್ಪಟ್ಟಿದೆ.

ಮೈಸೂರು ನಾರ್ಮಲ್‌ಸ್ಕೂಲಿನಲ್ಲಿ ಪಂಡಿತಪರೀಕ್ಷಾ ಕಕ್ಷ್ಯೆಯು ಪ್ರವೇಶ ಪರಿಕ್ಷೆಯು ಈ ನವಂಬರ್ 21 ನೇ ತಾರೀಕಿನಲ್ಲಿ ನಡೆಯಿತು. ಪರೀಕ್ಷೆಗೆ ಹನ್ನೊಂದು ಮಂದಿ ಬಂದಿದ್ದರು. ಎಂದಿನಂತೆ ಸಾಮಾನ್ಯವಾಗಿ ಸಂಸ್ಕೃತಭಾಷಾ ವಿಷಯುದಲ್ಲಿ ಮೂರು ಘಂಟೆಯು ಕಾಲದ ಒಂದು ಪ್ರಶ್ನಪತ್ರಿಕೆಯೂ, ಸಂಸ್ಕೃತ ಕರ್ಣಾಟಕ ಭಾಷೆಗಳ ಪರಿವರ್ತನೆಯು ವಿಷಯುದಲ್ಲಿ ಎರಡು ಘಂಟೆಯು ಕಾಲದ ಒಂದು ಪ್ರಶ್ನಪತ್ರಿಕೆಯೂ ಕೊಡಲ್ಪಟ್ಟವು. ಆದರೆ ಪರೀಕ್ಷೆಗೆ ಬಂದವರಲ್ಲಿ ಅನೇಕರು ಇದಕ್ಕೆ ತಕ್ಕಂತೆ ಸಿದ್ಧರಾಗಿ ಬಂದಿರಲಿಲ್ಲ. ಈ ಪ್ರವೇಶ ಪರೀಕ್ಷೆಗೆ ಬರುವವರು ಯಾವದಾದರೂ ಹತ್ತು ಸರ್ಗ ಕಾವ್ಯಗಳು, ಎರಡು ಚಂಪು, ಎರಡು ನಾಟಕ, ಅಮರಕೋಶ, ಚಂದ್ರಾಲೋಕ, ಭಂಡಾರ್ಕರ ವ್ಯಾಕರಣಗ್ರಂಥಗಳು, ಇವುಗಳನ್ನು ಚನಾಗಿ ವ್ಯಾಸಂಗಮಾಡಿ, ಪರಶ್ಲೋಕಾರ್ಥವನ್ನು ಮಾಡುವದಲ್ಲದೆ ಸಂಸ್ಕೃತ ಭಾಷೆಯಲ್ಲಿಯೇ ಅದನ್ನು ತಕ್ಕಮಟ್ಟಿಗೆ ಅನುವಾದ ಮಾಡುವಷ್ಟು ಶಕ್ತಿಯನ್ನು ಪಡೆದಿರಬೇಕೆಂಬ ಸಂಗತಿಯು ಪೂರ್ವದಲ್ಲಿಯೇ ಈ ವಿದ್ಯಾದಾಯಿನಿಯಲ್ಲಿ ಪ್ರಕಟಿತವಾಗಿತ್ತು. ಅದನ್ನು ಜನಗಳು ನೋಡಲಿಲ್ಲ, ಅದದಂತೆ ಆಚರಿಸಲೂ ಇಲ್ಲವೆಂದು ತೋರುವದು. ತಕ್ಕ ಯತ್ನಗಳಿಂದ ಯಾವಕಾರ್ಯಗಳಾದರೂ ಕೈಗೂಡುವವು ಎಂಬ ಅಂಶವು ಎಲ್ಲರಿಗೂ ವಿದಿತವಾಗಿಯೇ ಇರುವದು.

ಪುಂದಃಕವಿಯುಶಃಪ್ರಾರ್ಥೀಗಮಿಷ್ಯಾಮ್ಯುಪಹಾಸ್ಯತಾಂ।
ಪ್ರಾಂಶುಲಭ್ಯೇಫಲೇಲೋಭಾದುದ್ಬಾಹುರಿವವಾಮನಃ॥

ಎಂದು ಕಾಳಿದಾಸನೂ ಹೇಳಿರುವನಲ್ಲವೆ!

ದ್ವೈತಮತ ಸಿದ್ಧಾಂತ ಸ್ಥಾಪಕರಾದ

ಶ್ರೀಮನ್ಮಧ್ವಾಚಾರ್ಯರ ಚರಿತ್ರೆ.

ಈ ಗ್ರಂಥವು ಪ್ರಮಾಣಬದ್ಧವಾಗಿ ಸಾರಂಪರ್ಯವಾಗಿ ಬಂದಿರುವ "ಮಧ್ವ ವಿಜಯಾದಿ" ಗ್ರಂಥಗಳ ಆಧಾರದಮೇಲೆ ಶ್ರೀ ಮಧ್ವಾಚಾರ್ಯರ ಅವತಾರಾದಿ ಚರಿತ್ರವೇನು, ಅವರ ಕೃತ್ಯವೇನು ಇವುಗಳನ್ನು ಸುಖಬೋಧವಾಗಿ ಸಂಸ್ಕೃತ ಜ್ಞಾನವಿಲ್ಲದವರಿಗೆ ತಿಳಿಯುಪಡಿಸಲೋಸುಗ ಅವತರಿಸಿದ ಗ್ರಂಥವಾಗಿದೆ. ಆಚಾರ್ಯರ ಚರಿತ್ರೆಯಲ್ಲದೆ ಅವರು ನಿರ್ಮಿಸಿದ ಗ್ರಂಥಗಳ ಮುಖ್ಯಾಂಶವೇನು, ಮತ್ತು ಪ್ರೌಢಪ್ತಿಸ್ಥಗಳಿಗೆ ಉಪಯುಕ್ತವಾದ ಇತರ ವಿಷಯಗಳೇನು ಎಲ್ಲಾ ಈ ಗ್ರಂಥದಲ್ಲಿ ಅಡಗಿಸಲ್ಪಟ್ಟಿದೆ. ಈ ಗ್ರಂಥದ ವಿಷಯಾನುಕ್ರಮಣಿಕೆ, ಏನೆಂದರೆ:—

1 ನೆಯ ಅಧ್ಯಾಯ.

1. ಕಲಿಯುಗದ ಆದಿಭಾಗದಿಂದ ಶಂಕರಾಚಾರ್ಯರ ಅವತಾರದ ವರೆಗೆ ಇದ್ದ ಕಾಲಸ್ಥಿತಿ. 2. ಭೀಮಸೇನದೇವರಿಗೂ ಮತ್ತು ಮಣಿಮಂತನಿಗೂ ಪರಸ್ಪರ ಉಂಟಾದ ವೈಷಮ್ಯಕ್ಕೆ ಕಾರಣ. 3. ಅದ್ವೈತಮತ ಸ್ಥಾಪಕರಾದ ಶ್ರೀ ಶಂಕರಾಚಾರ್ಯರ ಸಂಕ್ಷೇಪಚರಿತ್ರೆ. 4. ಶ್ರೀ ಮಧ್ವಾಚಾರ್ಯರ ವಂಶವೃಕ್ಷ.

2 ನೆಯ ಅಧ್ಯಾಯ.

1. ಅಚ್ಯುತಪ್ರೇಕ್ಷ ತೀರ್ಥರ ಚರಿತ್ರೆ. 2. ಶ್ರೀಮಧ್ವಾಚಾರ್ಯರ ಪೂರ್ವಾವತಾರಗಳಾದ ವಾಯು ಮತ್ತು ಭೀಮಾವತಾರಗಳ ಕ್ರಮಗಳು. 3 ಶ್ರೀ ವೇದವ್ಯಾಸರ ಉತ್ಪತ್ತಿಗೆ ಕಾರಣ. 4. ಶ್ರೀ ಮಧ್ವಾಚಾರ್ಯರ ಅವತಾರಕ್ಕೆ ಕಾರಣ. 5. ಶ್ರೀ ಮಧ್ವಾಚಾರ್ಯರು ಜನಿಸುವರೆಂಬುದಕ್ಕೆ ತೋರಿದ ಸೂಚನೆ.

3 ನೆಯ ಅಧ್ಯಾಯ.

1. ಆಚಾರ್ಯರ ಮಾತಾಪಿತೃಗಳು, ಇವರ ಗುಣಾತಿಶಯಗಳು ಮತ್ತು ಪಾಚಕಕ್ಷೇತ್ರದ ವಿವರಣೆ. 2. ಮಧ್ವಾಚಾರ್ಯರ ಜನನ, ಜಾತಕರ್ಮ ಮತ್ತು ನಾಮಕರಣ ಕ್ರಮಗಳು. 3. ಬಾಲಲೀಲೆ. 4. ಅಕ್ಷರಾಭ್ಯಾಸ.

4 ನೆಯ ಅಧ್ಯಾಯ.

1. ಉಪನಯನ. 2. ಗುರು ಶುಶ್ರೂಷೆ ಮತ್ತು ವಿದ್ಯಾಭ್ಯಾಸ. 3. ಸನ್ಯಾಸಾಶ್ರಮ ವಿಚಾರವು. 4. ಆಶ್ರಮಸ್ವೀಕಾರ ಪ್ರವೇಶ. 5 ನೆಯ ಅಧ್ಯಾಯ.

1. ಆಚಾರ್ಯರ ವಿದ್ಯಾವ್ಯಾಪ್ತಿಯೆ ಮತ್ತು ಪರಮತಖಂಡನೆ. 2. ಆಶ್ರಮ ಸ್ವೀಕಾರ ಪ್ರಶಂಸೆ ಮತ್ತು ದೇಶಸಂಚಾರ. 3. ಆಚಾರ್ಯರ ಬದರಿಕಾಗಮನ. 4. ಶ್ರೀ ಮಧ್ವಾಚಾರ್ಯರ ಅವತಾರಾದಿ ಕಾಲನಿರೂಪಣ. 6 ನೆಯ ಅಧ್ಯಾಯ.

1. ಮಧ್ವಾಚಾರ್ಯರಿಂದ ರಚಿಸಲ್ಪಟ್ಟ ಗ್ರಂಥವಾಲಿಕೆ. 2. ಅಷ್ಟಮಠಾಧಿಪತಿಗಳು ಮತ್ತು ಆಚಾರ್ಯರು ಮಠಾಧಿಪತಿಗಳಿಗೆ ದಯಪಾಲಿಸಿದ ಪ್ರತಿಮೆಗಳ ವಿವರ. 3. ದ್ವೈತಮತ ಸಿದ್ಧಾಂತ ಪ್ರಶ್ನೋತ್ತರಾವಳಿ. 4. ಮಧ್ವಾಚಾರ್ಯರು ಬದರಿಕಾಶ್ರಮಕ್ಕೆ ದಯಮಾಡಿಸಿದ ಮೇಲೆಬಂದ ಆಚಾರ್ಯರ ವಂಶವೃಕ್ಷ.

ಅನವಟ್ಟ ರಾಮರಾವ್—ಗ್ರಂಥಕರ್ತ—

ಕ್ಯ. 0—8—0 ಹಳೇ ಅಗ್ರಹಾರ [illegible].

ಹೊಸದಾಗಿ ಸುಧಾರಿಸಲ್ಪಟ್ಟ ದಿವ್ಯ ಶಾಯಿ.

ಶಾಯಿ ಕೆಟ್ಟದ್ದಾದರೆ ಹಣವನ್ನು ಹಿಂದಿರಿಗಿ ಕೊಡುವೆವು.

3—10—0 ಕ್ಕೆ ಸಣ್ಣ "ಬಿ" ಸಿಸ್ಟಮ್ ಪಾಕೇಟ್ ಟೈಂಪೀಸು, ಹಾಗೂ 300 ದಿವ್ಯ ಶಾಯಿ ಪಟ್ಣಗಳು ಸಿಗುವವು ಟಪಾಲು ಖರ್ಚು ಮಾಫೀ.

6—10—0 ಕ್ಕೆ ಮಜಬೂತ ಸಿಸ್ಟಮ್ ರಾಸ್ಕೋಪ್ ವಾಚ್ ಹಾಗೂ 500 ದಿವ್ಯ ಶಾಯಿ ಪಟ್ಣಗಳು ಸರಪಳಿ ಹೋಕಾಯಂತ್ರ ಸ್ಪ್ರಿಂಗ, ಕನ್ನಡಿ, ಪೆಟ್ಟಿಗೆ ಸಹವಾಗಿ ಸಿಗುವವು. ಟಪಾಲು ಖರ್ಚು ಮಾಫೀ.

1—10—0 ಕ್ಕೆ ದಿವ್ಯ ಶಾಯಿ ಪಟ್ಣಗಳು 100, ಕಾರ್ಡುಗಳು 100, 1 ಸೂಕ್ಷ್ಮ ದರ್ಶಕ ಯಂತ್ರ, 1 ಹೋಕಾಯಂತ್ರ, 1 ಲೋಹಕುಂಬಿಕ, ಟಪಾಲು ಖರ್ಚು ಮಾಫೀ.

ರಘುನಾಥನಾವ ಮತ್ತು ಕಂಪನಿ ಹಿಪ್ಪರಗಿ, ಡಿ. ಬಿಜಾಪೂರ.

ಸದ್ವೃತ್ತರತ್ನಾವಳೀ ಪ್ರಕಾಶಕನಾದ ಸಜ್ಜನವಿಧೇಯನ ವಿಜ್ಞಾಪನೆ.

ಈ ಗ್ರಂಥವು ಸನಾತನಾರ್ಯಧರ್ಮಗಳ ಸರ್ವಾಂಶಗಳನ್ನೂ ಒಳಕೊಂಡಿದೆ. ೧ ಸದಾಚಾರ, ೨ ಹಿತಾಹಿತ, ೩ ಇಂದ್ರಿಯ, ಎಂಬ ಮೂರು ಸರಗಳಿಂದಲೂ, ೪ ಆರ್ಯಧರ್ಮಸಾರವೆಂಬ ಮಧ್ಯಮಮಣಿಯಿಂದಲೂ ಸೇರಿ, ಧರ್ಮಶಾಸ್ತ್ರ ವೈದ್ಯಶಾಸ್ತ್ರ ಯೋಗಶಾಸ್ತ್ರ ಮಂತ್ರಶಾಸ್ತ್ರಗಳೆಂಬ ಚತುಸ್ಸಮುದ್ರಗಳಿಂದ ಉದ್ಧೃತವಾದ ಸಾರವಚನರತ್ನಹಾರವೆನಿಸಿ, ಗ. ವೈ. ಕೃಷ್ಣಾಚಾರ್ಯರಿಂದ ಸುಲಭ ಸಂಸ್ಕೃತ ಭಾಷೆಯಿಂದ ಗ್ರಥಿತವಾಗಿ, ನುಡಿಗನ್ನಡದ ಟೀಕೆಯೊಡನೆ ಮುದ್ರಿಸಲ್ಪಡುತ್ತಿದೆ. ಇದನ್ನು ಓದಿ ಆಪ್ರಕಾರವೇ ಆಚರಿಸುವ ಬಾಲರಿಗೂ, ಮುಖ್ಯವಾಗಿ ಬಾಲಿಕೆಯರಿಗೂ ಸದಸದ್ವಿವೇಕವು, ಶುದ್ಧಭಾಷಾಜ್ಞಾನವು, ಆಗುವದಲ್ಲದೆ ಲೋಕನೀತಿ ದೇಹತತ್ತ್ವಜ್ಞಾನವು, ಸನಾತನಾರ್ಯಧರ್ಮಬೋಧವು, ಇಂದ್ರಿಯಜಯವು, ಮನೋಧೈರ್ಯವು, ಆಯುರಾರೋಗ್ಯಲಾಭವೂ, ತಾನಾಗಿಯೇ ಸಿದ್ಧಿಸುವುವು. ಆ ಗ್ರಂಥವಲ್ಲಿ ಈಗ ೧ ನೆಯ ಸದಾಚಾರಸರದ ಪ್ರಥಮಭಾಗವಾದ ದೀರ್ಘಾಯುಸ್ಸೂತ್ರ ಈ ಪುಸ್ತಕವು ಸರ್ವಸದಾಚಾರಗಳನ್ನೂ, ಲೋಕನೀತಿಗಳನ್ನೂ, ಸರ್ವಧರ್ಮಗಳನ್ನೂ, ಒಳಕೊಂಡಿರುವುದರಿಂದ ಪಾಠಹೇಳುವ ಉಪಾಧ್ಯಾಯರಿಗೆಲ್ಲರಿಗೂ ವಿಷಯಬೋಧನಕ್ಕೆ ಅತ್ಯಂತೋಪಯುಕ್ತವಾಗಿರುವುದು. ಒಂದು ಭಾಗಮಾತ್ರ ಮುದ್ರಿತವಾಗಿ ಕ್ರಯಕ್ಕೆ ಸಿದವಾಗಿದೆ. ಇದರ ಬೆಲೆ ೪ ಆಣೆ ವಿ. ಪಿ. ೨ ಆಣೆ.

ಇದರಲ್ಲಿರುವ ವಿಷಯಗಳು:—ಪ್ರಾತಃಪ್ರವರ್ತನ, ಶೌಚ, ಆಚಮನ, ವ್ಯಾಯಾಮ, ಸ್ನಾನ, ಯಜನ, ಲೋಕಾನುವರ್ತನ, ಒಪಿಸ್ಸಂಚಾರಕ್ರಮಗಳು, ಸರ್ವಸಾಮಾನ್ಯನೀತಿ, ಮನೋವಾಕ್ಕಾಯನಿಕ್ಷಣಕ್ರಮ, ಅಧ್ಯಯನ, ಗುರುಶುಶ್ರೂಷಾಕ್ರಮ, ಮಾತಾಪಿತೃಸೇವೆ, ಅನ್ನಪಾನವಿಧಿ, ಬ್ರಹ್ಮಚರ್ಯ, ಪುರುಷಧರ್ಮ ಸ್ತ್ರೀಧರ್ಮ, ದಂಪತಿಧರ್ಮ, ಬುದ್ಧಿಯ ಶುದ್ಧಿವೃದ್ಧಿ, ಪ್ರಕೃತಿಪುರುಷವಿವೇಚನೆ, ಲೋಕಪುರುಷಸಾಮ್ಯ, "ಜೀವಾತ್ಮಪರಮಾತ್ಮವಿವೇಕ" ಎಂಬೀವಿಷಯಗಳಲ್ಲದೆ ಆದಿಯಲ್ಲಿಯೂ ಅಂತ್ಯದಲ್ಲಿಯೂ ಸರ್ವಸಾರಭೂತವಾದ ಸರ್ವದೇವಸ್ತವವೆಂಬ ಭಗವತ್ಪಾರ್ಥನೆಯು ಚಿಕ್ಕಮಕ್ಕಳಿಗು ಬಾಯಿಪಾಠಕ್ಕರ್ಹವಾಗಲೆಂದು ಸೇರಿಸಲ್ಪಟ್ಟಿದೆ. ಮಕ್ಕಳ ದೀರ್ಘಾಯುಸ್ಸನ್ನು ಬಯಸುವ ಧರ್ಮಜ್ಞರೆಲ್ಲರೂ ಮನೆಗೊಂದು ಪುಸ್ತಕವನ್ನಾದರೂ ತೆಗೆದುಕೊಂಡೋದಿಸುತ್ತ, ಆನ್ಯೋನ್ಯೋಪಕಾರವೆಂಬೀ ಸ್ವಧರ್ಮವನ್ನು ಬೆಳಸಬೇಕೆಂದು ಪ್ರಾರ್ಥನೆ. ವಿಳಾಸ - ಜಿ. ಕೆ. ತಿಮ್ಮಣ್ಣಾಚಾರ್ಯ

೩೦ ನೆಯ ಮನೆ, ೪ ನೆಯ ಬೀದಿ ಚಾಮರಾಜೇಂದ್ರಪೇಟೆ ಬೆಂಗಳೂರು.

ಶ್ರೀಸಾಮ್ರಾಜ್ಞಿ ಪೆನ್ಸಿಲ್ ಪೆಟ್ಟಿಗೆ!

ಪ್ರೊಟ್ಟಂಕ್ಕೆ ೧ ಮಹತ್ತ್ವ ಹೆಸರುಗೊಂಡಿತು ಮಂಗ! ೧ ಗ್ರಾಹಕ ಕಿಸ್ಲೆ

ಹಿಂದೂಸ್ಥಾನದಲ್ಲಿ ಎಲ್ಲಾ ಕಡೆಯಲ್ಲಿಯೂ ಪ್ರಸಿದ್ಧಿಗೊಂಡಿರುವ ಉತ್ತಮೋತ್ತಮವಾದ ನಮ್ಮ ನೀಲಿ, ಹಳದಿ, ಕೆಂಪು, ಜಾಂಬಳಿ, ಹಸರು, ಕಪ್ಪು ಮುಂತಾದ ಪೆನ್ಸಿಲ್ಲುಗಳನ್ನು ೩ ಆಣೆಗೆ ತರಿಸಿಕೊಳ್ಳುವರಿಗೆ ೧೦೦ ಪೊಡ್ಡಸ್ಟೈಜಿನ ಫ್ಯಾನ್ಸಿ ಪೋಸ್ಟ್‌ಕಾರ್ಡ್‌ಗಳನ್ನೂ, ೬ ಆಣೆಯುಮೇಲೆ ತುಂಬೂಲದ ಜೊತೆಗೆ ಹುಷಿಕೊಳ್ಳುವ ತುಂಬೂಲ ಪಿಣಾರ ಹಬ್ಬಿ ೧. ಅಥವ H. B. ಪೆನಸಲ್ ಡಜ್ಜ ೧. ೪ ಆಣೆ ಮೇಲೆ ೧೦೦ ಫ್ಯಾನ್ಸಿಕವರ್‌ಗಳು, ಅಥವ ಗಂಧದ ಚಮರಂಗದ ಜೊತೆ, ೧೦ ಆಣೆಮೇಲೆ ಫೌಂಟೆನ್ ಪೆನ್ (ಬಂದೂಸಲ ಖರೀದಿ ತುಂಬಿದರೆ ೫೦,೦೦೦ ಕಬ್ಬಗಳನ್ನು ಬರೆಯಬಹುದು.) ೧ ರೂಪಾಯಿಮೇಲೆ ಕ್ರಿಸ್ಟಗಂಧದ ಗಿಳಿಯ ಆಕಾರದ ಬೀಸಣಿಗೆ ೧. ೨ ರೂಪಾಯಿಮೇಲೆ ಯಾವಾಗಲೂ ಜೇಬಿನಲ್ಲಿಯೇ ಇರಿಸಿಕೊಳ್ಳತಕ್ಕ ಭೂಪಾಯಿನೆ (ಬೇಕಾದಷ್ಟು ವಿಷಯಗಳನ್ನು ಘಾಟಿಸಿಕೊಳ್ಳಬಹುದು) ೨ ರೂ. ೧೨ ಜೆ ಮೇಲೆ ಬಂದು ಆಫೀಸ್ ಟೈಂಪೀಸ್ ಗಡಿಯಾರ, ೪ ರೂ. ಮೇಲೆ ಪೂನಾದಲ್ಲಿ ಮನೋವೇಧಕ ಪ್ರಸ್ಸಿನಲ್ಲಿ ಅಚ್ಚಾದ ೧೫೪ ಸುಂದರವಾದ ಚಿತ್ರ ಪಠಗಳು, ೬ ರೂ. ಮೇಲೆ ತರಿಸಿದರೆ ಸುಂದರವಾಗಿಯೂ ಮತ್ತು ಬಹಳ ದಿವಸಗಳು ಬಾಳಿಕೆ ಬರುವವಾಗಿರುವ ಬಂದು ಡಸ್ಕ್ರೀಪ್ ಸಿಸ್ಟಂ ಲಿನರ್‌ಮಾಚಿನ್ನೂ ಈ ಮೇರಿಗೆ ಬಹುಮಾನವಾಗಿ ಕೊಡಲ್ಪಡುತ್ತೆ. ಬಹಳ ಖರ್ಚು ಬೇರೆ.

ಬೆಕ್ಕೊಕ್ಕಬೆಳ್ಳಿಯ ಪಟಿಗೆ ಗುರುತಿಗಳು.

ನಮ್ಮ ೧೨ ಆಣೆಯ ಶಾಯಿಗ್ರಾಹಕರಿಗೆ ಉತ್ತಮವಾದ ೫ ಗುಂಡಿಗಳು ಪುಕಟ!!

ಹಿಂಗು! ಹಿಂಗು!! ಹಿಂಗು!!!

ಮಿಶ್ರಣರಹಿತವಾಗಿ ಶುದ್ಧ ನಿರ್ಯೋಷಿಯಾಗಿ ಸುಗಂಧವುಳ್ಳದ್ದು. ಗ್ರಾಹಕರ ಮನಸ್ಸಿಗೆ ಅನುಕೂಲವಾಗುವಂತೆ ೬ ತೊಲೆಯ ಡಬ್ಬಿ ೧ ಕ್ಕೆ ವ್ಯಯ ೪ ಆಣೆ ಇಟ್ಟಿರುವೆವು. ಒಬ್ಬಗೆ ೨೪ ತೊಲೆಯ ಡಬ್ಬಿ ಕೊಳ್ಳುವರಿಗೆ ೧—೪—೦ ಮಾತ್ರ.

ಲಾವಾ—ತಡ್ಡು, ಇಸಬು, ಬಜಿ ಮೊದಲಾದ ಎಲ್ಲಾ ತರ್ಹದ ಚರ್ಮರೋಗಗಳಿಗೆ ಅನುಭವಸಿದ್ಧ ಮುಲಾಮು. ಡಬ್ಬಿಗೆ ರೂ ೦—೫—೦

ದೇಶೀಯ ವನಸ್ಪತಿಯ ಅದ್ಭುತ ಚಮತ್ಕಾರ! — ದಂತರಕ್ಷಕ! — ಡಬ್ಬಿಗೆ ಆಣೆ ನಾಲ್ಕು. ಅನುಭವ ನೋಡಿರಿ!!

ಹಲ್ಲುಗಳಿಗೆ ಹುಳಿ ಹಿಡಿಯುವುದು, ವಸಡುಗಳು ಬೀಗುವುದು, ವಸಡುಗಳಿಂದ ರಕ್ತ ಸೋರುವುದು, ಮೊದಲಾದ ಹಲ್ಲುಜೀನೆಗಳು ತೀವ್ರವಾಗಿ ಗುಣ!

ಫೋಟೋ ಎನ್ಲ್ಯಾರ್ಜಿಂಗ್ ನೂತನ ಚಿತ್ರಗಳು ರೂ. ೪, ೨, ೧, ಬೆಲೆಯ ಖಾಯಿಯಗ್ರಾಹಕರಿಗೆ ೧೨೫, ೬೦, ೨೫ ರಂತೆ ಪುಕಟ!!

ಪತ್ರಿಕಾಕರ್ತರ ಉತ್ತಮ ಅಭಿಪ್ರಾಯವಿವೆ. ಹೆಚ್ಚಿನ ವಿವರಗಳಿಗೆ ಪತ್ರ ಬರೆಯಲಪೇಕ್ಷಿಸುವವರು ೧ ಆಣೆಯ ಸ್ಟ್ಯಾಂಪು ರವಾನಿಸಿದರೆ ವಿವರಗಳು ಎಲ್ಲಾ ತರದ ಕಾಯಿಯೂ ಜೊಡ್ಡ ಕ್ಯಾಟಲಾಗೂ ಪುಕಟ ರವಾನಿಸಲ್ಪಡುವುದು.

ಗಣಪತಿ ನಾಗಪ್ಪ—ತಾರೀಬಾಗಿಲ್ ಪೋ. ಹೊನ್ನಾವರ, ಬಲ್ಲ ಕಾನರಾ

Edited and Published by B. Subba Rao, B. A. Mysore,
Vidadayini Office, Mysore.

To be Continued
in
NEXT Roll.

END

END

END

END